ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆ

(ಹೊಸಪೇಟೆ ತಾಲ್ಲೂಕನ್ನು ಪರಿಗಣಿಸಿ)

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬುಡಕಟ್ಟು ಅಧ್ಯಯನ ವಿಭಾಗಕ್ಕೆ

ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ

ಸಂಶೋಧಕಿ

ವಿಜಯಲಕ್ಷ್ಮಿ ಮಲ್ಲಣ್ಣ

ಮಾರ್ಗದರ್ಶಕರು

ಡಾ. ಎ. ಎಸ್. ಪ್ರಭಾಕರ್

ಹಿರಿಯಶ್ರೇಣಿ ಅಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೭-೨೦೦೮

ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆ

(ಹೊಸಪೇಟೆ ತಾಲ್ಲೂಕನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕಿ

ವಿಜಯಲಕ್ಷ್ಮಿ ಎಂ.

ಮಾರ್ಗದರ್ಶಕರು

ಡಾ. ಎ.ಎಸ್. ಪ್ರಭಾಕರ

ಹಿರಿಯಶ್ರೇಣಿ ಅಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮

ದೃಢೀಕರಣ ಪತ್ರ

ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆ (ಹೊಸಪೇಟೆ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ವಿಜಯಲಕ್ಷ್ಮಿ ಎಂ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಎ.ಎಸ್.ಪ್ರಭಾಕರ
ಹಿರಿಯಶ್ರೇಣಿ ಅಧ್ಯಾಪಕರು ಹಾಗೂ
ಮಾರ್ಗದರ್ಶಕರು
ಬುಡಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 15/11/08

ಪ್ರಮಾಣ ಪತ್ರ

ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆ (ಹೊಸಪೇಟೆ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ **ಡಾ. ಎ.ಎಸ್.ಪ್ರಭಾಕರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಸಮಾಜವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ವಿಜಯಲಕ್ಷ್ಮಿ ಎಂ.
ಸಂಶೋಧಕಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : 15/11/02

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ವಿಧಾನ

೧

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ವಿಧಾನ

ಪೀಠಿಕೆ

ಭಾರತೀಯ ಸಂಸ್ಕೃತಿಯು ಹಲವಾರು ಸಮುದಾಯಗಳ ಹಾಗೂ ಯುಗಗಳ ಸಾಮೂಹಿಕ ಕೊಡುಗೆಯಾಗಿದೆ. ನಾವು ಇಂದು ಯಾವುದನ್ನು ಭಾರತೀಯ ಸಂಸ್ಕೃತಿ ಎಂದು ಹೆಸರಿಸುತ್ತೇವೆಯೋ ಅದು ವಾಸ್ತವವಾಗಿ ವಿವಿಧ ಸಮುದಾಯಗಳ ಕೊಡುಗೆಗಳಿಂದ ರೂಪುಗೊಂಡು ನಿಂತಿರುವುದು. ಭಾರತ ವಿವಿಧ ಜನ ಸಮುದಾಯಗಳ ಹಾಗೂ ಅವರ ಆಚಾರ ವಿಚಾರಗಳ ಸಂಗ್ರಹವಾಗಿಬಿಟ್ಟಿದೆ. ಹಾಗೂ ಅನೇಕ ಸಮುದಾಯಗಳನ್ನು ಸಾಮಾಜಿಕ ವೈಶಿಷ್ಟ್ಯಗಳ ಸಮ್ಮಿಶ್ರಣವಾಗಿದೆ. ಅದೇ ರೀತಿಯಾಗಿ ವೈವಿಧ್ಯಮಯವಾದ ಬದುಕನ್ನು ಒಳಗೊಂಡ ಜನ ಜಾತಿಗಳು, ಬುಡಕಟ್ಟುಗಳು ಸಹಸ್ರಾರು ಸಂಖ್ಯೆಯಲ್ಲಿ ವಾಸಿಸುತ್ತಿವೆ. ಅವರಂತೆ ಹಕ್ಕಿಪಿಕ್ಕಿಯವರೆಂದು ಹೆಸರಿಸುವ ಈ ಸಮುದಾಯದ ಜನರು ಅಲೆಮಾರಿಗಳಾದ ಇವರು ವಿಶಿಷ್ಟ ಸಂಸ್ಕೃತಿಯಲ್ಲಿ ಉಸಿರಾಡುತ್ತಿದ್ದಾರೆ.

ಭಾರತದಾದ್ಯಂತ ನೆಲೆಸಿರುವ ಸಮುದಾಯಗಳಲ್ಲಿ ಹಲವು ಬಗೆಯ ಜಾತಿ ಸಮುದಾಯಗಳು ಕಂಡುಬರುತ್ತವೆ. ಜಾತಿ ಪದ್ಧತಿಯಿಂದ ವೃತ್ತಿ ವಿಭಾಗ ಅಥವಾ ಕೆಲಸಗಳ ನೇಮಕವು ಖಂಡಿತವಾಗಿ ವಿನಾಶಕಾರಿಯಾಗಿದೆ. ಉದ್ಯೋಗವು ನಿಂತ ನೀರಲ್ಲ. ಅದರಲ್ಲಿ ತೀವ್ರವಾದ ಹಾಗೂ ಆಕಸ್ಮಿಕವಾದ ಬದಲಾವಣೆಗಳಾಗುತ್ತಲೇ ಇರುತ್ತವೆ. ಹೀಗೆ ಬದಲಾವಣೆಗಳಾಗುತ್ತಿರುವಾಗ ವ್ಯಕ್ತಿಗಳು ತಮ್ಮ ವೃತ್ತಿಯನ್ನು ಬದಲಾಯಿಸುವ ಸ್ವಾತಂತ್ರ್ಯ ಅವಶ್ಯಕವಾಗುತ್ತದೆ. ಬದಲಾಗುವ ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಾತಂತ್ರ್ಯವಿಲ್ಲದಿದ್ದರೆ, ಅವರಿಗೆ ಜೀವನೋಪಾಯವೇ ಅಸಾಧ್ಯವಾಗುವುದು. ಜಾತಿಪದ್ಧತಿಯಲ್ಲಿ ಇಂತಹ ಸ್ವಾತಂತ್ರ್ಯವಿಲ್ಲ. ತಮ್ಮ ಜಾತಿಗೆ ಹೊಸದಾದ ವೃತ್ತಿಯನ್ನು ಕೈಗೊಳ್ಳುವ ಬದಲಾಗಿ ಉಪವಾಸ ಬೀಳುವುದ ಗತಿಯಾದರೆ ಅದಕ್ಕೆ ಮೂಲ ಕಾರಣ ಜಾತಿಯೇ ಆಗಿದೆ.[೧]

"ಈ ನಿಟ್ಟಿನಲ್ಲಿ ಮಾನವನ ಕೌಶಲ್ಯದ ಮೇಲೆಯೇ ಇಳೆಯ ಮೇಲೆ ಅವನ ಪಾರಮತ್ಯದ ಪ್ರಶ್ನೆ ಅವಲಂಬಿಸಿದ್ದುದು. ಮಾನವರಷ್ಟೆ ತಮ್ಮ ಆಹಾರೋತ್ಪಾದನೆಯ ಮೇಲೆ ಸಂಪೂರ್ಣ ಹತೋಟಿ ಪಡೆದುಕೊಂಡ ಜೀವಿಗಳು ಎಂದು ಹೇಳಬಹುದು. ಜೀವನೋಪಾಯ ಸಾಧನಗಳ ಮೂಲಗಳನ್ನು

ವಿಸ್ತರಿಸಿದ ಕಾಲಘಟ್ಟಗಳೇ ಹೆಚ್ಚು ಕಡಿಮೆಯ ಮಾನವ ಪ್ರಗತಿಯ ಮಹೋನ್ನತ ಕಾಲಘಟ್ಟಗಳೇ ಆಗಿವೆ."[3] ಸಮಾಜದಲ್ಲಿ ಬದಲಾವಣೆ ಎಂಬುವುದು ನಿಸರ್ಗದ ನಿಯಮವಾಗಿದೆ. ಪ್ರತಿಯೊಂದು ಕಾಲ ವರ್ಷ ಎಂಬುವುದು ಪ್ರತಿದಿನ ಬದಲಾವಣೆಯ ಹಂತದಲ್ಲಿ ಮುಂದುವರೆಯುವುದು. ಸಮಾಜ ಬದಲಾವಣೆ ಆಗದ ಇರಲು ಅಸಾಧ್ಯ. ಬದಲಾವಣೆಗೆ ಕಾರಣ ಸಾಮಾಜಿಕ ಚಲನೆ ಇದು ಸಾಮಾಜಿಕ ಅಸಮಾನತೆಗೆ ಸಂಬಂಧಿಸಿದ್ದುದಾಗಿದೆ. ಅಸಮಾನತೆ ಸಾಮಾಜಿಕ ಹಲವಾರು ಸ್ತರಗಳನ್ನು ಹೊಂದಿರುವುದೇ ಸ್ತರ ವಿನ್ಯಾಸ ವ್ಯಕ್ತಿ ಅಥವಾ ಸಮುದಾಯ ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಅಥವಾ ಒಂದು ಅಂತಸ್ತಿನಿಂದ ಇನ್ನೊಂದು ಅಂತಸ್ತಿಗೆ ಬದಲಾಗುವುದೇ ಅಂತಸ್ತನ್ನು ಹೊಂದುವುದೇ ಸಾಮಾಜಿಕ ಬದಲಾವಣೆ. ಎಂ.ಎನ್.ಶ್ರೀನಿವಾಸರವರು ಮೊದಲಿಗೆ ಅವರು ಕರ್ನಾಟಕ ಕೊಡವರ ಸಾಮಾಜಿಕ ಅಧ್ಯಯನ ಮಾಡುವ ಸಂದರ್ಭದಲ್ಲಿ ಜಾತಿಯು ಒಂದು ಏಣಿ ಶ್ರೇಣಿಯಲ್ಲಿ ಕೊಡವರ ಸಮೂಹವೊಂದು ತಮ್ಮ ಸ್ಥಾನವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಬ್ರಾಹ್ಮಣರ ರೀತಿ ನೀತಿಗಳನ್ನು ಅನುಕರಣೆ ಮಾಡುತ್ತಿದ್ದುದನ್ನು ಅವಲೋಕಿಸಿದ್ದಾರೆ. ಇಂದಿಗೂ ಹಲವು ಸಮುದಾಯಗಳು ಒಂದೇ ರೀತಿಯಲ್ಲಿ ಒಂದೇ ಬಗೆಯಲ್ಲಿ ಜೀವನ ಸಾಗಿಸುತ್ತಿರುವರು ಆದ್ದರಿಂದ ಬದಲಾವಣೆ ಎಂಬುವುದು ಸಮಾಜದಲ್ಲಿ ಅತಿ ಅವಶ್ಯಕ.

Tribe ಎಂಬ ಪದವು ಪ್ರಾಚೀನ ರೋಮನ್‌ರಲ್ಲಿನ ವಿಭಾಗಗಳನ್ನು ಸೂಚಿಸುತ್ತದೆ. ಇದು ಲ್ಯಾಟೀನ್ ಮೂಲದ ಮಧ್ಯ ಆಂಗ್ಲ ಭಾಷೆಯಾದ Tribazನಿಂದ ಬಂದಿದೆ. ಗ್ರೀಕರು ಈ ಪದವನ್ನು ಭೌಗೋಳಿಕ ವಿಭಾಗವನ್ನು ಸೂಚಿಸಲು ಬಳಸಿದಂತೆ ಕಾಣುತ್ತದೆ. ಇತಿಹಾಸದ ಕೆಲವು ಕಾಲಮಾನಗಳಲ್ಲಿ ಅದು ಒಂದು ಕುಟುಂಬ ಅಥವಾ ಸಮುದಾಯಕ್ಕೆ ನೀಡಲಾಗಿದೆ. ಇದು Triba ಎಂದರೆ ಬುಡಕಟ್ಟು ಎಂಬ ನಿರ್ದಿಷ್ಟ ಅರ್ಥವನ್ನು ಪಡೆದಿದೆ." ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಅಥವಾ ಅದನ್ನು ತನ್ನದೆಂದು ಹೇಳಿಕೊಳ್ಳುವಂತಹ ರಾಜಕೀಯವಾಗಿ ಅಥವಾ ಸಾಮಾಜಿಕವಾಗಿ ಹೊಂದಿಕೊಂಡಿರುವ ಮತ್ತು ಸ್ವಯಂ ಆಡಳಿತವುಳ್ಳ ಗುಂಪೇ ಬುಡಕಟ್ಟು" ಎಂದು ಲಂಡನ್ನಿನ ರಾಯಲು ಅಂತ್ರೋಪಾಲೋಜಿಕಲ್ ಇನ್‌ಸ್ಟ್ಯೋಟ್ ವ್ಯಾಖ್ಯಾನಿಸಿದೆ.

ಜಗತ್ತಿನಲ್ಲಿ ಪರಿವರ್ತನೆಯೇ ಇರದ ಶಾಶ್ವತ ನೆಲೆಯುಳ್ಳದು ಯಾವುದು ಇಲ್ಲ. ಅದರ ಪರಿವರ್ತನೆಯನ್ನು ಖಚಿತವಾಗಿ ಅಳೆಯುವುದು. ಕಷ್ಟ ಏಕೆಂದರೆ ಪರಿವರ್ತನೆ ಒಂದೇ ಸಮನಾದ ಒಂದೇ ವಿಧದಲ್ಲಿ ಆದರೂ ಅದನ್ನು ತಕ್ಕಮಟ್ಟಿಗೆ ಅಳೆಯಬಹುದಾದ ಮಾಪಕವೆಂದರೆ ಕಾಲ ಕಾಲದ ಹಿನ್ನೆಲೆ ಇರದೆ ಪರಿವರ್ತನೆಗೆ ಅರ್ಥವಿರದು ಪರಿವರ್ತನೆ ಇರದೆ ಕಾಲ ಸ್ಥಗಿತಗೊಳ್ಳುತ್ತದೆ.

ಅನಾದಿ ಕಾಲದಿಂದಲೂ ಮಾನವ ಸಮಾಜದಲ್ಲಿ ಬದಲಾವಣೆ ಹೊಂದುತ್ತಲೇ ಬಂದಿದ್ದಾನೆ. ಪರಿವರ್ತಿತ ಈ ಒಂದು ಸಮಾಜದಲ್ಲಿ ಹಕ್ಕಿಪಿಕ್ಕಿ ಸಮುದಾಯದ ಜನರು ತೀವ್ರಗತಿಯಲ್ಲಿ ಬದಲಾವಣೆ ಹೊಂದದಿದ್ದರು ಅವರು ಹಂತ ಹಂತವಾಗಿ ಬದಲಾವಣೆ ಹೊಂದುತ್ತಿರುವರು ತಂತ್ರಜ್ಞಾನದ ಆವಿಷ್ಕಾರದಿಂದ

ಅವರು ಸಾಮಾಜಿಕ ಜೀವನದಲ್ಲಿ ಬದಲಾವಣೆ ಹೊಂದಿರುವರು. ಜಾತಿಯ ಪ್ರಭಾವ ಕಡಿಮೆಯಾದುದರಿಂದ ಹಕ್ಕಿಪಿಕ್ಕಿಯರಲ್ಲಿ ಜಾತಿ ಮತ ಭೇದವಿಲ್ಲದೆ ಒಂದೇ ಕಡೆ ಸೇರುವಂತಾಯಿತು.

ಮೀಸಲಾತಿಯು ಸಹ ಸಮಾಜ ಪರಿವರ್ತನೆಯಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಅಲೆಮಾರಿಗಳಾದ ಇವರು ಒಂದೇ ಕಡೆ ನೆಲೆ ನಿಲ್ಲುತ್ತಿರುವುದು. ಪ್ರತ್ಯೇಕವಾಗಿ ನಗರಗಳಲ್ಲಿ ಕಾಲೋನಿಯಲ್ಲಿ ಜೀವನ ಸಾಗಿಸುತ್ತಿರುವರು. ಇಲ್ಲಿ ಸಮುದಾಯದ ಅಧ್ಯಯನ ಮಾಡುವಾಗ ಕೇವಲ ಆ ಒಂದು ಸಮುದಾಯವು ಹಿಂದಿನಿಂದ ಬಂದದ್ದಾರಿ ಅಂದರೆ ಅವರ ಹಿನ್ನಲೆಯಿಂದ ಹಿಡಿದು ಈಗ ಯಾವ ರೀತಿಯಾಗಿ ಪರಿವರ್ತನೆ ಹೊಂದಿದ್ದಾರೆ ಎಂಬುದನ್ನು ಗುರುತಿಸುವುದು. ಬುಡಕಟ್ಟು ಸಮುದಾಯ ಎನಿಸಿರುವ ಸಮುದಾಯಗಳು ಅಂದರೆ ಕೆಳವರ್ಗದ ಸಮುದಾಯಗಳು ಮಾತ್ರ ಸಮಾಜದಲ್ಲಿ ಬದಲಾವಣೆ ಆಗುತ್ತಿರುವುವು ಆದರೆ ಕೈಗಾರಿಕೀರಣ ಹಾಗೂ ಖಾಸಗೀಕರಣಗಳ ಒಂದು ಬೆಳವಣಿಗೆಯಿಂದ ಸಮುದಾಯದಲ್ಲಿ ಬದಲಾವಣೆ ಎಂಬುವುದು ಮಂದಗತಿಯಲ್ಲಿ ಚಲಿಸುತ್ತಿರುವುದು ವಿಕಾಸ ಹಾಗೂ ಚಲನೆಯ ಪ್ರಕ್ರಿಯೆಯು ಹಂತ ಹಂತವಾಗಿ ಹಂತವನ್ನು ತಲುಪಿರುವವು.

೧.೧. ಅಧ್ಯಯನದ ವ್ಯಾಪ್ತಿ

“ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಸುತ್ತುವರದಿರುವ ಹಕ್ಕಿಪಿಕ್ಕಿಯರು. ಎಲ್ಲಾ ಜಿಲ್ಲೆಗಳಲ್ಲಿಯೂ ಇದ್ದಾರೆ. ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆಯ ಅಧ್ಯಯನಕ್ಕಾಗಿ ಹೊಸಪೇಟೆ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಹೊಸಪೇಟೆ ಒಂದಾಗಿದೆ. ಈ ತಾಲೂಕಿನ ಕೇಂದ್ರ ಸ್ಥಳವು ಹೊಸಪೇಟೆಯಾಗಿದ್ದು ಇದು ಒಂದು ಮುಖ್ಯ ವಾಣಿಜ್ಯಕೇಂದ್ರವಾಗಿದೆ. ಹೊಸಪೇಟೆಯು ಚಾರಿತ್ರಿಕವಾಗಿ ಅತ್ಯಂತ ಮಹತ್ವ ಪಡೆದ ಸ್ಥಳವಾಗಿದೆ. ನಂತರದ ಕಾಲದಲ್ಲಿ ಸಮೀಪದಲ್ಲಿರುವ ಗ್ರಾಮಗಳಾದ ಜಗಳೀಕಟ್ಟೆ, ವಿರುಪಾಕ್ಷಪುರ, ವಿಜಯಪುರ, ನಾಗಾಲಾಪುರ ಮತ್ತು ಹಂದಿಗನೂರು ಪ್ರದೇಶಗಳೆಲ್ಲವೂ ಸೇರಿಕೊಂಡು ಇಂದಿನ ಹೊಸಪೇಟೆಯಾಗಿ ಪರಿವರ್ತಿತವಾಯಿತು ಎಂದು ಮಹಾದೇವ ಅವರು ಅಭಿಪ್ರಾಯ ಪಡುತ್ತಾರೆ.”[೩] “ಹೊಸಪೇಟೆ ನಡುವಿನ ವಲಯವು ಇಡೀ ಪ್ರಪಂಚದಲ್ಲಿಯೇ ಶ್ರೇಷ್ಠ ದರ್ಜೆಯ ಕಬ್ಬಿಣದ ಅದಿರಿನ ವಲಯವೆಂದು ಪ್ರಸಿದ್ಧಿಗಳಿಸಿದೆ. ಖಾಸಗಿಯವರು ಈ ವಲಯದಲ್ಲಿರುವ ಕಬ್ಬಿಣದ ಅದುರಿನ ಸ್ಥಳಗಳನ್ನು ಗುತ್ತಿಗೆಗೆ ಪಡೆದು. ಉತ್ತಮ ದರ್ಜೆಯ ಅದಿರನ್ನು ಪಡೆದು ಹೊರ ದೇಶಗಳಿಗೆ ರಫ್ತು ಮಾಡುತ್ತಿದ್ದಾರೆ.”[೪] ಈ ತಾಲೂಕಿನಲ್ಲಿ ೭೪ ಗ್ರಾಮಗಳಿವೆ. ವಿಸ್ತೀರ್ಣ ೮೯೪.೬ ಚ.ಕಿ.ಮೀ ಜನಸಂಖ್ಯಾ ೩.೭೪.೯೪೯ ಇದರಲ್ಲಿ ಗ್ರಾಮಸ್ಥರು ೧.೫೩.೪೯೯ ಪಟ್ಟಣದವರು ೨ ೨೧.೪೫೦ ತಾಲೂಕಿನಲ್ಲಿ ಸಣ್ಣ ಬೆಟ್ಟ, ಗುಡ್ಡಗಳಿವೆ. ಇವುಗಳಲ್ಲಿ ಕಂಪ್ಲಿ ಬೆಟ್ಟ ಸಾಲಿನಲ್ಲಿ ತಿಮ್ಮಪ್ಪರ ಬೆಟ್ಟ ೨.೧೩೩ ಹೆಚ್ಚು ಎತ್ತರವಾದದ್ದು. ತುಂಗಭದ್ರ ಈ ತಾಲೂಕಿನ ಮುಖ್ಯ

ನದಿ. ತಾಲೂಕಿನ ಉತ್ತರದ ಗಡಿಭಾಗವಾಗಿ ಈಶಾನ್ಯ ಭೂಮುಖವಾಗಿ ಹರಿಯುವ ಈ ನದಿ ರಾಯಚೂರಿನ ಕೊಪ್ಪಳ ಮತ್ತು ಗಂಗಾವತಿ ತಾಲ್ಲೂಕುಗಳಿಂದ ಇದನ್ನು ವಿಂಗಡಿಸಿದೆ. ಜಲಾಶಯದ ಕಾಲುವೆಗಳ ಜಾಲ ಈ ತಾಲೂಕಿನಲ್ಲಿ ಹರಡಿದ್ದು ವ್ಯವಸಾಯಕ್ಕೆ ಹೆಚ್ಚು ಅನುಕೂಲವಿದೆ. ತಾಲೂಕಿನಲ್ಲಿ ಸು.೨೭.೮೬೪ ಹೆಕ್ಟೇರು ಮೀಸಲು ಅರಣ್ಯ ಪ್ರದೇಶವಿತ್ತು. ವಾರ್ಷಿಕ ಸರಾಸರಿ ಮಳೆ ೬೮೪.೮೩ ವಾಣಿಜ್ಯ ಸಹಕಾರಿ ಬ್ಯಾಂಕುಗಳಿವೆ. ಅಂಚೆ, ತಂತಿ, ದೂರವಾಣಿ, ಶಾಲಾ ಕಾಲೇಜುಗಳ ಸೌಲಭ್ಯವಿದೆ. ಹೊಸಪೇಟೆ ಈಶಾನ್ಯದಲ್ಲಿ ೧೩.ಕಿ.ಮೀ.ದೂರದಲ್ಲಿರುವ ಹಂಪೆ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಐತಿಹಾಸಿಕ ಸ್ಥಳ ಹೊಸಪೇಟೆ ೩೨ ಕಿ.ವಿ. ದೂರದಲ್ಲಿರುವ ಕಂಪ್ಲಿ ಒಂದು ಇತಿಹಾಸ ಪ್ರಸಿದ್ಧ ಸ್ಥಳ ಇಂತಹ ಪ್ರಸಿದ್ಧ ಸ್ಥಳದಲ್ಲಿ ವಾಸಿಸುವ ಹಕ್ಕಿಪಿಕ್ಕಯರು ಅಧುನೀಕರಣದ ಒಂದು ಪ್ರಭಾವದಿಂದ ಪಟ್ಟಣ ಪ್ರದೇಶಗಳಿಗೆ ಹತ್ತಿರ ಇರುವ ಕಂಪ್ಲಿ (ಶಿಕಾರಿಕಾಲೋನಿ) ಹೊಸಪೇಟೆ ಮತ್ತು ಕಾರಿಗನೂರ ಗ್ರಮಗಳು ವಾಸಿಸುವ ಇವರ ಪ್ರಸ್ತುತ ಸಮಾಜದಲ್ಲಿನ ಜೀವನ ಕ್ರಮ ಹಾಗೂ ಬದುಕನ್ನು ವಿವರಿಸಿಕೊಳ್ಳುವುದು.

ಕರ್ನಾಟಕದಲ್ಲಿ ಕಳೆದ ೫೦ ವರ್ಷಗಳಿಂದೀಚೆಗೆ ಅಲ್ಲಲ್ಲಿ ನೆಲೆ ನಿಲ್ಲುತ್ತಿರುವುದರಿಂದ ಇವರ ಕಸುಬಿನಲ್ಲಿ ಗುರುತರವಾದ ಬದಲಾವಣೆಗಳು ಕಂಡುಬರುವುದರಲ್ಲಿ ಅಚ್ಚರಿಯೇನಿಲ್ಲ ೧೯೮೧ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಇವರೆಲ್ಲ ಕೇವಲ ಶೇ.೩೩.೬೩ ದುಡಿಮೆಗಾರರಿದ್ದಾರೆ. ಅದರಲ್ಲಿ ಶೇ.೪೪.೫೨ರಷ್ಟು ಕೃಷಿಕರಾಗಿ ಶೇ.೨೪.೬೩ರಷ್ಟು ಕೃಷಿಕೂಲಿಗಳಾಗಿ ಶೇ.೬.೫೧ರಷ್ಟು ಮಾತ್ರ ಪಾರಂಪರಿಕ ಬೇಟೆಗಾರರಾಗಿ ಮತ್ತು ಆಹಾರ ಸಂಗ್ರಹಕರಾಗಿ ಶೇ.೧೦.೯ರಷ್ಟು ವ್ಯಾಪರಸ್ಥರಾಗಿ ಇನ್ನುಳಿದ ಶೇ.೧೩.೬೫ರಷ್ಟು ಇತರೆ ಕೆಲಸಗಾರರಾಗಿದ್ದಾರೆ. ಹಕ್ಕಿಪಿಕ್ಕಿಗಳು ಔಪಚಾರಿಕ ಶಿಕ್ಷಣದಲ್ಲಿ ಹೆಚ್ಚಿನ ಅಸಕ್ತಿವಹಿಸುತ್ತಿಲ್ಲ. ಹೀಗಾಗಿ ಬೆರಳೆಣಿಕೆಯಷ್ಟು ಜನ ಮಾತ್ರ ಸರಕಾರದ ಸಣ್ಣಪುಟ್ಟ ಹುದ್ದೆಯಲ್ಲಿರುವರು. ಹೆಂಗಸರು ಸಮುದಾಯದ ಆಚರಣೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರೊಂದಿಗೆ ಕೌಟುಂಬಿಕ ಆರ್ಥಿಕ ಭದ್ರತೆಗೂ ಸಹಕಾರಿಯಾಗುವರು.[೫] ಒಟ್ಟು ಹೊಸಪೇಟೆ ತಾಲೂಕಿನ ಸುತ್ತವರಿದ ಪ್ರದೇಶಗಳಿಗೆ ಅನುಗುಣವಾಗಿ ಹಕ್ಕಿಪಿಕ್ಕಿ ಸಮುದಾಯದವರು ನೆಲೆಸಿರುವ ಪ್ರದೇಶಗಳ ಅನುಗುಣವಾಗಿ ಅವರ ಕೌಟುಂಬಿಕ ವಿವರ ಹಾಗೂ ಜನಸಂಖ್ಯೆಯನ್ನು ಇಲ್ಲಿ ಹೇಳಲಾಗಿದೆ.

ಕಂಪ್ಲಿ ಮನೆ	ಕಾರಿಗನೂರು ಮನೆ	ಹೊಸಪೇಟೆ ಮನೆ
೧೧೮	೪೦	೧೬

ಕುಟುಂಬಗಳು ಇಲ್ಲಿ ನೆಲೆಸಿರುವವು. ಅಂದರೆ ಒಂದೇ ಕುಟುಂಬದವರು ಈಗ ಬೇರೆ ಬೇರೆ ಮನೆಯಲ್ಲಿ ವಾಸಿಸುವವರು. ಕಂಪ್ಲಿಯಲ್ಲಿ ಇವರ ಜನಸಂಖ್ಯೆ ೬೪೧ ಹೆಣ್ಣುಮಕ್ಕಳ ಸಂಖ್ಯೆ ೩೨೦ ಗಂಡುಸರ ಸಂಖ್ಯೆ ೩೨೧. ಕಾರಿಗನೂರಿನಲ್ಲಿ ೨೩೪ ಹೆಣ್ಣು ಮಕ್ಕಳ ಸಂಖ್ಯೆ ೧೨೬ ಗಂಡಸರ ಸಂಖ್ಯೆ

೧೦೮. ಹೊಸಪೇಟೆಯಲ್ಲಿ ೧೪೩ ಗಂಡಸರ ಸಂಖ್ಯೆ ೭೧, ಹೆಣ್ಣುಮಕ್ಕಳ ಸಂಖ್ಯೆ ೭೨. ಹೀಗೆ ಕ್ಷೇತ್ರಕಾರ್ಯದ ಮೂಲಕ ಹಕ್ಕಿಪಿಕ್ಕಿ ಸಮುದಾಯದವರ ಸಂಪೂರ್ಣ ಕುಟುಂಬಗಳ ವ್ಯಾಪ್ತಿ ಹಾಗೂ ಅವರ ಜನಸಂಖ್ಯೆಯನ್ನು ಅಂಕಿ ಅಂಶಗಳ ಮುಖಾಂತರ ತಿಳಿಸಲಾಗಿದೆ. ಹಕ್ಕಿಪಿಕ್ಕಿ ಸಮುದಾಯದ ಜನರನ್ನು ಇತರ ಸಮುದಾಯಗಳ ಜನರ ರೀತಿ-ನೀತಿಗಳೊಡನೆ ಹೋಲಿಸುವ ಪ್ರಯತ್ನ ಮಾಡಲಾಗಿದೆ. ಸಮುದಾಯಗಳ ಅಧ್ಯಯನಕ್ಕೆ ಈ ಮುಂಚಿನವರು ಅನುಸರಿಸಿದ ವಿಧಾನಗಳನ್ನು ಗಮನಿಸಿ, ಸೂಕ್ತ ಬದಲಾವಣೆಗಳೊಡನೆ ಒಂದು ಅಧ್ಯಯನ ಮಾದರಿಯನ್ನು ರೂಪಿಸಲಾಗಿದೆ.

ಕೋಷ್ಟಕ ೧

ಗ್ರಾಮಗಳ ಹೆಸರು	ಗಂಡು	ಹೆಣ್ಣು	ಒಟ್ಟು
ಹೊಸಪೇಟೆ	೭೧	೭೨	೧೪೩
ಗಾರಿಗನೂರು	೧೦೮	೧೭೬	೨೩೪
ಕಂಪ್ಲಿ	೩೨೧	೩೨೦	೬೪೧
ಒಟ್ಟು	೫೦೦	೫೧೮	೧೦೧೮

೧.೨. ಅಧ್ಯಯನದ ವಿಧಾನ

ಶತಮಾನಗಳಿಂದಲೂ ಕಡೆಗಣಿಸಿದಂತಹ ಸಮುದಾಯಗಳು ಈ ಹೊತ್ತಿನ ಸಂದರ್ಭದಲ್ಲಿಯ ಬದಲಾವಣೆಗೊಂಡಿಲ್ಲವೆಂದರೆ ಅತಿಶಯೋಕ್ತಿಯೇನಲ್ಲ. ನಿರುದ್ಯೋಗ, ಜಾತೀಯತೆ ಕೋಮುವಾದ ಅಲೆಮಾರಿತನ ಇಂತಹ ಸಮಸ್ಯೆಯಿಂದ ಹೊರತಾಗಿರದೇ ಸಾಮಾಜಿಕ ಸ್ಥಿತಿಗತಿ ಉತ್ತಮವಾಗಿರದೇ ಅಸಮಾನತೆಯು ಹೆಚ್ಚಾಗಿದೆ. ಅಧ್ಯಯನ ಸಮಕಾಲೀನತೆಯಲ್ಲಿ ಹಕ್ಕಿಪಿಕ್ಕಿ ಸಮುದಾಯದ ಜನರು ಸೀಮಿತವಿದ್ದರೂ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವರು. ಜಾಗತೀಕರಣದ ಈ ಒಂದು ಹಂತದಲ್ಲಿ ಕೆಳವರ್ಗದ ಜನರೇ ಸಂಕಟಗಳಿಗೆ ಈಡಾಗುತ್ತಿರುವ ಹಿನ್ನಲೆಯಲ್ಲಿ ಹಕ್ಕಿಪಿಕ್ಕಿಯರಲ್ಲಿ ಸಾಮಾಜಿಕ ಬದಲಾವಣೆ ಎಂಬ ವಿಷಯವನ್ನು ಸಂಪ್ರಬಂಧ ರೂಪದಲ್ಲಿ ಮಂಡಿಸಲು ಈ ಕೆಳಗಿನ ಸಂಶೋಧನಾ ವಿಧಾನವನ್ನು ಅನುಸರಿಸಲು ಬಯಸಿದ್ದೇನೆ.

೧. **ಪ್ರಶ್ನಾವಳಿ** : ನನ್ನ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆಯಲು ನಾನು ಆಯ್ದುಕೊಂಡ ಕ್ಷೇತ್ರದಲ್ಲಿ ಪ್ರಸ್ತುತ ಅಧ್ಯಯನಕ್ಕಾಗಿ ಪ್ರಶ್ನಾವಳಿಯನ್ನು ರೂಪಿಸಲಾಗಿತ್ತು. ಈ ಪ್ರಶ್ನಾವಳಿಯಿಂದ ಪಡೆದುಕೊಂಡ ಅಂಕಿ ಅಂಶಗಳನ್ನು ಅಧ್ಯಯನದುದ್ದಕ್ಕೂ ಬಳಸಿಕೊಳ್ಳಲಾಗಿದೆ.

೨. ಸಂದರ್ಶನ ವಿಧಾನ : ಪ್ರತಿಯೊಂದು ಕುಟುಂಬದ ವಿವರವಾದ ಮಾಹಿತಿಯನ್ನು ಸಂದರ್ಶನದ ಮುಖಾಂತರ ಅಧ್ಯಯನದ ಅಗತ್ಯಕ್ಕೆ ತಕ್ಕಂತೆ ಹೊಸಪೇಟೆ, ಕಾರಿಗನೂರು, ಕಂಪ್ಲಿ ಗ್ರಾಮದ ಶಿಕಾರಿ ಕಾಲೋನಿ ಈ ಪ್ರದೇಶದಲ್ಲಿ ನೆಲೆಸಿರುವ ಹಕ್ಕಿಪಿಕ್ಕಿ ಜನರನ್ನು ಸಂದರ್ಶಿಸಲಾಗಿದೆ.

೩. ಅವಲೋಕನ : ಪ್ರತಿಯೊಂದು ಕುಟುಂಬಗಳಿಂದ ಮಾಹಿತಿಯನ್ನು ಸಹಭಾಗಿತ್ವ ಅವಲೋಕನದಿಂದ ಪಡೆದು ಪ್ರತಿಯೊಂದು ಕುಟುಂಬದ ಸದಸ್ಯರ ಜೊತೆಗಿನ ಸಂವಾದದ ಮುಖಾಂತರ ಗ್ರಾಮಗಳ ವಿಷಯಗಳನ್ನು ಸ್ಪಷ್ಟವಾಗಿ ಗಮನಿಸಿ ಮಾಹಿತಿಯನ್ನು ಪಡೆಯಲಾಗಿದೆ.

ಗ್ರಾಮ ಕಾಲೋನಿಗಳಲ್ಲಿನ ಶಿಕ್ಷಣದ ಬಗ್ಗೆ ಉದ್ಯೋಗ, ಆದಾಯ ಎಲ್ಲವನ್ನು ಪ್ರತ್ಯೇಕವಾಗಿ ಗುರುತಿಸಲಾಗಿದೆ. ಹಕ್ಕಿಪಿಕ್ಕಿಯರ ಸಾಮಾಜಿಕ ಆರ್ಥಿಕ ಬದಲಾವಣೆಯ ಕ್ರಿಯೆಯು ಪ್ರಸ್ತುತದಲ್ಲಿ ಹೇಗಿದೆ ಎಂಬುದನ್ನು ಸೂಕ್ಷ್ಮ ಅಧ್ಯಯನದ ಮುಖಾಂತರ ವಿಶ್ಲೇಷಿಸುವುದು ಇಲ್ಲಿನ ಉದ್ದೇಶವಾಗಿದೆ. ಪ್ರಾಥಮಿಕ ಅಂಕಿ ಅಂಶಗಳನ್ನು ವಿಶ್ಲೇಷಣೆಗೆ ಬೇಕಾಗುವ ರೀತಿಯಲ್ಲಿ ಕೋಷ್ಟಕಗಳಲ್ಲಿ ನೀಡಲಾಗಿದೆ. ಮತ್ತು ಅನುಷಂಗಿಕ ಮಾಹಿತಿಗಳಿಂದ ಹಾಗೂ ಈವರೆಗೆ ಸಮುದಾಯ ಕುರಿತು ನಡೆದ ಅಧ್ಯಯನಗಳಿಂದ ಕೂಡ ಪಡೆಯಲಾಗಿದೆ.

೧.೩. ಅಧ್ಯಯನದ ಉದ್ದೇಶಗಳು

ಭಾರತದಲ್ಲಿ ಹಲವು ಸಮುದಾಯದ ಜನರು ವಾಸಿಸುತ್ತಿದ್ದು ಬಡವ, ಶ್ರೀಮಂತ, ಅಲೆಮಾರಿ, ಅರೆ ಅಲೆಮಾರಿ ಎಂದು ಕೆಳವರ್ಗ ಮೇಲುವರ್ಗ ಎಂದು ಹಲವು ರೀತಿಯಲ್ಲಿ ಜೀವನ ಸಾಗಿಸುತ್ತಿರುವ ಜನರು ಭಾರತದಾದ್ಯಂತ ಹರಡಿರುವರು. ಇವರು ಸಾಮಾಜಿಕವಾಗಿ ಹಿಂದುಳಿದಿರುವುದಕ್ಕೆ ಹಲವು ಕಾರಣಗಳಿವೆ. ಅಸಮಾನತೆಯ ಅಂಶಗಳು ಪಾರಂಪರಿಕ ವೃತ್ತಿಗಳು ಅಸಾಧಾರಣಾ ವೈರುಧ್ಯಗಳು ಸಮುದಾಯಗಳನ್ನು ಒಂದು ರೀತಿಯ ನಿರ್ಲಿಪ್ತ ಸ್ಥಿತಿಗತಿಗಳಿಗೆ ಒಳಗಾಗಿರುವುವು. ಸಾಮಾಜಿಕವಾಗಿ ಇನ್ನು ಹಲವಾರು ನೋವುಗಳನ್ನು ಅನುಭವಿಸುತ್ತಲೇ ಇವೆ. ಇಂತಹ ಸಮುದಾಯಗಳಲ್ಲಿ ಹಕ್ಕಿಪಿಕ್ಕಿ ಸಮುದಾಯವು ಒಂದು. ನನ್ನ ಅಧ್ಯಯನದ ಮುಖ್ಯ ಉದ್ದೇಶಗಳು ಈ ಕೆಳಗಿನಂತಿವೆ.

೧. ಹಕ್ಕಿಪಿಕ್ಕಿಯವರ ಮೂಲ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಿಕೊಳ್ಳುವುದು.

೨. ಸಾಮಾಜಿಕ ಬದಲಾವಣೆಯಲ್ಲಿ ಸಮುದಾಯವು ವರ್ತಮಾನಕನುಗುಣವಾಗಿ ಮುಖ್ಯವಾಹಿನಿಯಲ್ಲಿ ಅವಕಾಶಗಳನ್ನು ಪಡೆಯುವ, ವಂಚಿತವಾಗುವ ಪ್ರಕ್ರಿಯೆಯನ್ನು ಅವಲಂಬಿಸಿರುತ್ತದೆ.

೩. ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ, ಆರ್ಥಿಕ ಬದುಕಿನ ಸ್ಥಿತ್ಯಂತರಗಳನ್ನು ವಿವರಿಸಿಕೊಳ್ಳುವುದು.

೪. ಹಕ್ಕಿಪಿಕ್ಕಿಯವರ ಪಾರಂಪರಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ವಿವರಿಸಿಕೊಳ್ಳುವುದು.

೫. ಹಕ್ಕಿಪಿಕ್ಕಿಯರ ಬದಲಾವಣೆಯ ಹಿಂದಿರುವ ಒತ್ತಾಸೆಗಳು, ಒತ್ತಡಗಳು ಮತ್ತು ಅನಿವಾರ್ಯತೆಗಳನ್ನು ವಿವರಿಸಿಕೊಳ್ಳುವುದು.

ಅಧ್ಯಯನ . ಆಯ್ಕೆ ಮಾಡಿಕೊಂಡಿರುವ ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಸಾಂಸ್ಕೃತಿಕ ಆರ್ಥಿಕ ಹಿನ್ನಲೆಯನ್ನು ಪ್ರತಿನಿಧಿಸುತ್ತದೆ. ಆ ಕಾರಣಕ್ಕಾಗಿ ಹಕ್ಕಿಪಿಕ್ಕಿಯರ ಬದುಕಿನ ಸಂಪೂರ್ಣ ವಿವರದ ಜೊತೆಗೆ ಸಾಮಾಜಿಕ ಬದಲಾವಣೆಯ ಸಮಗ್ರ ಚಿತ್ರಣವನ್ನು ಇಲ್ಲಿ ನೀಡಲಾಗಿದೆ.

೧.೪. ಇದುವರೆಗಿನ ಸಾಹಿತ್ಯದ ಪರಿಶೀಲನೆ

ಹಕ್ಕಿಪಿಕ್ಕಿ ಸಮುದಾಯವು ರಾಜಸ್ಥಾನ, ಗುಜರಾತ್ ಮೂಲದಿಂದ ಆಂಧ್ರ ಪ್ರದೇಶ ಮಾರ್ಗವಾಗಿ ಕರ್ನಾಟಕಕ್ಕೆ ವಲಸೆ ಬಂದು ನಿಂತಿದೆ. ೧೯೫೪ರಲ್ಲಿ ಹುಣಸೂರು ತಾಲೂಕಿನ ಪಕ್ಷಿ ರಾಜಪುರದಲ್ಲಿ ಇವರನ್ನು ನೆಲೆ ನಿಲ್ಲಿಸಲಾಯಿತು. ಇವರು ಬೇಟೆಯನ್ನೇ ಬದುಕಿನ ಆಧಾರವನ್ನಾಗಿ ಮಾಡಿಕೊಂಡು ಬದುಕುತ್ತಿದ್ದರು. ಸಂಚಾರಿಗಳಾದ ಅವರು ಬೇಟೆ ಸಿಗದಿದ್ದಾಗ ಸಣ್ಣಪುಟ್ಟ ಕಳವು ಮಾಡಲು ತೊಡಗಿದರು. ಬ್ರಿಟಿಷ್ ಆಡಳಿತ ಬಂದ ಮೇಲೆ ಸಮುದಾಯಗಳನ್ನು ಗಂಭೀರವಾಗಿ ಪರಿಗಣಿಸಿ ಕ್ರಿಮಿನಲ್ ಕಾಯಿದೆಯನ್ನು ೧೮೭೧ರಲ್ಲಿ ತಂದಿತು. ಇವರ ಮೇಲೆ ಪೋಲಿಸರು ನಿಗಾವಹಿಸಿ ಇವರನ್ನು ಒಂದೆಡೆಗೆ ಕೂಡಿ ಹಾಕುವ ಕೆಲಸಕ್ಕೆ ತೊಡಗಿದರು. ಪೊಲೀಸರ ಕಾರ್ಯಾಚರಣೆಗೆ ಹೆದರಿದ ಹಕ್ಕಿಪಿಕ್ಕಿ ಸಮುದಾಯವು ದೇಶದ ಬೇರೆ ಬೇರೆ ಭಾಗಗಳಿಗೆ ಪಸರಿಸಿದರು.[೬] ಕರ್ನಾಟಕಕ್ಕೆ ಅವರು ೨೦೦ ವರ್ಷಗಳಿಗಿಂತ ಈಚೆಗೆ ಬಂದು ನೆಲೆಸಿರುವರು.

ಎಡ್ಗರ ಥರ್ಸ್ಟನ್ ಇಪ್ಪತ್ತನೇ ಶತಮಾನದ ಆರಂಭದಲ್ಲಿಯೇ ಇವರು ಕರ್ನಾಟಕದ ಸಮುದಾಯವನ್ನು ಅಧ್ಯಯನ ಮಾಡಲು ಪ್ರಾರಂಭಿಸಿದರು. ಬೇರೆ ಬುಡಕಟ್ಟುಗಳನ್ನು ಕುರಿತು ನಡೆದಿರುವ ಅಧ್ಯಯನವನ್ನು ನೋಡಿದರೆ ಹಕ್ಕಿಪಿಕ್ಕಿಯವರನ್ನು ಕುರಿತು ಕನ್ನಡದಲ್ಲಿ ಇಲ್ಲಿಯವರೆಗೆ ಅಷ್ಟು ವ್ಯಾಪಕವಾದ ಅಧ್ಯಯನ ನಡೆಯದೇ ಇರುವುದು ಕೊರತೆಯಾಗಿದೆ. ಕನ್ನಡ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿಯ ಯೋಜನೆಯ ಅಡಿಯಲ್ಲಿ ಆರ್.ರಾಜಪ್ಪ ದಳವಾಯಿ ಅವರ 'ಹಕ್ಕಿಪಿಕ್ಕಿಯವರ ಸಂಸ್ಕೃತಿ' ೧೯೯೩. ಕರ್ನಾಟಕ ಬುಡಕಟ್ಟುಗಳ ಸಂಪುಟ ಎರಡರಲ್ಲಿ ಡಿ.ಬಿ.ನಾಯಕ್‌ರವರು ಹಕ್ಕಿಪಿಕ್ಕಿಯರ ವಿಸ್ತರಣೆಯನ್ನು ನೀಡಿರುವರು. ಆರ್.ಎಸ್.ಮ್ಯಾನ್ ರಿಲಿಜಿಯನ್ ಅಂಡ್ಸ್ ಸೋಸೈಲಿಟಿ ಇನ್.ಎ. ಇಂಡಿಯನ್ ಆಫ್ ಹಕ್ಕಿಪಿಕ್ಕಿ ೧೯೭೧ ಲಾರೆನ್ಸ್ ಡಿಸೋಜಾ ಎಸ್.ಜೆ ಎಂಬುವವರು ಹಕ್ಕಿಪಿಕ್ಕಿಸ್ ಎನ್ನುವ ಪುಸ್ತಕವನ್ನು ಬರೆದರು ಮತ್ತು 'ದಿ ಶೆಡಲ್ ಟ್ರೇಬ್ಸ್', ಕೆ.ಎಸ್.ಸಿಂಗ್ ೧೯೯೪ 'ಪೀಪಲ್ ಆಫ್ ಇಂಡಿಯಾ' ವಾಲ್ಯೂಮ್ ೩ 'ಟ್ರೈಬಲ್ ಲೈಫ್ ಆಫ್ ಆಫ್ ಇಂಡಿಯಾ' ೧೯೯೩ ಅನಿಲಕುಮಾರ್ ಸಿಂಗ್ 'ಟ್ರೈಬ್‌ಲ್ ಡೆವಲಪ್‌ಮೆಂಟ್ ಅಂಡ್ ಗೇಷಿಯಲ್ ಕಲ್ಚರ್' ೧೯೯೩ ಎಸ್.ಟಿ.ದಾಸ್, ಕೆ.ಎಂ.ಮೇತ್ರಿಯವರು

'ಬುಡಕಟ್ಟು ಕುಲಕಸುಬುಗಳು' ಪುಸ್ತಕದಲ್ಲಿ ಕರ್ನಾಟಕ ಬುಡಕಟ್ಟುಗಳ ಸಾಲಿನಲ್ಲಿ ಹಕ್ಕಿಪಿಕ್ಕಿಯರನ್ನು ಸೇರಿಸಿದ್ದಾರೆ. ಸಂಪ್ರಬಂಧಗಳಲ್ಲಿ ಸುದರ್ಶನ ಕುಮಾರ ಅವರು 'ಬದಲಾಗುತ್ತಿರುವ ಸಮಾಜದಲ್ಲಿ ಹಕ್ಕಿಪಿಕ್ಕಿ ಸಮುದಾಯದ ಆರ್ಥಿಕ ಸ್ಥಿತಿಗತಿ' ಮಹಾಪ್ರಬಂಧಗಳಲ್ಲಿ ಡಾ. ಲಕ್ಕಿ ಪೃಥ್ವಿರಾಜ್ 'ಪಾರ್ದಿ ಬುಡಕಟ್ಟು ಒಂದು ಮಾನವಶಾಸ್ತ್ರೀಯ ಅಧ್ಯಯನ' ಎಂದು ಉಲ್ಲೇಖಿಸಿರುವರು.

ಧರ್ಮದ ನೆರಳಿನಲ್ಲಿ ಅದರ ಮರೆಯಲ್ಲಿ ಅವರ ರಕ್ಷಣೆಯಲ್ಲಿ ಪ್ರಾಚೀನ ನಾಗರಿಕತೆಯಿಂದ ಇಂದಿನ ಪ್ರಸ್ತುತ ದಿನಗಳವರೆಗೂ ಪುರೋಹಿತಶಾಹಿಯ ಪ್ರಾಬಲ್ಯವೇ ಕಾಣಬರುತ್ತದೆ. ಈ ದೇಶದ ಪರಂಪರೆಯಿಂದ ಬಂದ ಪ್ರವೃತ್ತಿಗಳಿಗನುಗುಣವಾಗಿ ಜೀವನ ಸಾಗಿಸುತ್ತಿರುವರು. ಕಸಬುಗಳನ್ನು ಅವಲಂಬಿಸಿ ಬದುಕುತ್ತಿದ್ದಾರೆ. ಅವರು ಮಾಡುತ್ತಿರುವ ವೃತ್ತಿಯು ಒಂದೇ ಕಡೆ ಇರಕೂಡದು. ಅದರ ಪರಿವರ್ತನೆಯ ನಿರಂತತೆಯಿಂದ ಮುಂದುವರೆಯುತ್ತಿರಬೇಕು. ಬದಲಾವಣೆ ಎಂಬುವುದು ತೀವ್ರಗತಿಯಲ್ಲಿ ಬದಲಾಯಿಸಬೇಕು.

ಮೇಲಿನ ಬಹುತೇಕ ಕೃತಿಗಳು ಹಕ್ಕಿಪಿಕ್ಕಿ ಸಮುದಾಯದಿಂದ ನಡೆದುಬಂದ ದಾರಿ ಹಾಗೂ ಕಲೆ ಸಂಸ್ಕೃತಿ ಭಾಷೆ ಹಾ ಗೂ ಅವರ ಆರ್ಥಿಕ ಜೀವನ ಇವೆಲ್ಲವುಗಳನ್ನು ಜಾತಿಯನ್ನು ಕೇಂದ್ರವಾಗಿರಿಸಿಕೊಂಡು ಚರ್ಚಿಸಲಾಗಿದೆ. ಆದರೆ ಅಲೆಮಾರಿಗಳಾದ ಹಕ್ಕಿಪಿಕ್ಕಿಯರು ಸಮಾಜದಲ್ಲಿ ಯಾವ ರೀತಿಯಾಗಿ ಬದಲಾವಣೆಯಾಗಬೇಕು ಎಂಬುವುದು ಗೈರುಹಾಜರಾಗಿದೆ. ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆ ಆಗಿರುವುದು ತೀರಾ ವಿರಳವೆಂದೇ ಹೇಳಬಹುದು. ಪ್ರಸ್ತುತ ನನ್ನ ಅಧ್ಯಯನವು ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆಯ ಒಂದು ನೆಲೆಯಲ್ಲಿ ವಿವರಿಸಿಕೊಳ್ಳುವ ಪ್ರಯತ್ನ.

ಅಡಿಟಿಪ್ಪಣಿ

೧. **ಬಾಬಾ ಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು** ಸ.I, ಪು.೬೮

೨. ಫೆಡರಿಕ್ ಎಂಗೆಲ್ಸ್, **ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ,** ಪು.೩೩

೩. ಲಕ್ಕಪ್ಪಗೌಡ ಎಚ್.ಜೆ., **ಕರ್ನಾಟಕದ ಬುಡಕಟ್ಟುಗಳು,** ಸಂಪುಟ ೨, ಪು.೧೮೬

೪. ಸಿ.ಎಸ್.ವಾಸುದೇವನ, **ಹಂಪಿ ಪರಿಸರದ ಕೆರೆಗಳು,** ಪು.೨೯

೫. ಹಿ.ಚಿ.ಬೋರಲಿಂಗಯ್ಯ, **ಅಭಿವೃದ್ಧಿ ಪಂಥ,** ಪು.೯೩

೬. ಕೆ.ಎಂ.ಮೇತ್ರಿ, **ಬುಡಕಟ್ಟು ಕುಲಕಸುಬುಗಳು,** ಪು.೮೩

ಅಧ್ಯಾಯ ೨

ಹಕ್ಕಿಪಿಕ್ಕಿ ಸಮಾಜದ ಚಾರಿತ್ರಿಕ ಹಿನ್ನೋಟ

೨

ಹಕ್ಕಿಪಿಕ್ಕಿ ಸಮಾಜದ ಚಾರಿತ್ರಿಕ ಹಿನ್ನೋಟ

ಪೀಠಿಕೆ

ಪ್ರತಿಯೊಂದು ಬುಡಕಟ್ಟು ಸಮುದಾಯದ ಜನರು ತಮ್ಮ ಒಂದು ಸಮಾಜದ ಬಗೆಗೆ ಹಾಗೂ ಸಮುದಾಯದ ಹಿನ್ನೋಟದ ಬಗ್ಗೆ ನಿಖರವಾದ ಇಂತಹದೇ ಕಥೆ ಎಂದು ಹೇಳಲು ತುಂಬಾ ಕಷ್ಟ. ಆದ್ದರಿಂದ ಯಾವುದೇ ಒಂದು ಸಮುದಾಯವು ಮೂಲವಾಗಿ ಎಲ್ಲಿಂದ ಹೇಗೆ ಬಂದು ನೆಲೆಸಿದ್ದವು ಎಂದು ತಿಳಿಯಲು ಕೆಲವು ಐತಿಹಾಸಿಕ ದಂತಕಥೆಗಳು ಹಾಗೂ ಐತಿಹ್ಯಗಳಿಂದ ತಿಳಿದುಬರುವುವು. ಹೀಗೆ ಸಮಾಜದ ಹುಟ್ಟನ್ನು ಚರಿತ್ರೆಯಿಂದ ಗುರುತಿಸಬಹುದು.

ಚರಿತ್ರೆಯೆಂಬುದು ಜನ ಸಮುದಾಯಗಳ ಹುಟ್ಟು, ಬೆಳವಣಿಗೆ ಮತ್ತು ಪತನಗಳನ್ನು ಕುರಿತು ಅಧ್ಯಯನ ಮಾಡುವುದು. ಚರಿತ್ರೆ ಹಾಗೂ ಚರಿತ್ರೆಯ ಹಿಂದಿರುವ ಕಥೆಗಳು, ಪುರಾಣಗಳು, ಐತಿಹ್ಯಗಳು, ಗೀತೆಗಳು, ಲಾವಣಿಗಳು, ಇವೆಲ್ಲವುಗಳು ಒಬ್ಬ ವ್ಯಕ್ತಿಯ ಹಾಗೂ ಸಮುದಾಯದ ಚರಿತ್ರೆಯನ್ನು ತಿಳಿಸಿಕೊಡುವಲ್ಲಿ ಸಹಾಯಕವಾಗಿವೆ.

"ಚರಿತ್ರೆ ಎಂಬುವುದು ಒಂದು ನಿರ್ದಿಷ್ಟ ಪರಿಸರದಲ್ಲಿ ಹಿಂದೆ ಸಂಭವಿಸಿದ ಘಟನೆಗಳು ಅಥವಾ ಬದುಕಿ ಬಾಳಿದ ಜನಾಂಗಗಳ ಅಥವಾ ಸಮುದಾಯಗಳ ಅಧ್ಯಯನ ಎಲ್ಲಾ ಕಾಲಘಟ್ಟಗಳಲ್ಲಿಯು ಮನುಷ್ಯನ ಸ್ಥಿತಿಗತಿಗಳ ಬಗೆಗಿನ ಕಾರಣ ಉದ್ದೇಶ ಹಾಗೂ ಪರಸ್ಪರ ಸಂಬಂಧಗಳನ್ನು ನಿಖರವಾಗಿ ಅರಿತುಕೊಳ್ಳುವ ಪ್ರಯತ್ನ."[೧] ಚರಿತ್ರೆಯಿಂದಲೇ ಸಮುದಾಯಗಳ ಹಿನ್ನೆಲೆಯನ್ನು ಗುರುತಿಸುವುದು. ಪ್ರತಿ ಸಮುದಾಯಗಳ ಹಿಂದಿನ ಇತಿಹಾಸಕ್ಕೂ ಹಾಗೂ ಹೀಗಿರುವ ಇತಿಹಾಸಕ್ಕೂ ಚರಿತ್ರೆ ಎಂಬುವುದು ಬಹು ಮುಖ್ಯವಾದ ಪಾತ್ರವಹಿಸುವುದು.

ಹಕ್ಕಿಪಿಕ್ಕಿ ಸಮಾಜದ ಒಂದು ಚರಿತ್ರೆಯನ್ನಾಗಲಿ ಅಥವಾ ಯಾವುದೇ ಬುಡಕಟ್ಟು ಸಮುದಾಯಗಳು ಮೂಲವಾಗಿ ಹೇಗೆ ಬಂದವು ಎಂಬುವುದಕ್ಕೆ ಲಿಪಿ ಎಂಬುವುದು ಇಲ್ಲ. ಆದರೆ ಭಾಷೆ ಎಂಬುವುದು ಇದೆ. ಇಲ್ಲಿ ಹಕ್ಕಿಪಿಕ್ಕಿ ಸಮುದಾಯದವರು ಆಡುವ ಭಾಷೆ ವಾಗ್ರಿ. ಈ ಒಂದು ಭಾಷೆಯ ಮುಖಾಂತರ

ಉಚ್ಚರಿಸುವ ಪದಗಳ ಮೂಲಕ ಹಾಗೂ ಅವರ ಹಿರಿಯರು ಆಡುವ ಭಾಷೆಯಿಂದ ಅವರು ಎಲ್ಲಿ ಇದ್ದರು, ಇಲ್ಲಿ ಹೇಗೆ ಮತ್ತು ಏಕೆ ಬಂದು ನೆಲೆಸಿದರು ಎಂದು ತಿಳಿಯಬಹುದು.

ಎಡ್ಗರ ಥರ್ಸ್ಟನ್ ಅರಿಸ್ಟಾಟಲ್, ಮೆಕವಲ್ಲ, ವಿಲಿಯಂಜಾನ್ಸ್, ಮಾರ್ಕ್ಸ್ ಮಲ್ಲರ್, ರೆಡಕ್ಲಿಫ್ ಬ್ರಾನ್ ಮಹಾನ್ ಮೇಧಾವಿಗಳೆಲ್ಲರು ಹಲವು ಸಮುದಾಯಗಳ ಅಧ್ಯಯನವನ್ನು ಮಾಡಿರುವರು. ಸಮುದಾಯಗಳು ನೆಲೆಸಿರುವ ಪ್ರದೇಶಗಳಿಗೆ ಹೋಗಿ ಅವರನ್ನು ಗುರುತಿಸಿ ಇಂತಹದೇ ಸಮುದಾಯದವರು ಎಂದು ಗುರುತಿಸುವರು ಮುಖ್ಯವಾಗಿ ಅವರು ಆಡುವ ಭಾಷೆ, ವೇಷ, ಭೂಷಣ, ಆಚಾರ, ಸಂಸ್ಕೃತಿಯಿಂದ ಗುರುತಿಸುವರು. ಹೀಗೆ ಗುರುತಿಸಲು ಸಮುದಾಯಕ್ಕೆ ಪ್ರತ್ಯೇಕವಾಗಿ ಅವರದೇ ಆದ ಕೆಲವು ಚರಿತ್ರೆಗಳು. ಪುರಾಣಗಳು, ಕಥೆಗಳು, ಸೃಷ್ಟಿಯಾಗಿರುವುವು. ಇವು ಒಬ್ಬರಿಂದ ಒಬ್ಬರಿಗೇ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಮುಂದುವರೆಯುತ್ತವೆ.

ಹಕ್ಕಿಪಕ್ಕಿ ಸಮುದಾಯದವರು ಹೆಚ್ಚಾಗಿ ದೈವತ್ವದ ಕಲ್ಪನೆಯನ್ನು ಹೊಂದಿರುವವರು. ಈ ಬುಡಕಟ್ಟಿಗೆ ತಮ್ಮದೇಯಾದ ಪ್ರತ್ಯೇಕ ಕುಲದೇವತೆಯೊಬ್ಬಳು ಇದ್ದಾಳೆ. ನಿರ್ದಿಷ್ಟ ಪ್ರದೇಶದಲ್ಲಿ ಕಾಲಘಟ್ಟಗಳಿಗೆ ಅನುಗುಣವಾಗಿ ಅಲೆಮಾರಿಗಳಾಗಿ ಬದುಕನ್ನು ಸಾಗಿಸುವ ಬುಡಕಟ್ಟುಗಳಿಗೆ ದೇವತೆಯು "ಸಮುದಾಯದ ಹಿರಿಯರಿಗೆ ಈಕೆ ದಾರಿ ಮಾರ್ಗದಲ್ಲಿ ಸಿಕ್ಕಿದಲ್ಲದೆ, ಅವಳು ಅವರನ್ನು ನೆಲೆಸಲು ಅನುವು ಮಾಡಿಕೊಟ್ಟಿರುವಳು ಎಂದು ಹೇಳುವರು. ಕಾಲಾನಂತರ ಅವರು ಮುಂದೆ ಈ ಸ್ಥಳವನ್ನು ಬಿಟ್ಟು ಬೇರೆ ಸ್ಥಳಗಳಿಗೇ ಅಥವಾ ಜಾಗಗಳಲ್ಲಿ ಬದುಕನ್ನು ರೂಢಿಸಿಕೊಳ್ಳುವಾಗ ಅವಳ ನೆನೆಪನ್ನು ಅರಾಧನೆಗಳ ರೂಪದಲ್ಲಿ ಆಚರಿಸುವ ಮೂಲಕ ಉಳಿಸಿಕೊಳ್ಳುತ್ತಾರೆ."[೨]

ಹಕ್ಕಿಪಿಕ್ಕಿಯರು ಕೂಡ ಅಲೆಮಾರಿಗಳಾಗಿರುವರು. ಹೀಗೆ ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಬಂದು ಗುಜರಾತ್, ರಾಜಸ್ಥಾನ್, ಮಹಾರಾಷ್ಟ್ರದಿಂದ ಅವರು ಅಲೆಯುತ್ತಾ ಈಗ ಕರ್ನಾಟಕದಾದ್ಯಂತ ಬಂದು ನೆಲೆಸಿರುವರು. ಇವರನ್ನು ಮುಂಬೈ ಸರ್ಕಾರ ಈ ಅಲೆಮಾರಿಗಳನ್ನು ಗುಡ್ಡಗಾಡು ಬೇಟೆಗಾರರೆಂದು ಗುರುತಿಸಿ ೧೯೨೪ರ ಅಪರಾಧಿ ಬುಡಕಟ್ಟೆಂದು ಪರಿಗಣಿಸಿತು. "ಆ ಕಾಯ್ದೆಯ ಅಡಿಯಲ್ಲಿ ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಲು ೧೯೬೦ರಲ್ಲಿ ಬೆಳಗಾವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳಿಗೆ ಸೀಮಿತಗೊಂಡಂತೆ ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ದಾಖಲಾದ ಹಕ್ಕಿಪಿಕ್ಕಿಯರು ಪ್ರಾದೇಶಿಕ ಮಿತಿಯನ್ನು ೧೯೭೬ರಲ್ಲಿ ಸಡಿಲಿಸಿಕೊಂಡು ಕರ್ನಾಟಕದಾದ್ಯಂತ ಚದುರಿಕೊಂಡರು. ಹಕ್ಕಿಪಿಕ್ಕಿ - ಪಾದ್ರಿ, ಹರಣಿಕಾರಿ ಫಾಸ್ಸಿಪಾರ್ದಿ, ರಾಜಪಾರ್ದಿ ವಾಗ್ರಿ, ಚಿಗರಿಕಾರ್, ಖೇಡ್, ಚೆಂಚರಗಾರ್, ನೀರಶಿಕಾರಿ, ನೇಲ್ ಶಿಕಾರಿ, ಪಾಶೆಚಾರಿ ಎಂದು ಹಲವು ಹೆಸರುಗಳಿಂದ ಇವರನ್ನು ದೇಶದಾದ್ಯಂತ ಗುರುತಿಸುವರು."[೩]

೨.೧. ಹಕ್ಕಿಪಿಕ್ಕಿಯರ ಮೂಲ ನೆಲೆ ಮತ್ತು ಪ್ರಸರಣ

ಹಕ್ಕಿಪಿಕ್ಕಿ ಎಂಬ ಹೆಸರು ಅವರು "ಸಾಂಪ್ರದಾಯಿಕವಾಗಿ ಹಕ್ಕಿಗಳನ್ನು ಹಿಡಿದು ತಿನ್ನುವುದರಿಂದ ಬಂದಿರುವುದು. ಹಕ್ಕಿಪಿಕ್ಕಿ ಎನ್ನುವುದರ ಅರ್ಥವನ್ನು ಇಲ್ಲಿ ವಿವರಿಸಲಾಗಿದೆ. ಹಕ್ಕಿಪಿಕ್ಕಿಯರು ಎಂದರೆ ಪಕ್ಷಿಗಳ ಬೇಟೆಯಾಡುವ ಒಂದು ಅಲೆಮಾರಿ ಜನಾಂಗ ಎಂದು ಇನ್ನೊಂದು ಅರ್ಥ. ಈ ಸಮುದಾಯವರು ಎಲ್ಲಾ ಸಮುದಾಯಗಳಿಗಿಂತ ಕೊನೆಯವರು, ಕೊಳಕಾಗಿರುವರು, ಕೆಳಗಿರುವರು, ಅವರನ್ನು ಮುಟ್ಟಲು ಅವರು ಯೋಗ್ಯರಾದವರಲ್ಲ, ಅನಾಗರಿಕರು ಎಂದು ಅರ್ಥಯಿಸುವರು."[೪]

ಇವರು "ಮೂಲತಃ ಗುಜರಾತ್ ಹಾಗೂ ರಾಜಸ್ಥಾನದಿಂದ ಬಂದವರು. ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವಲಸೆ ಬಂದವರು. ಸುಮಾರು ೧೯೧೧ರ ವೇಳೆಗೆ ಗುಜರಾತದಿಂದ ಮಹಾರಾಷ್ಟ್ರಕ್ಕೆ ಬಂದು, ಮಹಾರಾಷ್ಟ್ರದ ಬಾಂಬೆ, ಸೊಲ್ಲಾಪುರ, ಕೋಲಾಪುರದಲ್ಲಿ ಹಾಗೂ ಕರ್ನಾಟಕದ ಹುನುಗುಂದ, ಮುದ್ದೇಬಿಹಾಳ್, ಬಾಗಲಕೋಟೆ ಗದಗ, ಹುಬ್ಬಳ್ಳಿ, ಧಾರವಾಡದಲ್ಲಿ ನೆಲೆಸಿ, ೧೯೫೦ರಲ್ಲಿ ಹುಣಸೂರು ತಾಲ್ಲೂಕಿನ ಪಕ್ಷಿರಾಜಪುರದಲ್ಲಿ ಹಲವರನ್ನು ನೆಲೆ ನಿಲ್ಲಿಸಲಾಯಿತು."[೫] ಮೂಲತಃ ಇವರು ಆರ್ಯ ಬುಡಕಟ್ಟು ಜನ ಸಮುದಾಯಕ್ಕೆ ಸೇರಿದವರಿರಬೇಕೆಂಬುದು ಸ್ಪಷ್ಟವಾಗುತ್ತದೆ. ಆದರೆ ಇವರಲ್ಲಿ ಬರುವ ಆರು ಬೆಡಗಿನ ಮನೆ ದೇವರುಗಳು ಶಕ್ತಿ ದೇವತೆಗಳಾಗಿರುವುದರಿಂದ ಇವರನ್ನು ದ್ರಾವಿಡ ಸಮುದಾಯಕ್ಕೆ ಸೇರಿದವರೇ ಎಂಬ ಸಂದೇಹ ಉಂಟಾಗುತ್ತದೆ. ಆದರೆ ಮೂಲತಃ ಇವರು ಆರ್ಯರು. ನಂತರ ಕಾಲಾನಂತರದಿಂದ ಇವರು ದಕ್ಷಿಣಕ್ಕೆ ವಲಸೆ ಬರುವುದರಿಂದ ಶಕ್ತಿ ದೇವತೆಗಳ ಆರಾಧಕರಾಗಿರುವರು. ಇದರಿಂದ ಇವರನ್ನು ಆರ್ಯರು ಎಂದು ಅಧ್ಯಯನದಲ್ಲಿ ಪರಿಗಣಿಸಲಾಗಿದೆ.

ಹಕ್ಕಿಪಿಕ್ಕಿಯವರಲ್ಲಿ ಆರು ಬೆಡಗುಗಳಿವೆ. ಪ್ರತಿಯೊಂದು ಬೆಡಗುಗಳಿಗೂ ಅವರದೇ ಆದ ಬೆಡಗು, ಪ್ರತ್ಯೇಕವಾಗಿ ಕುಲ ದೇವತೆಗಳು, ಮನೆ ದೇವರನ್ನು ಸಮುದಾಯದಲ್ಲಿ ವಿಶೇಷವಾಗಿ ಗುರುತಿಸಬಹುದು.

ಬೆಡಗುಗಳು/ಮನೆದೇವರು

೧. ಪಿಂಪ್ಲಾಜಿ - ದ್ಯಾಮವ್ವ

೨. ಕೋರೆಬಿಯಾ - ಶೆಟಿಗೆಮ್ಮ

೩. ಇಕೋತಿಯಾ - ಕಾಳಮ್ಮ

೪. ಸಾವುಂಡ್ಯಯಾ - ಗಂಗಮ್ಮ

೫. ಹರ್ಕತಿಯಾ - ಹರ್ಕತಾ ದೇವಿ

೬. ಕೊಡಿಯಾರ - ಗಹಲಾದೇವಿ

ಕುಲದ ಹೆಸರನ್ನು ಸೇರಿಸಿ ಬಿಟ್ಟು ಏಳು ಬೆಡಗುಗಳೆಂದು ಗುರುತಿಸಿ ಹೇಳುವರು. ಅಲ್ಲದೆ ದಂಡಿನ ದುರಗಪ್ಪ ಇವರ ಕುಲದೇವರು ಪಿಂಪ್ಲಾಜ ಬೆಡಗಿನ ಹಿರಿಯ ಮುಖಂಡನೇ ಈ ಸಮುದಾಯದ ಗುರು ಹಾಗೂ ನ್ಯಾಯಧೀಶನಾಗಿರುವನು. ಸಂಪೂರ್ಣ ಕುಲದ ಮುಖ್ಯಸ್ಥನು.

ಹಕ್ಕಿಪಿಕ್ಕಿಯರಲ್ಲಿ ಜಾತ್ ಮತ್ತು ಭುಕ್ಯಾಗಳೆಂಬ ಎರಡು ಪ್ರಮುಖ ಪಂಗಡಗಳು ಕಂಡುಬರುತ್ತವೆ.

೧. **ಜಾತ್ ಪಂಗಡ :** ಈ ಪಂಗಡದಲ್ಲಿ ೪ ಗೋತ್ರಗಳು ಇರುವುವು. ೧. ಮೂಡ್ ೨. ರಾಣೋ ೩. ಪವಾರ್ ೪. ವಡಾತ್ಯಾ ಹಾಗೂ ಹನ್ನೊಂದು ಬಳ್ಳಿಗಳು ಇರುವುವು.

೧. ಒಬುಲ ೨. ಬಂಗಡಿ ೩. ಕುಶಲ್ ೪. ಖತೊ ೫. ಬಾಳೊ ೬. ಶಾಮ್ ೭. ಲಿಂಬೊ ೮. ದಾಮೊ ೯. ವೈಯ್ಯೊ ೧೦. ಅಂದೋ ೧೧. ನಾಗವಳ್ಗಿ

ಭುಕ್ಯಾ ಪಂಗಡ : "ಈ ಒಂದು ಪಂಗಡದಲ್ಲಿ ೧೦ ಬಳ್ಳಿಗಳನ್ನು ಗುರುತಿಸಬಹುದು. ೧. ಮೆಕಜ ೨. ಶೇಯಿಂದು ೩. ಸಿವ್ಗೆ ೪. ಶಂಬೊ ೫. ಭೀರು ೬. ಸತ್ರು ೭. ರಾಮಚಂದ ೮. ಸಕ್ರೊ ೯. ದೇವಿದಾ ೧೦. ಕೃಷ್ಣಜಿ"[೬]

ಹಕ್ಕಿಪಿಕ್ಕಿಯರು ನೆಲೆಸಿರುವ ನೆಲೆಗಳು

ಜಿಲ್ಲೆಗಳು	ತಾಲ್ಲೂಕುಗಳು	ಗ್ರಾಮಗಳು
೧. ಬೆಂಗಳೂರು	ಹುಣಸೂರು	ಪಕ್ಷಿರಾಜಪುರ
೨. ಮೈಸೂರು	ಚಾಮರಾಜನಗರ	ಕಾಚೀನಹಳ್ಳಿ
೩. ಶಿವಮೊಗ್ಗ	ಕೆ.ಆರ್.ಪೇಟೆ	ತಳವಾಡಿಗಳು
೪. ಚಿತ್ರದುರ್ಗ	ಹೆಗ್ಗಡದೇವನ ಕೋಟೆ	ಚಿನ್ನಕುರಳಿ
೫. ತುಮಕೂರು	ನಾಗಮಂಗಲ	ಟೈಗರ್ ಬ್ಲಾಕ್
೬. ಹಾಸನ	ರಾಮನಗರ	ಶಿಕಾರಿಪುರ
೭. ಕೋಲಾರ್	ಹಗರೆ	ಹಕ್ಕಿಪಿಕ್ಕಿ ಕ್ಯಾಂಪ್
೮. ಮಂಡ್ಯ	ಚನ್ನಗಿರಿ	ಬನ್ನೆರುಘಟ್ಟ
೯. ಗುಲಬರ್ಗಾ	ಚಿಕ್ಕಮರಡಿ	ಅಂಜನೇಯ ದೇವಸ್ಥಾನ
೧೦. ಬಳ್ಳಾರಿ	ಮಲೇನಹಳ್ಳಿ	ಗೋಪನಾಳು

೧೧. ಬೀದರ್	(~~ಹೊಸಪೇಟೆ~~)	ಗೌತಮನಗರ
೧೨. ~~ಭಾಗ್ಯನಗರ~~	ಹೊಸಪೇಟೆ	ಹರಿಶ್ಚಂದ್ರ ನಗರ
೧೩. ~~ಬಿಜಾಪುರ~~	— ıı —	ಉರಮ್ಮನ ಬಯಲು
೧೪. ~~ಚಿಕ್ಕಮಂಗಳೂರು~~ — ıı —	— ıı —	ಕಾರಿಗನೂರು
೧೫. ಬಳ್ಳಾರಿ -	ಹೊಸಪೇಟೆ	ಕಂಪ್ಲಿ(ಶೇಕಾರಿಕಾಲೋನಿ)
೧೬. — ıı —	— ıı —	ಸಣ್ಣಾಪುರ

ಹಕ್ಕಿಪಿಕ್ಕಿಯರಲ್ಲಿ ಲಭ್ಯವಾಗುವ ದಂತಕಥೆಗಳು ಹಾಗೂ ಅವರ ಸಾಂಸ್ಕತಿಕ ಬದುಕನ್ನು ನೋಡಿದಾಗ, ಅವರು ಉತ್ತರ ಭಾರತದ ಮೂಲದವರೆಂಬುದು ತಿಳಿಯಬಹುದು. ರಾಜಸ್ಥಾನದ ಬಾಗ್ರಾ ಎಂಬ ಪ್ರದೇಶವು ಇವರ ಮೂಲಸ್ಥಾನವಾಗಿದೆ. ಆದ್ದರಿಂದ ಅವರು ತಮ್ಮನ್ನು 'ವಾಗ್ರಿ' ಎಂದು ಕರೆದುಕೊಳ್ಳುತ್ತಾರೆ. ಕರ್ನಾಟಕಕ್ಕೆ ಅವರು ವಲಸೆ ಬಂದಿರುವ ಬಗೆಗೆ ಇಂತಹದೇ ದಾಖಲೆ ಎಂದು ಹೇಳಲು ಸಾಧ್ಯವಾಗಿಲ್ಲ. ಆದರೆ ಸಂಚಾರಿಗಳಾದ ಇವರು ಸುಮಾರು ೨೦೦ ವರ್ಷಗಳಿಗಿಂತ ಈಚೆಗೆ ಅವರು ಇಲ್ಲಿಗೆ ಬಂದಿರಬಹುದು. ಇಲ್ಲದೆ ಇದಕ್ಕಿಂತ ಪೂರ್ವದಲ್ಲಿಯೇ ಬಂದು ನೆಲೆಸಿರಬಹುದು. ಅಲೆಮಾರಿ ಸಮುದಾಯವಾಗಿರುವ ಹಕ್ಕಿಪಿಕ್ಕಿಯವರು ಸಮಾಜದಲ್ಲಿ ಮೂಲವಾಗಿ ಅವರಿಗೆ ನೆಲೆ ಇಲ್ಲಾ. ಕೆಲವು ಪ್ರದೇಶಗಳು ಹಾಗು ಕೆಲವು ಗ್ರಾಮಗಳನ್ನು ಹೊರತುಪಡಿಸಿ ಉಳದೆಲ್ಲ ಕುಟುಂಬಗಳು ಯಾವ ಸ್ಥಳದಲ್ಲಿ ಎಲ್ಲಿ ನೆಲೆಸಿರುವವು ಎಂಬುವುದರ ಬಗ್ಗೆ ನಿಜವಾದ ಮಾಹಿತಿ ಇಲ್ಲ. ನನ್ನ ಒಂದು ಅಧ್ಯಯನದಲ್ಲಿ ಹೊಸಪೇಟೆ ಸುತ್ತಮುತ್ತ ಇರುವ ಕಂಪ್ಲಿ ಕಾರಗನೂರು, ಸಣಾಪುರ, ಶೀಕಾರಿಕಾಲೋನಿ, ಹೊಸಪೇಟೆ ಎಲ್ಲಾ ಪ್ರದೇಶಗಳಲ್ಲಿ ಅವರು ನೆಲೆಸಿರುವರು.

ಹಕ್ಕಿಪಿಕ್ಕಿ ಸಮುದಾಯದವರು ಮೂಲದಿಂದ ಇಂದಿನವರೆಗೂ ಹಲವು ಸಮಸ್ಯೆಗಳ ಸುಳಿವಿನಿಂದ ದಾಟಿ ಬಂದಿರುವರು. ಶ್ರೇಣಿಕರಣದ ಒಂದು ಕಾರಣವಾಗಿ ಬದುಕುತ್ತಿರುವ ದುಡಿಯುವ ಸಮುದಾಯವು ಅವರು ಇಂದಿಗೂ ದುಡಿಸಿಕೊಳ್ಳುವ ಮೇಲು ವರ್ಗಗಳ ದಬ್ಬಾಳಿಕೆ ಹಾಗೂ ಬಂಡವಾಳ ಶಾಹಿಗಳ ಪ್ರಭುತ್ವ ಸಮುದಾಯುಗಳ ಮಧ್ಯ ಅಸಮಾನತೆಯಿಂದ ಬದುಕುತ್ತಿವೆ. ಇವೆಲ್ಲವು ಭಾರತದ ಸಮಾಜದ ಚರಿತ್ರೆಯಲ್ಲಿ ನಿರಂತರವಾಗಿ ನಡೆದಿವೆ.

ಭಾರತದಾದ್ಯಂತ ಹಲವು ಸಮುದಾಯಗಳು ನೆಲೆಸಿರುವವು. ಇಂದು ಸಮಾಜದಲ್ಲಿ ಮುಖ್ಯವಾಗಿ ಎದ್ದುಕಾಣುವ ಸಮಸ್ಯೆ ಅಸಮಾನತೆ ಸಮಾಜ ಎಂದು ಸೃಷ್ಟಿಯಾಯಿತು. ಅಂದಿನಿಂದಲೂ ಅಸಮಾನತೆ

ಎಂಬುದು ಹುಟ್ಟಿಕೊಂಡಿತು. ಬಡವ, ಶ್ರೀಮಂತ, ಮೇಲವರ್ಗ, ಕೆಳವರ್ಗ, ದುಡಿಯುವ ದುಡಿಸಿಕೊಳ್ಳುವ, ಶೋಷಿಸುವವರು, ಶೋಷಿತರು ಎಂಬ ತತ್ವಗಳ ಆಧಾರದ ಮೇಲೆ ಸಮಾಜದಲ್ಲಿ ಸಂಘರ್ಷ ಎಂಬುವುದು ಹುಟ್ಟಿಕೊಂಡಿತು. ಅವರ ಒಟ್ಟಾರೆ ಬದಲಾವಣೆಗಳಿಗೆ ಅನುಗುಣವಾಗಿ ಸಮಾಜದಲ್ಲಿ ಅನೇಕ ರೂಪಾಂತರಗಳು ಸಂಭವಿಸುವುವು. ದುಡಿಯುವ ವರ್ಗಗಳ ಮೇಲಿನ ಶೋಷಣೆಯು ಇಂದಿಗೂ ಮುಂದುವರೆಯುತ್ತಿದೆ. ಚಾರಿತ್ರಿಕ ಬೆಳವಣಿಗೆಯನ್ನು ಸಮಾಜಶಾಸ್ತ್ರಜ್ಞರು ಸಮಾಜದ ಬೆಳವಣಿಗೆಯ ಹಂತದಲ್ಲಿ ದುಡಿಯುವ ವರ್ಗವು ಕೆಲವು ಹಂತಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

೧. ಅದಿಮ ಸಮತಾವಾದ ಸಮಾಜ, ೨. ಆರಂಭದ ಉಳಿಗಮಾನ ಕಾಲ, ೩. ರಾಜಶಾಹಿಯುಗ, ೪. ಮಧ್ಯಯುಗದ ಉಳಿಗಮಾನ ಕಾಲ, ೫. ಸಾಮಂತಶಾಹಿ ಅಥವಾ ಅರೆ ಉಳಿಗಮಾನಕಾಲ, ೬. ವಸಾಹತು ಕಾಲ ಘಟ್ಟ.

ಈ ಎಲ್ಲಾ ಕಾಲದಿಂದಲೂ ಸಮುದಾಯಗಳು ಅಂದರೆ ಕೆಳಜಾತಿ ಎನಿಸಿರುವ ಸಮುದಾಯಗಳೆಲ್ಲವು ಅನಿವಾರ್ಯವಾಗಿ ಮೇಲ್ವರ್ಗಗಳ ಮೇಲ್ಜಾತಿಗಳ ಚಾಕರಿ ಮಾಡಿ ಅವರ ಬಿಟ್ಟಿ ಸೇವೆಯನ್ನು ಮಾಡುತ್ತಿರುವ ಜಾತಿಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹೀನಾಯ ಶೋಷಣೆಗೆ ಒಳಪಟ್ಟವು.

ಹಕ್ಕಿಪಿಕ್ಕಿ ಸಮುದಾಯದ ಮೂಲವನ್ನು ಅಭ್ಯಾಸಿಸಿದಾಗ ಅವರನ್ನು ಅಪರಾಧಿಗಳು ಎಂದು ಗುರುತಿಸಿರುವರು. ೧೯೭೧ರಲ್ಲಿ Criminal Tribal act ಪ್ರಕಾರ ಇವರನ್ನು ಅಪರಾಧಿ ಸಮುದಾಯವೆಂದು ಗುರುತಿಸಿರುವರು. ಇತರ ಸಮುದಾಯದಿಂದ ಪ್ರತ್ಯೇಕ ಸಮುದಾಯವೆಂದು ಹೇಳಿದರು. ಹಕ್ಕಿಪಿಕ್ಕಿಯರನ್ನು ಅಪರಾಧಿಗಳು ಎಂದು ಗುರುತಿಸಲು ಕೆಲವು ಕಾರಣಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಹಕ್ಕಿಪಿಕ್ಕಿ ಸಮುದಾಯ ಸ್ವಚ್ಛಂಧವಾದ ನಿಸರ್ಗದ ಮಡಿಲಿನಲ್ಲಿ ಸುಂದರವಾದ ಅರಣ್ಯದಲ್ಲಿ ಬದುಕನ್ನು ತಮ್ಮದಾಗಿಸಿಕೊಂಡು ಜೀವನ ನಡೆಸುತ್ತಿದ್ದರು. ಅವರು ಸಾವಿರಾರು ವರ್ಷಗಳಿಂದ ಯಾವುದೇ ಖಾತೆ, ಕಂದಾಯ, ಗೊಂದಲ ಗೋಜು ಇಲ್ಲದೆ ಸಹಜವಾಗಿ ಇಡೀ ಭೂಮಿ ನಮ್ಮದು ಎಂದು ಭೂಮಿಯಲ್ಲಿ ಕೃಷಿ, ಪಶುಪಾಲನೆ, ಬೇಟೆ, ಕುಮ್ರಿ ಬೇಸಾಯ, ಅರಣ್ಯದಲ್ಲಿ ಸಿಗುವ ಉತ್ಪನ್ನಗಳನ್ನು ಉತ್ಪಾದಿಸಿಕೊಂಡು ಪ್ರಕೃತಿಯ ದೈವತ್ವದ ಕಲ್ಪನೆಯಲ್ಲಿ ಪಾಪ ಪುಣ್ಯಗಳ ಅರಿವಿನಲ್ಲಿ ಬುಡಕಟ್ಟು ಸಮುದಾಯಗಳು ಜೀವನ ನಡೆಸುತ್ತಿದ್ದರು.

ಆಧುನಿಕ ವ್ಯವಸ್ಥೆ ಎಂಬುವುದು ಎಂದಿನಿಂದ ಕಾಲಿರಿಸಿತು ಅಂದಿನಿಂದಲೇ ಬುಡಕಟ್ಟು ಸಮುದಾಯಗಳು ಗೊಂದಲಮಯ ಸ್ಥಿತಿಯಲ್ಲಿ ಸಿಲುಕಿ, ಅಲೆದಾಡುವ ಹಾಗೂ ಅಲೆಮಾರಿಗಳಾಗಿ ಒಂದು ಕಡೆಯಲ್ಲಿ ನೆಲೆನಿಲ್ಲದೆ ಪರಿವರ್ತವಾದವು ಎಂದು ಹೇಳಬಹುದು.

"ಬ್ರಿಟಿಷ್ ವಸಾಹತುಶಾಹಿಗಳ ಆಳ್ವಿಕೆಯಿಂದ ಇಡೀ ಭೂಮಿಯನ್ನು ಬಹುಸಂಖ್ಯಾತರ ಮತ್ತು ಮೇಲ್ವರ್ಗದ ಜನರ ಆಸ್ತಿಯನ್ನಾಗಿ ಪರಿವರ್ತಿಸಿ ಅಭಯಾರಣ್ಯಗಳ ಒಂದು ನೆಪದಲ್ಲಿ ಸಮಾಜ

ಪುನರ್‌ನಿರ್ಮಾಣ ಕಾರ್ಯದ ಅಡಿಯಲ್ಲಿ ಅರಣ್ಯದಲ್ಲಿದ್ದ ಸಮುದಾಯಗಳನ್ನು ಅರಣ್ಯದಿಂದ ಹೊರಹಾಕಲಾಯಿತು. ಹೀಗೆ ರಸ್ತೆ ನಿರ್ಮಾಣ, ಅಣೆಕಟ್ಟು, ಹೊಸ ಪ್ಲಾಂಟೇಷನ್‌ಗಳ ನೆಪದಲ್ಲಿ ಹಲವು ಯೋಜನೆಗಳನ್ನು ಜಾರಿಗೆ ತಂದರು."[೮]

"ವೆರಿಯರ್ ಎಲ್ವಿನ್‌ರವರು ಬುಡಕಟ್ಟು ಜನರನ್ನು ಅಪಾರವಾಗಿ ಪ್ರೀತಿಸುತ್ತಿದ್ದರು. ಅವರು ಬುಡಕಟ್ಟು ವ್ಯಕ್ತಿಯೊಂದಿಗೆ ಸಂಭಾಷಿಸುತ್ತಿದ್ದಾಗ ನಿಮ್ಮ ಬಡತನಕ್ಕೆ ಏನು ಕಾರಣವೆಂದು ಕೇಳಿದರು. ಆಗ ಆ ವ್ಯಕ್ತಿಯು ಈ ರೀತಿಯಾಗಿ ಹೇಳುತ್ತಾನೆ. ನಾವು ತುಂಬ ಸುಖಿಗಳಾಗಿದ್ದೆವು. ಅಷ್ಟರಲ್ಲಿ ನಮ್ಮ ನಾಡಿನ ಮಧ್ಯೆ ರೈಲು ಕಂಬಿ ಹಾಕಿ ರೈಲೊಂದು ಬಂತು. ಆ ರೈಲು ಬಂದಾಗ ನಮ್ಮ ಎಲ್ಲ ದೇವತೆಗಳು ಅದನ್ನು ಹತ್ತಿ ಕಾಡುಬಿಟ್ಟು ನಗರ ಸೇರಿಬಿಟ್ಟರು. ಅಲ್ಲಿನ ಜನ ನಮ್ಮ ದೇವತೆಗಳ ನೆರವಿನಿಂದ ಶ್ರೀಮಂತರಾಗುತ್ತಿದ್ದಾರೆ. ಆದರೆ ನಾವು ಬಡವರಾಗುತ್ತಿದ್ದೇವೆ"[೯] ಎಂದು ಹೇಳಿದನು. ಈ ಒಂದು ಮಾತಿನ ತಾತ್ಪರ್ಯದಿಂದ ತಿಳಿಯುವುದೇನೆಂದರೆ, ನಗರಗಳಿಗೆ ವಲಸೆ ಹೋದ ಜನರು ಬದಲಾವಣೆ ಹೊಂದಿದ್ದಾರೆ. ಬದಲಾಗಿದ್ದಾರೆ, ಶ್ರೀಮಂತರಾಗುತ್ತಿದ್ದಾರೆ. ಆದರೆ ನಾವು ಇಲ್ಲೇ ಇರುವುದರಿಂದ ಬಡತನದಲ್ಲಿ ಬಳಲುತ್ತಿದ್ದೇವೆ ಎಂದು ಅವರು ಹೇಳುವ ತಾತ್ಪರ್ಯ ದೇವತೆಗಳು ಅವರ ಜೊತೆಯಲ್ಲಿ ಹೋಗಿರುವವು. ದೇವರೆ ಅವರ ಜೊತೆಯಲ್ಲಿ ಇರುವುದು ಎಂಬ ನಂಬಿಕೆಯಲ್ಲಿ ಇರುವುದರಿಂದ ನಮ್ಮಲ್ಲಿದ್ದ ಎಲ್ಲಾ ಸಂಪತ್ತು ರೈಲಿನಲ್ಲಿ ಇದೆ ಎಂದು ಅವರು ಹೇಳುವರು.

ಬ್ರಿಟಿಷರು ಅರಣ್ಯದಿಂದ ಇವರನ್ನು ಹೊರಹಾಕಿದ್ದರು. ಕೆಲವು ಸಮುದಾಯಗಳು ಬೇರೆ ಬೇರೆ ಕಡೆ ನೆಲೆಸಲು ಅರಣ್ಯವನ್ನು ಬಿಟ್ಟರು. ಆದರೆ ಪ್ರಕೃತಿಯನ್ನೇ ದೈವವೆಂದು ನಂಬಿರುವ ಸಮುದಾಯಗಳು ಅರಣ್ಯವನ್ನು ಬಿಡಲು ಒಪ್ಪಲಿಲ್ಲ. ಅವರು ಇಡೀ ಕಾಡು ನಮ್ಮದು ನಮ್ಮ ಕಾಡು. ಭೂಮಿ ನಮ್ಮದು ಎಂದು ಸಂಘರ್ಷಕ್ಕೆ ಇಳಿದರು.

"ಡಸ್ಟ್ ಆನ್.ದಿ. ರೋಡ್ " ಎಂಬ ಗ್ರಂಥದಲ್ಲಿ ಮಹಾಶ್ವೇತಾ ದೇವಿಯರು ಸಮುದಾಯಗಳು ತಮ್ಮ ಒಂದು ಭೂಮಿಗಾಗಿ ನಡೆಸಿದ ಸಂಘರ್ಷವನ್ನು ಬಹಳ ವಿಸ್ತಾರವಾಗಿ ವಿವರಿಸಿದ್ದಾರೆ. ಜಾರ್ಖಡನ್ ಸಿಂಘಭೂಮ್ ಜಿಲ್ಲೆಯಲ್ಲಿ ಬಂಡವಾಳಶಾಹಿಗಳು ಹುಟ್ಟು ಹಾಕಿದ ಕೋಮುಗಲಭೆಯು ೧೯೪೦ರಲ್ಲಿ ಇಡೀ ದೇಶದ್ಯಾಂತ ಹರಡಿತು ಎಂದು ಅವರು ವಿವರಿಸಿರುವರು."[೧೦]

ಈ ರೀತಿಯಾಗಿ ಸಂಘರ್ಷಕ್ಕೆ ಇಳಿದ ಸಮುದಾಯಗಳನ್ನು ಹತ್ತಿಕ್ಕಲು ಕಂಪನಿ ಆಡಳಿತಗಾರರು ಹಲವು ರೀತಿಯ ಯೋಜನೆಗಳನ್ನು ಮಾಡಿ ಬುಡಕಟ್ಟು ಸಮುದಾಯಗಳಿಗೆ ಅಮಾನೀಯವಾಗಿ ನಿಮ್ಮನ್ನು ಉದುರಿಸುವೆವು ಎಂದು ಹೇಳಿ ಹಲವು ರೀತಿಯಲ್ಲಿ ಹಲವು ಸೌಲಭ್ಯಗಳನ್ನು ಕಲ್ಪಿಸಿಕೊಡುವೆವು ಎಂದು ಹೇಳಿ ಅವರನ್ನು ಕಾಡಿನಿಂದ ಹೊರ ಹಾಕಿದರು. ಮುಗ್ಧ ಹಾಗೂ ಮೂಢತ್ವದ ಕಲ್ಪನೆಯಲ್ಲಿದ್ದ ಜನರನ್ನು

ಕಂಪನಿ ಸರ್ಕಾರವು ಅವರಿಗೆ ಯಾವುದೇ ರೀತಿಯ ಸಹಾಯವನ್ನು ಒದಗಿಸದೇ ಅವರು ತಮ್ಮ ತಮ್ಮ ಮನೆಯಲ್ಲಿ ಹೊಲ, ಗದ್ದೆ, ಜಮೀನು, ಎಸ್ಟೇಟು, ಕಾರ್ಖಾನೆ ಕಂಪನಿಗಳಲ್ಲಿ ಕೂಲಿ ಕಾರ್ಮಿಕರಾಗಿ ಹಾಗೂ ಜೀತದಾಳುಗಳಾಗಿ ಅವರ ಒಂದು ಪ್ರಭುತ್ವದ ಅಡಿಯಲ್ಲಿ ಕೆಲಸ ಮಾಡುವಂತೆ ಮಾಡಿದರು. ಹೀಗೆ ಮೇಲುವರ್ಗವೆನಿಸುವ ಸಮಾಜದವರು, ಬುಡಕಟ್ಟು ಜನರನ್ನು ಬಹು ಕೀಳುಮಟ್ಟದಲ್ಲಿ ಶೋಷಣೆ ಮಾಡಿದರು.

ಬುಡಕಟ್ಟು ಸಮುದಾಯಗಳು ಅಪರಾಧಿಗಳಾಗಿ ಹೀಗೆ ಪರಿವರ್ತಿತ ಹೊಂದಿದ್ದರು. ಹಾಗೂ ಕಂಪನಿ ಆಡಳಿತಗಾರರು ಬ್ರಿಟಿಷರು ರಾಜಶಾಹಿಗಳು ಅವರ ಮೇಲೆ ಯಾವ ರೀತಿಯಾಗಿ ಶೋಷಣೆ ಮಾಡಿದರು ಎಂದು ಆದಿವಾಸಿ ಆಖ್ಯಾನ ಅಧ್ಯಯನ(ಅಲೆಮಾರಿಗಳ ಆರ್ಥಿಕ ಬದುಕಿನ ರೂಪಾಂತರಗಳ ಅಧ್ಯಯನ)ದಲ್ಲಿ ಡಾ.ಎ.ಎಸ್.ಪ್ರಭಾಕರ್‌ರವರು ಬಹುವ್ಯಾಪಕವಾಗಿ ವಿವರಿಸಿದ್ದಾರೆ.

"೧೮೭೧ರಲ್ಲಿ Crimina Tribe Act ಉತ್ತರ ಭಾರತದಲ್ಲಿ ಕಂಪನಿ ಸರ್ಕಾರವು ೧೭೯೩ರಲ್ಲಿ ಕೆಲವು ಸಮುದಾಯಗಳನ್ನು ಪಟ್ಟಿ ಮಾಡಿ ಅವು ಅಪಾಯಕಾರಿಗಳೆಂದು ಗುರುತಿಸಿತು. ಇದರಲ್ಲಿ ಶೇ.೯೫ರಷ್ಟು ಸಮುದಾಯಗಳು ಅಲೆಮಾರಿಗಳು. ಅವರಲ್ಲಿ ಹಕ್ಕಿಪಿಕ್ಕಿ ಸಮುದಾಯದವರು ಒಬ್ಬರು."[೧೧] ಅವರು ಮೊದಲಿನಿಂದಲೂ ಬೇಟೆಯನ್ನು ಪ್ರಮುಖ ಕಸುಬನ್ನಾಗಿ ಮಾಡಿಕೊಂಡಿರುವ ಇವರು ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ಜೀವನ ಸಾಗಿಸುತ್ತಿದ್ದರು. ಆದರೆ ಬ್ರಿಟಿಷರ ಕೆಲವು ಯೋಜನೆಯ ಅಡಿಯಲ್ಲಿ ಅರಣ್ಯ ಸಂರಕ್ಷಣೆ ಹಾಗು ವನ್ಯ ಮೃಗಗಳ ಸುರಕ್ಷಣೆಯನ್ನು ಕಾಪಾಡಿಕೊಂಡು ಹೋಗುವ ನಿಟ್ಟಿನಲ್ಲಿ ಬೇಟೆಯನ್ನು ನಿಷೇಧಿಸಲಾಯಿತು. ಅಲೆಮಾರಿಗಳಾಗಿದ್ದ ಇವರು ಬೇಟೆಯನ್ನು ಬಿಟ್ಟ ನಂತರ ಅವರು ತಮ್ಮ ಜೀವನ ಸಾಗಿಸುವುದಕೋಸ್ಕರ ಹಲವು ಅರಣ್ಯ ಉತ್ಪನ್ನಗಳ ಸಾಮಾನುಗಳಾದ ಜೇನು, ಕಟ್ಟಿಗೆ, ಹಣ್ಣು, ಔಷಧ ಗಿಡ ಮೂಲಿಕೆಗಳನ್ನು ತಂದು ಮಾರಾಟ ಮಾಡಿ ಜೀವನ ನಡೆಸುತ್ತಿದ್ದರು. ಹೀಗೆ ಅರಣ್ಯಗಳಿಗೆ ಕದ್ದು ಹೋಗಿ ತಂದು ಮಾರಾಟ ಮಾಡುವುದರಿಂದ ಇವರಿಗೆ ಕಳ್ಳರು, ಅಪರಾಧಿಗಳು ಎಂದು ಅವರನ್ನು ಹಿಡಿದು ಶಿಕ್ಷೆಗೆ ಗುರಿ ಮಾಡುತ್ತಿದ್ದರು. ಇದರಿಂದ ಅವರು ಹೀಗೆ ವ್ಯಾಪಕ ಔಷಧ ಮಾರಾಟ, ಗದ್ದೆಗಳ ಸಂರಕ್ಷಣೆ, ರಾತ್ರಿಯಲ್ಲಿ ಬೇರೆಯವರ ಹೊಲಗಳನ್ನು ಕಾವಲು ಕಾಯುವ ಕೆಲಸ, ಪ್ರಾಣಿಗಳನ್ನು ಹೊಡೆದು ಜನರ ಸಂರಕ್ಷಣೆಗೋಸ್ಕರ ಇಂತಹ ಸಮುದಾಯದವರನ್ನು ನೇಮಿಸುವರು.

ಗುಜರಾತ್ ಹಾಗೂ ಮಹಾರಾಷ್ಟ್ರದ ಮೂಲದಿಂದ ಇವರು ಕರ್ನಾಟಕಕ್ಕೆ ಬಂದು ಹಲವು ಪ್ರದೇಶ, ಗ್ರಾಮ, ಪಟ್ಟಣಗಳಲ್ಲಿ ನೆಲೆಸಿರುವರು. ಇವರು ಎಲ್ಲೇ ಬಂದು ನೆಲೆಸಿದ್ದರು. ಅವರು ಆಡುವ ಭಾಷೆ ಇರುವ ರೀತಿ ನೀತಿ, ಸಂಸ್ಕೃತಿಯಿಂದ ಬೇರೆ ಸಮುದಾಯದಿಂದ ಹಕ್ಕಿಪಿಕ್ಕಿಯರನ್ನು ಪ್ರತ್ಯೇಕವೆಂದು ಗುರುತಿಸಬಹುದು.

ಹೊಸಪೇಟೆ ತಾಲ್ಲೂಕಿನ ಕಂಪ್ಲಿ ಪಟ್ಟಣದಲ್ಲಿ ಅವರು ಇದು ಪ್ರತ್ಯೇಕವಾಗಿ ತಮ್ಮದೇಯಾದ ಒಂದು ಕಾಲೋನಿಯಲ್ಲಿ ಗ್ರಾಮಗಳಲ್ಲಿ ವಾಸವಾಗಿದ್ದು, ಸಮುದಾಯದವರ ಜೊತೆ ಒಂದುಗೂಡುತ್ತಿದ್ದಾರೆ. ಇಂದಿಗೂ ಅವರು ಬೇಟೆಯನ್ನು ಬಿಟ್ಟಿಲ್ಲ. ಇಂದಿಗೂ ಗ್ರಾಮಗಳಲ್ಲಿ ಅವರು ಕಾಡುಗಳ ಹತ್ತಿರ ಓಡಾಡಿ ಪಕ್ಷಿ, ಪ್ರಾಣಿಗಳನ್ನು ಹಿಡಿದು ಅವುಗಳನ್ನು ಸೇವಿಸುವರು. ಸುಲಭವಾಗಿ ಹಿಡಿಯುವ ಚಾಣಾಕ್ಷತನ ಇಂದಿಗೂ ಇವರಲ್ಲಿದೆ. ಸಾಮಾಜಿಕ ಬದಲಾವಣೆ ಒಂದು ಪ್ರಕ್ರಿಯೆಯು ಪಾರಂಪರಿಕ ವಲಯದಿಂದ ಸಹಜವಾಗಿಯೇ ವರ್ತಮಾನದ ಕಡೆಗೆ ಸಾಗುತ್ತಿರುತ್ತದೆ. ಮೂಲ ಸ್ಥಿತಿಯಿಂದ ಬೇರೆಡೆಗೆ ಚಲಿಸಲು ಹಾತೊರೆಯುತ್ತಿರುತ್ತವೆ. ತಮ್ಮನ್ನು ತಾವು ಸಮಾಜದಲ್ಲಿ ಉನ್ನತ ಮಟ್ಟಕ್ಕೆ ಏರಿಸಬೇಕು. ಸಮಾಜದಲ್ಲಿ ಉತ್ತಮವಾದ ಸ್ಥಿತಿಯಲ್ಲಿ ಇರಬೇಕು ಎಂಬ ಹಂಬಲದಿಂದ ಹಕ್ಕಿಪಿಕ್ಕಿಯಂತಹ ಸಮುದಾಯಗಳು ತಮ್ಮ ಪಾರಂಪರಿಕ ಚಹರೆಗಳನ್ನು ಉಳಿಸಿಕೊಂಡು ಬದಲಾವಣೆಯ ಕಡೆಗೆ ಚಲಿಸುತ್ತಿವೆ. ಹಾಗೂ ಬದಲಾವಣೆ ಹಲವು ವಿಷಯದಲ್ಲಿ ಬದಲಾಯಿಸದಿದ್ದರೂ, ಬದಲಾಯಿಸಲು ಪ್ರಯತ್ನಿಸುತ್ತವೆ.

೨.೨. ಹಕ್ಕಿಪಿಕ್ಕಿ ಸಮಾಜದ ಚಾರಿತ್ರಿಕ ಕತೆ

''ಬುಡಕಟ್ಟು ಸಮುದಾಗಳ ಸೃಷ್ಟಿ ಪುರಾಣಗಳು ಅಥವಾ ಚರಿತ್ರೆಯನ್ನು ಗಮನಿಸಿದಾಗ ಎಲ್ಲಾ ಸೃಷ್ಟಿ ಪುರಾಣ ಹಾಗೂ ಅದರ ಹಿನ್ನಲೆಯಲ್ಲಿ ಆ ಸಮುದಾಯದ ಹುಟ್ಟಿಗೆ ಪ್ರಮುಖನಾಗಿದ್ದ ವ್ಯಕ್ತಿ ಅಥವಾ ಮೂಲ ಪುರುಷ ನೆನಿಸುವವನು, ಯಾವುದೋ ಒಂದು ಶಾಪದಿಂದ ಹುಟ್ಟುವನು. ಆದ್ದರಿಂದ ಚರಿತ್ರೆಯು ಒಂದು ಶಾಪದಿಂದ ಸಮುದಾಯ ಹುಟ್ಟಿತು. ಆದ್ದರಿಂದಲೇ ನಮ್ಮ ಸಮುದಾಯಗಳು ಹೀಗೆ ಕೀಳು ಹಾಗು ಕೆಳದರ್ಜೆಯಲ್ಲೇ ಇರುವುವು ಎಂದು ಹೇಳುವರು.''[೧೨] ಮೇಲ್ವರ್ಗದ ಜನರು ಹೊಂದಿರುವ ಪುರಾಣಗಳಲ್ಲಿ ಆ ದೇವರುಗಳು ಒಳ್ಳೆ ರೀತಿಯಲ್ಲಿ ಶ್ರೀಮಂತಿಕೆಯ ಒಂದು ಪ್ರತೀತದಲ್ಲಿ ಉದ್ಭವಿಸುವುವು. ಆದರೆ ಕೆಳ ಸಮುದಾಯದ ದೇವರು ಬಡವನಾಗಿರುವನು. ಈ ದೇವರುಗಳು ಅರಣ್ಯವೇ ಬೆಟ್ಟ ಗುಡ್ಡಗಳಲ್ಲಿ ಊರ ಹೊರಗಿನ ಆಚೆಯಲ್ಲಿ ನೆಲೆಸಿರುವರು. ಹೀಗೆ ಸಮುದಾಯ ಬೆಳವಣಿಗೆಗೆ ಹಾಗೂ ಆರ್ಥಿಕತೆಯ ಒಂದು ಭದ್ರತೆಗೆ ನಾಂದಿಯಾಗುವುದು. ಆ ಸಮುದಾಯದ ಹೊಂದಿರುವ ಚಾರಿತ್ರಿಕತೆಯ ಮೇಲೆ ಎಂದು ಹೇಳುವುದೇ ಇದರ ತಾತ್ಪರ್ಯ.

ಹಕ್ಕಿಪಿಕ್ಕಿ ಸಮುದಾಯವು ಕೂಡಾ ತನ್ನ ಸಮಾಜದ ಹಿನ್ನೆಲೆ ಹಾಗೂ ಅದರ ಹುಟ್ಟಿಗೆ ಸಮುದಾಯದ ಸೃಷ್ಟಿಗೆ ಹಲವು ರೀತಿಯ ಐತಿಹ್ಯಗಳು, ಪುರಾಣಗಳ ಕಥೆಗಳು ಮಹಾಕಾವ್ಯಗಳಲ್ಲಿ ಐತಿಹ್ಯ ಗುರುತಿಸುವುದು. ಹಕ್ಕಿಪಿಕ್ಕಿಯರ ಉಪಸಂಸ್ಕೃತಿ ಮಾಲೆ ಹಾಗೂ ಕರ್ನಾಟಕ ಬುಡಕಟ್ಟುಗಳ ಸಂಪುಟಗಳಲ್ಲಿ ಹಕ್ಕಿಪಿಕ್ಕಿಯರ ಚಾರಿತ್ರಕತೆಗೆ ಮೂಲವಾಗಿರುವ ಐತಿಹ್ಯಗಳನ್ನು ಹಲವು ಕಥೆಗಳಲ್ಲಿ ಕಾಣಬಹುದು. ಆವರೆ ಹಕ್ಕಿಪಿಕ್ಕಿಯರ ಒಂದು ಚಾರಿತ್ರಿಕತೆಗೆ ಸಂಬಂಧಿಸಿದಂತೆ ಸಮಾಜದ ಸೃಷ್ಟಿಗೆ ಕಾರಣವಾದ ಕೆಲವು ಐತಿಹ್ಯಗಳನ್ನು ಈ ಅಧ್ಯಯನದಲ್ಲಿ ಹೇಳಲಾಗಿದೆ.

ಐತಿಹ್ಯ ಒಂದು : ಹಕ್ಕಿಪಿಕ್ಕಿಯ ಮೂಲ ಪುರುಷ ಕಂಚಾ. ಅವನಿಗೆ ಮೂರು ಜನ ಮಕ್ಕಳು. ಅವರು ಮಾರ್ವಾಡಿ, ಬಂಜಾರ ಮತ್ತು ಹಕ್ಕಿಪಿಕ್ಕಿ(ವಾಗ್ರಿ) ಮೂರು ಜನ ಮಕ್ಕಳಿಗೆ ಕಾಂಚಾ ತನ್ನ ಆಸ್ತಿ ಹಂಚಿದನು. ಆಸ್ತಿ ಹಂಚುವಾಗ ಸಮಪಾಲನ್ನು ಮಾಡಲಿಲ್ಲ. ಕೇವಲ ಎರಡು ಪಾಲನ್ನು ಮಾಡಿ ಒಂದು ಪಾಲನ್ನು ಮಾರ್ವಡಿಗೆ ಇನ್ನೊಂದು ಪಾಲನ್ನು ಬಂಜಾರನಿಗೆ ನೀಡಿದನು. ಕೊನೆಗೆ ಅವನಲ್ಲಿ ಏನು ಉಳಿಯಲಿಲ್ಲ. ಹಕ್ಕಿಪಿಕ್ಕಿಗೆ ಏನು ಕೊಡಲಿಲ್ಲ. ಬರೀ ಕೈಯಿಂದ ಹೊರಗೆ ಕಳುಹಿಸಿದನು. ಮಾರ್ವಾಡಿ ಹಾಗು ಬಂಜಾರುಗಳು ತಂದೆಯ ಸಂಪತ್ತಿನಿಂದ ವ್ಯಾಪಾರ ಮಾಡಿದರು. ಶ್ರೀಮಂತರಾದರು. ಆದರೆ ಹಕ್ಕಿಪಿಕ್ಕಿ ಕಾಡಿಗೆ ಹೋಗಿ ಬೇಟೆಯಾಡಿ ಅಲ್ಲಿಯೇ ಉಳಿವನು. ಅಲ್ಲಿ ಉಳಿದಿರುವರೇ ಹಕ್ಕಿಪಿಕ್ಕಿಯವರು. ಹಕ್ಕಿಪಿಕ್ಕಿ ಸಮುದಾಯದವರು ಎಂದು ಈ ಒಂದು ಐತಿಹ್ಯದಿಂದು ತಿಳಿದುಬರುವುದು.

ಐತಿಹ್ಯ ಎರಡು : ಮೊಗಲರು ಭಾರತ ದೇಶದ ಆಡಳಿತ ನಡೆಸುವ ಪೂರ್ವದಲ್ಲಿ ಅನೇಕ ಸಣ್ಣಪುಟ್ಟ ಸಾಂಸ್ಕೃತಿಕ ರಾಜರುಗಳು ರಾಜ್ಯಭಾರ ಮಾಡುತ್ತಿದ್ದರು. ಅಂಥವರಲ್ಲಿ ರಜಪೂತ ವಂಶದ ರಾಣಾ ಪ್ರತಾಪಸಿಂಗನು ಒಬ್ಬನಾಗಿದ್ದನು. ರಾಜಸ್ಥಾನ ಹಾಗು ದೆಹಲಿಯ ಕೆಲವು ಪ್ರದೇಶಗಳು ಅವನ ವಶದಲ್ಲಿದ್ದವು. ಆ ಸಮಯದಲ್ಲಿ ಮೊಗಲರ ಆಳ್ವಿಕೆಯು ಪ್ರಾರಂಭಗೊಂಡು ಅಕ್ಬರನು ರಾಣಾ ಪ್ರತಾಪಸಿಂಗನ ಉದಯಪುರದ ಮೇಲೆ ದಾಳಿ ಮಾಡಿದನು. ಪರಿಸ್ಥಿತಿಯ ಪ್ರತಿಕೂಲತೆಯಿಂದಾಗಿ ರಾಣಾ ಪ್ರತಾಪಸಿಂಗನು ಅಕ್ಬರನನ್ನು ಎದುರಿಸಲಾಗದೆ ಹಳದಿಘಟ್ಟ ಪರ್ವತಕ್ಕೆ ಹೋಗಿ ಅಡಗಿಕೊಂಡನು. ಆಗ ಅವನೊಂದಿಗೆ ಅನೇಕ ಜನ ವೀರಯೋಧರು ಓಡಿ ಹೋದರು. ಅಕ್ಬರನು ಅಲ್ಲಿಯೂ ತನ್ನ ದಾಳಿಯನ್ನು ಮುಮದುವರೆಸಿದನು. ರಾಣಾಪ್ರತಾಪಸಿಂಗನು ಹಳದಿಘಟ ಯುದ್ಧದಲ್ಲಿ ಸೋಲನ್ನು ಅನುಭವಿಸಿದನು. ವಿಜಯನಾದ ಅಕ್ಬರನು ಶರಣಾಗತನಾದರೆ ಮರಳಿ ರಾಜ್ಯವನ್ನು ಕೊಡುವುದಾಗಿ ರಾಣಾಪ್ರತಾಪಸಿಂಗನಿಗೆ ಸಂದೇಶವನ್ನು ಕಳುಹಿಸಿದನು. ಸ್ವಾಭಿಮಾನಿ ರಾಣಾಪ್ರತಾಪಸಿಂಗನು ಅದಕ್ಕೆ ಒಪ್ಪದೆ ಯುದ್ಧ ಭೂಮಿಯಲ್ಲಿಯೇ ಮರಳಿ ರಾಜ್ಯ ಪಡೆಯುವ ಪ್ರತಿಜ್ಞೆ ಮಾಡಿ ಕಾಡನ್ನು ಸೇರಿದನು. ಅವನೊಂದಿಗೆ ಅನೇಕ ಜನ ಯೋಧರು ತಮ್ಮ ಕುಟುಂಬದೊಂದಿಗೆ ಕಾಡನ್ನು ಸೇರಿದರು. ರಾಣಾ ಪ್ರತಾಪ ಸಿಂಗನನ್ನು ಸೋಲಿಸಲು ಅಕ್ಬರನು ಅನೇಕ ಪ್ರಕಾರದ ತೊಂದರೆಗಳನ್ನು ಕೊಟ್ಟನು. ರಾಜನ ಪ್ರತಿಜ್ಞೆಯೇ ತಮ್ಮ ಪ್ರತಿಷ್ಠೆಯೆಂದು ಪಾಲಿಸಿಕೊಂಡು ಬಂದ ರಜಪೂತ ಕುಟುಂಬಗಳು ಅನೇಕ ರೀತಿಯ ಕಷ್ಟನಷ್ಟಗಳನ್ನು ಅನುಭವಿಸ ತೊಡಗಿದವು. ಕೊನೆಗೆ ಅಕ್ಬರನನ್ನು ಎದುರಿಸಲಾಗದೆ ರಾಣಾಪ್ರತಾಪಸಿಂಗನು ಸೋತುಹೋದನು. ರಾಣಾ ಪ್ರತಾಪಸಿಂಗನ ಸೈನ್ಯದಲ್ಲಿದ್ದ ಮಾರವಾಡಿ-ಗುಜಾರ ಹಾಗೂ ರಜಪೂತ ಪಂಗಡಗಳು ಮೊಗಲರ ಹಿಂಸೆಗೆ ಹೆದರಿ ನಾಡನ್ನು ಸೇರಿದವು. ಇನ್ನು ಕೆಲವು ಕುಟುಂಬಗಳು ಅಡವಿಯಲ್ಲಿಯೇ ಉಳಿದುಕೊಂಡು ಸಂಚಾರಿಗಳಾಗಿ ಬದುಕನ್ನು ಸಾಗಿಸಿದವು. ಮುಂದೆ ಇವರೇ ಹಕ್ಕಿಪಿಕ್ಕಿ ಸಮುದಾಯದವರು ಎಂದು ಕರೆಯಿಸಿಕೊಂಡರು".[೧೩]

ಇತಿಹಾಸ ಸಂಬಂಧಿಸಿದ ಐತಿಹ್ಯವನ್ನು ಹಕ್ಕಿಪಿಕ್ಕಿ ಸಮುದಾಯದ ಚರಿತ್ರೆಯಲ್ಲಿ ಗುರುತಿಸಲಾಗಿದೆ. ಹೊಸಪೇಟೆ ತಾಲ್ಲೂಕಿನಲ್ಲಿ ನೆಲೆಸಿರುವ ಹಕ್ಕಿಪಿಕ್ಕಿ ಸಮಾಜದ ಚಾರಿತ್ರಿಕತೆಯ ಒಂದು ಹಿನ್ನಲೆಯನ್ನು ಕ್ಷೇತ್ರಕಾರ್ಯದ ಮೂಲಕ ಪರಿಗಣಿಸಿದಾಗ ಅವರು ತಮ್ಮ ಒಂದು ಸಮಾಜದ ಬಗ್ಗೆ ಹೀಗೆ ಹಲವು ಬಗೆಯ ಕಥೆಗಳ ವಿವರಗಳನ್ನು ಹೇಳುವರು. ತುಳಜಾಭವಾನಿಯ ಕಥೆಯನ್ನು ಹೇಳುವರು. ಹೆಚ್ಚಾಗಿ ಇವರು ಶಕ್ತಿ ದೇವತೆಗಳನ್ನು ಪೂಜಿಸುವುದರಿಂದ ಬೇರೆ ಬೇರೆ ಸಮುದಾಯದ ದೇವತೆಯಾದ ತುಳಜಾಭವಾನಿಯನ್ನು ಇವರು ಪೂಜಿಸುತ್ತಿದ್ದಾರೆ. ಆದರೆ ಇದು ಶಿಕಾರಿ ಕಾಲೋನಿಯಲ್ಲಿ ನೆಲೆಸಿರುವ ಹಕ್ಕಿಪಿಕ್ಕಿಯರು ಆ ದೇವತೆಯನ್ನೇ ಹೆಚ್ಚಾಗಿ ಪೂಜಿಸುವರು. ಬೇರೆ ಸಮುದಾಯಗಳ ಪ್ರಭಾವ ಈ ಸಮುದಾಯಗಳ ಮೇಲೆ ಬೀಳುವುದರಿಂದ ತಮ್ಮ ಮನೆ ದೇವರು ಹಾಗೂ ಕುಲದೇವರಗಳ ಜೊತೆ ತುಳಜಾಭವನಿಯನ್ನು ಪೂಜಿಸುವರು ಹಾಗೂ ದೇವಸ್ಥಾನವನ್ನು ನಿರ್ಮಿಸಿಕೊಂಡಿರುವರು. ಜೋಡಲಿ ದೇವಿ ಪುರಾಣವನ್ನು ಹೇಳುವರು. ದಂಡಿ ದುರಗಮ್ಮನ ಹಾಡನ್ನು ಹಾಡುವರು. ಕಂಪ್ಲಿ ಎಂಬ ಪ್ರದೇಶವು "ಹನ್ನೆರಡನೆಯ ಶತಮಾನದಲ್ಲಿ ಋಷಿಯ ಹೆಸರನ್ನೆ ರಾಜನಿಗೆ ಇಡಲಾಗಿದೆ. ಋಷಿಯ ಹೆಸರು ಕಂಪಿಲಾರಯ ಮುಂದೆ ರಾಜನಿಂದಲೇ ಕಂಪ್ಲಿ ಎಂಬ ಹೆಸರಾಯಿತು. ಕಂಪಲಿರಾಯನು ಕೆಂಪು ಹುಲಿಯನ್ನು ಕೊಂದಿರುವುದರಿಂದಲೇ ರಾಜನ ಹೆಸರು ಕಂಪಲರಾಯ ಎಂದು ಐತಿಹ್ಯದಿಂದ ತಿಳಿಯಬಹುದು."[೧೪] ಹೊಸಪೇಟೆ ತಾಲೂಕಿನ ಕಂಪ್ಲಿ ಗ್ರಾಮದಲ್ಲಿ ಹಕ್ಕಿಪಿಕ್ಕಿಯವರು ಹೆಚ್ಚಿಗೆ ವಾಸಿಸುವರು. ಸುಮಾರು ವರ್ಷಗಳಿಂದಲೂ ಅವರು ಇಲ್ಲಿ ಬಂದು ನೆಲೆಸಿರುವರು.

೨.೩. ಹಕ್ಕಿಪಿಕ್ಕಿಯರ ಪಾರಂಪರಿಕ ಆರ್ಥಿಕ ಚಟುವಟಿಕೆಗಳು

ಪ್ರಸ್ತುತ ಸಮಾಜದಲ್ಲಿ ಮಾನವನಿಗೆ ಹಣ ಎಂಬುವುದು ಬಹುಮುಖ್ಯವಾಗಿ ಬೇಕಾಗಿರುವಂತಹದು. ಜೀವನ ನಿರ್ವಹಣೆಗೆ ಅನಿವಾರ್ಯತೆಯಾಗಿರುವುದು. ಆದರೆ ಬುಡಕಟ್ಟು ಸಮಾಜದಲ್ಲಿ ಜೀವನ ನಡೆಸುತ್ತಿರುವ ಸಮುದಾಯಗಳು ಹಿಂದೆ ಹಣಕ್ಕಿಂತ ಹೆಚ್ಚಾಗಿ ವಸ್ತಗಳಿಗೆ ಮಹತ್ವ ಕೊಡುವರು. ಅವರು ವಸ್ತುಗಳ ಬದಲಿಗೆ ವಸ್ತುಗಳನ್ನು ಪಡೆದು ಜೀವನ ನಡೆಸುತ್ತಿದ್ದರು. ಆದರೆ ಇಂದು ಮನುಷ್ಯನಿಗೆ ಹಣ ಬೇಕಾದರೆ ಅವನ ಜೀವನ ನಿರ್ವಹಣೆ ಸಾಗದಿದ್ದರೆ ಅವರು ಧನಿಕ ಧಣಿಗಳಲ್ಲಿ ಸಾಲ ಮಾಡುತ್ತಾರೆ. ದುಡಿಮೆ - ಮತ್ತೆ ಸಾಲ ಹೀಗೆ ಸ್ಪಷ್ಟವಾದ ವಿಷವರ್ತುಲದಲ್ಲಿ ಸಿಕ್ಕಿ ಬಾಳುವ ಕುಟುಂಬಗಳು ತಲಾ ತಲಾಂತರಗಳಲ್ಲಿ ಅವರ ಮನೆಯಲ್ಲಿ ಹೊಲಗದ್ದೆಗಳಲ್ಲಿ ಜೀತದಾಳುಗಳಾಗಿ ದುಡಿಮೆ ಸಲ್ಲಿಸುತ್ತ ಮಾನವರಾಗಿ ಅತ್ಯಂತ ದಯನೀಯ ಬದುಕು ನಡೆಸುತ್ತಾರೆ. ಈ ರೀತಿಯಾಗಿ ಬದುಕು ಸಾಗಿಸುವ ಜನರ ಜೀವನವೇ ಅರ್ಥಿಕ ಚಟುವಟಿಕೆಯಾಗಿದೆ.

"ಆಧುನಿಕ ವ್ಯವಸ್ಥೆ ಇಂದು ಅನೇಕ ಬುಡಕಟ್ಟುಗಳಿಗೆ ತಿನ್ನಲು ಮರದ ಹೊಟ್ಟನ್ನು ನೀಡಿದೆ, ಇಲ್ಲವೆ ಉಪವಾಸ ಕೆಡವಿ ಸಾಯಿಸಿದೆ. ಆಳುವ ವ್ಯವಸ್ಥೆ ಏನೇ ಬದಲಾವಣೆಗಳನ್ನು ತರಲೆತ್ನಿಸಿದರೂ ಅಭಿವೃದ್ಧಿ ಯೋಜನೆಗಳು ಅವರನ್ನು ಶೋಷಣೆಗೊಳಮಾಡಿವೆ."[೧೫]

ಹಕ್ಕಿಪಿಕ್ಕಿಯುರು ಪಾರಂಪರಿಕವಾಗಿ ಬೇಟೆಯನ್ನು ಅವರು ತಮ್ಮ ಒಂದು ಜೀವಸಕ್ಕೆ ಅಳವಡಿಸಿಕೊಂಡು ಜೀವನ ನಡೆಸುತ್ತಿದ್ದರು. ಹಕ್ಕಿಪಿಕ್ಕಿಯರು ಕಡುಬಡವರು. ಅವರಲ್ಲಿ ಅಕ್ಷರ ಜ್ಞಾನದ ಕೊರತೆ ಇರುವುದು. ಇವರು ನಗರಗಳ ಹತ್ತಿರ ಇದ್ದರು. ನಾಗರಿಕರಿಂದ ಬಹುದೂರವಿದ್ದು ತಮ್ಮದೇಯಾದ ಭಾಷೆ ರೂಢಿ, ಸಂಪ್ರದಾಯ ನ್ಯಾಯ ಪದ್ಧತಿ, ಇತ್ಯಾದಿಗಳನ್ನು ಮುಂದುವರೆಸಿಕೊಂಡು ಬರುತ್ತಿರುವರು. ಇವರು ಮೋಸದ ವ್ಯವಹಾರ ಅರಿಯರು. ಮೋಸಕ್ಕೆ ಒಳಗಾದವರು ಮತ್ತು ಮೋಸವನ್ನು ಇಂದಿಗೂ ಹೊಂದುತ್ತಿರುವವರು. ಬೆಟ್ಟ ಗುಡ್ಡಗಳಲ್ಲಿ ಅಲೆದುಕೊಂಡು ತಮ್ಮ ಮೂಲವನ್ನು ಮರೆತು ಅತಂತ್ರದಲ್ಲಿದ್ದವರು. ಮುಂದಿನ ಚಿಂತೆಯನ್ನು ಮಾಡದೆ ಅವರು ಯಾವುದೇ ಒಂದು ಸ್ಥಳದಲ್ಲಿ ಗುಡಾರವನ್ನು ಹಾಕಿಕೊಂಡು ಬದುಕುತ್ತಿರುವರು. ಸ್ವಲ್ಪ ದಿನಗಳ ನಂತರ ಆ ಒಂದು ಸ್ಥಳದಲ್ಲಿ ಮೇಲುವರ್ಗದ ಜನರು ಇತರ ಸಮುದಾಯಗಳ ಜನರು ತೊಂದರೆಗೊಳಪಡಿಸಿದರೆ, ಮತ್ತೆ ಬೇರೆ ಬೇರೆ ಸ್ಥಳಕ್ಕೆ ಹೋಗುವವರು. ಈ ರೀತಿಯಾಗಿ ಹಕ್ಕಿಪಿಕ್ಕಿಯರು ಯಾವುದೇ ನೆಲ ಇಲ್ಲದೆ, ಆರ್ಥಿಕವಾಗಿ ಭದ್ರತೆಯಿಲ್ಲದೆ, ಹೊಟ್ಟೆ ತುಂಬಿಸಿಕೊಳ್ಳಲು ಸಾಧ್ಯವಾಗದಿದ್ದಾಗ ನಿಶಾಚಾರವಾದ ಸ್ಥಳದಲ್ಲಿ ಹೋಗಿ ಪಕ್ಷಿ ಪ್ರಾಣಿಗಳನ್ನು ಬೇಟೆಯಾಡಿ ಜೀವನ ಸಾಗಿಸುತ್ತಿದ್ದರು. ಅದು ಕೂಡಾ ದೂರಕದಿದ್ದಾಗ ರಾತ್ರಿ ವೇಳೆಯಲ್ಲಿ ಇವರು ಕಳ್ಳತನ ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಇವರನ್ನು ಅಪರಾಧಿಗಳು ಎಂದು ಗುರುತಿಸುವಂತಾಯಿತು.''

ಸಮಾಜದಲ್ಲಿ ಯಾರು ಆರ್ಥಿಕವಾಗಿ ಸಂಪತ್ತನ್ನು ಹೊಂದಿರುವರು ಅವರೇ ಸಕಲ ಸೌಲಭ್ಯಗಳನ್ನು ಹೊಂದಲು ಶಕ್ತರಾಗಿರುತ್ತಾರೆ. ಇದು ಅವರ ಸಾಮರ್ಥ್ಯವನ್ನು ಸೂಚಿಸುತ್ತದೆ. ವ್ಯಕ್ತಿಯ ವರ್ಗವನ್ನು ಆತನ ಆರ್ಥಿಕ ಸ್ಥಿತಿಯಿಂದ ನಿರ್ಧರಿಸಬಹುದಾಗಿದೆ. ಒಂದು ಸಮಾಜದ ಆರ್ಥಿಕ ಚಟುವಟಿಕೆಗಳು ಸಮಾಜದ ಸ್ಥಾನಮಾನಗಳನ್ನು ರೂಪಿಸುವ ನಿರ್ಣಾಯಕ ಅಂಶಗಳಾಗಿವೆ. ಯಾರು ಆರ್ಥಿಕವಾಗಿ ಸಬಲರಾಗಿರುವರೋ ಅವರು ಸಮಾಜದಲ್ಲಿ ಅಂತಸ್ತು, ಘನತೆ, ಅಧಿಕಾರ, ಶಿಕ್ಷಣ ಮತ್ತು ಉನ್ನತ ಸ್ಥಾನಮಾನಗಳನ್ನು ಸಹಜವಾಗಿ ಪಡೆಯುತ್ತಾರೆ. ಪಡೆದವರು ಮೇಲು ಸ್ತರದಲ್ಲಿ, ಪಡೆದಿಲ್ಲದವರು ಕೆಳಸ್ತರದಲ್ಲಿ ಇರುವುರು. ಆರ್ಥಿಕ ಚಟುವಟಿಕೆಯ ಸಾಮಾಜಿಕ ಸ್ಥಾನಮಾನವನ್ನು ಗುರುತಿಸುವುದು.

ಹಕ್ಕಿಪಿಕ್ಕಿಯವರು ಹೆಸರೇ ಸೂಚಿಸುವಂತೆ ಹಕ್ಕಿಯನ್ನು ಹೆಕ್ಕಿ ತಿಂದು ಬದುಕುವ ಜನ. ಮೂಲತಃ ಅವರಲ್ಲಿ ಅನೇಕ ಉಪಕಸುಬುಗಳು ಉಂಟು. ವನಸ್ಪತಿ, ಔಷಧ ಗಿಡಮೂಲಿಕೆ ಮುಂತದವುಗಳನ್ನು ಮಾರುವುದನ್ನು ಉಪವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ದೃಷ್ಟಿ ಮಣಿಗಳನ್ನು ಮಾರುವುದುಂಟು. ಚಾತುರ್ಯದಿಂದ ಬಲೆಹಾಕಿ ಕಾಡುಹಂದಿ, ಚಿಗರಿ ಮುಂತಾದ ಪ್ರಾಣಿಗಳ ಬೇಟೆಯಾಡುವರು. ಬಾವಿಗಳ ಮೇಲೆ ಬಲೆ ಹಾಕಿ ಪಾರಿವಾಳಗಳನ್ನು ಹಿಡಿಯುತ್ತಿದ್ದರು. ಮರದ ಎಲೆಗಳಿಂದ ಕೌಜು ಹಕ್ಕಿಯಂತೆ

ಮತ್ತು ಬಾಯಿಯಿಂದ ನವಿಲು, ಮೊಲ ಹಾಗೂ ನರಿಗಳಂತೆ ಶಬ್ದ ಮಾಡುತ್ತಾರೆ. ಹುಲಿಯ ಮರಿಗಳನ್ನು ಮಾರುವುದರ ಜೊತೆಗೆ ಪಕ್ಷಿಗಳನ್ನು ಹಿಡಿಯುವರು.

"ಹೊಟ್ಟೆಗೆ ಹಿಟ್ಟಿಲದಿದ್ದಾಗ ದರೋಡೆ, ಲೂಟಿ ಮಾಡುವುದರಲ್ಲಿ ತೊಡಗುತ್ತಿದ್ದರು. ಮನೆ ಒಡೆದು ದನ, ಕುರಿ, ಆಡು ಮುಂತಾದವುಗಳನ್ನು ಅಪಹರಿಸುವುದು. ಹೊಲದೊಳಗಿನ ಧಾನ್ಯ, ಪೈರುಗಳನ್ನು ಕದಿಯುತ್ತಿದ್ದರು. ನಾರಾಯಣಿ ಎಣ್ಣೆಯನ್ನು ಮಾರುತ್ತಿದ್ದರು. ಹಕ್ಕಿಪಿಕ್ಕಿಯರು ಪ್ರಾಣಿ ಪಕ್ಷಿಗಳ ಮನಸ್ಸನ್ನು ಅವುಗಳ ಚಲನ ವಲನ, ಅವುಗಳ ಹೆಜ್ಜೆ ಗುರುತು ಇವುಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ."[೧೬]

ಆರ್ಥಿಕತೆಯ ಮುಂದಿನ ಹಂತದಲ್ಲಿ ಬೇಟೆಯು ಅನಿವಾರ್ಯವಾಗಲಿಲ್ಲ. ಪ್ರದೇಶದಿಂದ ಪ್ರದೇಶಕ್ಕೆ ಬೇಟೆಯಲ್ಲಿ ವ್ಯತ್ಯಾಸವಾಗುತ್ತ ಹೋಯಿತು. ಕಾಡಿನ ಪ್ರದೇಶದಲ್ಲಿ ಇರುವ ಜನರಿಗೆ ಬೇಟೆ ಅನಿವಾರ್ಯವಾದರೆ, ಬಯಲು ಪ್ರದೇಶದಲ್ಲಿ ಬದುಕುವ ಜನವರ್ಗಕ್ಕೆ ಅದು ಅನಿವಾರ್ಯವಾಗಲಿಲ್ಲ.

"ಪ್ರಾಣಿಗಳನ್ನು ಸಾಕುವ ಕೆಲಸ ಕಾರ್ಯದಲ್ಲಿ ತೊಡಗಿ ತಮಗೆ ಬೇಕಾದ ಮಾಂಸವನ್ನು ಪಡೆದರು. ಹೀಗೆ ಪ್ರಾಣಿಗಳನ್ನು ಸಾಕುವುದರಿಂದ ಬೇಟೆಯು ಅವರಲ್ಲಿ ಕಡಿಮೆಯಾಯಿತು. ಬಯಲು ಪ್ರದೇಶದಲ್ಲಿ ನೆಲೆಸಿದ್ದ ಜನ ಸಮುದಾಯಗಳು ಸಂಸ್ಕೃತಿಯ ವಿಕಾಸದಲ್ಲಿ ನಾಗರಿಕತೆಯನ್ನು ಬಹುಬೇಗನೆ ಸಾಧಿಸಿಕೊಂಡವು. ಊರುಗಳು ಬೆಳೆಯುತ್ತ ಬಂದಂತೆ ಅಹಿಂಸೆಯ ಕಲ್ಪನೆಗಳು ಬಲಿಯುತ್ತ ಬಂದಿದೆ ಎಂದು ಬರಗೂರು ರಾಮಚಂದ್ರಪ್ಪನವರು ಸಂಸ್ಕೃತಿ ಮಾಲೆಯ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಕಾಲ ಜಾರಿದಂತೆ ಜನಸಂಖ್ಯೆ ಹೆಚ್ಚಿತು. ಕಾಡು ಕ್ರಮೇಣ ಕಡಿಮೆಯಾಗುತ್ತ ಊರುಗಳು ಬೆಳೆದು ಬಂದವು. ಇಂದಿನ ಸ್ಥಿತ್ಯಂತರ ಬದುಕಿನಲ್ಲಿ ಬೇಟೆಯ ಸ್ವರೂಪ ಬದಲಿಸಿಕೊಂಡಿದೆ."[೧೭]

ಆಧುನಿಕರಣಗೊಂಡ ಇಂದಿನ ಸಮಾಜದಲ್ಲಿ ಹಕ್ಕಿಪಿಕ್ಕಿಯರ ಆರ್ಥಿಕ ಚಟುವಟಿಕೆಗಳು ಬದಲಾವಣೆಗಳಿಗೆ ಒಳಗಾಗಿದ್ದಾರೆ. ಕಳೆದ ಕೆಲವು ವರ್ಷಗಳ ಹಿಂದೆ ಆರ್ಥಿಕ ಸ್ಥಿತಿ ತುಂಬಾ ಕಷ್ಟವಾಗಿತ್ತು. ಆದರೆ ಇಂದು ಹೊಸಪೇಟೆ ತಾಲ್ಲೂಕಿನ ಸುತ್ತಮುತ್ತ ನೆಲೆಸಿರುವ ಇವರು ಆರ್ಥಿಕ ಬದಲಾವಣೆಯಲ್ಲಿ ಸ್ಥಿತಿವಂತರಾಗಿದ್ದಾರೆ. ಹೆಚ್ಚಾಗಿ ಬೇಟೆಯನ್ನು ಅವಲಂಬಿಸಿರುವ ಇವರು ಅನುಸರಿಸುವ ವೃತ್ತಿಗಳಲ್ಲಿ ಸಾಕಷ್ಟು ಬದಲಾವಣೆ ಆಗಿರುವುದು. ಕೂಲಿ, ಕೃಷಿ, ಸಾಮಾನ್ಯ ವ್ಯಾಪಾರ, ಸರಕಾರಿ ನೌಕರಿ ಮುಂತಾದವುಗಳನ್ನು ಕಂಡುಕೊಂಡಿದ್ದಾರೆ. ಆದರೆ ಅಧ್ಯಯನ ಕಾರ್ಯದಲ್ಲಿ ಕೆಲವು ಗ್ರಾಮಗಳಲ್ಲಿ ಸಮುದಾಯವನ್ನು ಗುರುತಿಸಿದ್ದಾಗ ಇನ್ನೂ ಕೆಲವರ ಮನೆಗಳನ್ನು ನೋಡಿದಾಗ ಅವರ ಮನೆಗಳಲ್ಲಿ ಕೇವಲ ಆ ದಿನದ ಮಟ್ಟಿಗೆ ಮಾತ್ರ ದಿನಸಿಗಳು ಇರುವವು. ಅವರು ದಿನವಿಡೀ ಮಾಡಿದ ಕೂಲಿಯನ್ನು, ಆ ದಿನ ತಮ್ಮ ಒಂದು ಊಟಕ್ಕೆ ಸರಿ ಹೋಗುವುದು. ಬದುಕಿಗೆ ಆಸರೆಯಾಗದೇ ಹೋದಾಗ

ಸಮುದಾಯಗಳು ತಮ್ಮ ಪಾರಂಪರಿಕ ವೃತ್ತಿಯನ್ನು ಬಿಟ್ಟು, ಇತರ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅನಿವಾರ್ಯವಾಯಿತು.

ಸರ್ಕಾರದ ಕೆಲವು ಬದಲಾವಣೆಯಿಂದ ತಮ್ಮ ವೃತ್ತಿಯನ್ನು ಪರಿವರ್ತನೆ ಮಾಡಿಕೊಳ್ಳಲು ಹಕ್ಕಿಪಿಕ್ಕಿಯರು ಮನುಷ್ಯನನ್ನು ಮನುಷ್ಯರನ್ನಾಗಿ ಕಾಣುವ ಅವರನ್ನು ಪ್ರೀತಿಸುವ ಹಾಗೂ ಗೌರವಿಸುವ ಜನರಾಗಿದ್ದಾರೆ ಎಂದು ಗುರುತಿಸಿ ೧೯೫೦ರಲ್ಲಿ ಸರ್ಕಾರ ಕಲ್ಯಾಣ ಯೋಜನೆಯ ಪಟ್ಟಿಯಲ್ಲಿ ವಸತಿ ಸೌಕರ್ಯ ಕಲ್ಪಿಸಿಕೊಡಲು ಪ್ರಯತ್ನಿಸಿದರು.

ಹೀಗೆ ಅಭಿವೃದ್ಧಿಯ ಹೆಸರಿನಲ್ಲಿ ಇಂತಹ ಕಾರ್ಯಗಳು ಮುಂದುವರೆಯುತ್ತಲೇ ಇವೆ. ಸರ್ಕಾರವು ಇವೆಲ್ಲವುಗಳನ್ನು ಅಭಿವೃದ್ಧಿ ತರುವ ನಿಟ್ಟಿನಲ್ಲಿ ಯಾವ ರೀತಿಯಾಗಿ ಪರಿಣಾಮ ಬಿರುತ್ತವೆ ಎಂಬುವುದರ ಬಗೆಗೆ ಗಮನ ಹರಿಸುತ್ತಿಲ್ಲ. ಅರಣ್ಯ ಹಾಗೂ ಬೇಟೆಯನ್ನು ನಂಬಿಕೊಂಡು ಬದುಕಿದ ಹಕ್ಕಿಪಿಕ್ಕಿಯಂತಹ ಸಮುದಾಯಗಳು ಇಂದಿಗೂ ಆರ್ಥಿಕವಾಗಿ ಅವರು ಭದ್ರತೆಯಿಲ್ಲದೆ, ಇತರ ಸರ್ಕಾರೇತರ ಯೋಜನೆಗಳು ಇಲ್ಲದೆ, ಸಮುದಾಯಗಳು ಶೋಚನೀಯ ಸ್ಥಿತಿಯಲ್ಲಿರುವುವು.

೨.೪. ಹಕ್ಕಿಪಿಕ್ಕಿಯರ ಸಾಂಸ್ಕೃತಿಕ ಬದುಕು

ಮಾನವನು ಸಂಸ್ಕೃತಿ ಪ್ರಗತಿಶೀಲ ಸ್ವಭಾವವುಳ್ಳದ್ದು. ಹೊಸ ಉಪಕರಣಗಳ ಸೃಷ್ಟಿಯಿಂದ ಸಾಮಾಜಿಕ ಜೀವನದಲ್ಲಿ ಅನೇಕ ಬದಲಾವಣೆಗಳಾಗುತ್ತವೆ. ಪ್ರಾಚೀನ ಮಾನವನ ಸಂಸ್ಕೃತಿ ಅತಿ ಸರಳವಾದದ್ದು. ಸಮಾಜದಲ್ಲಿ ಯಾವ ತೊಡಕಿನ ಸಮಸ್ಯೆಗಳು ಇರಲಿಲ್ಲ. ಆದರೆ ಆಧುನಿಕ ಮಾನವನ ಸಂಸ್ಕೃತಿಯು ಕುಟುಂಬ, ವಿವಾಹ, ಆಚಾರ-ವ್ಯವಹಾರಗಳಲ್ಲಿ ಸಮುದಾಯದ ಧರ್ಮದ ಒಂದು ವಿಧಿ ಬಂಧನದಲ್ಲಿ ಸಿಲುಕಿರುವುದು.

ಸಂಸ್ಕೃತಿ ಎಂಬ ಪದಕ್ಕೆ ತುಂಬ ಸಂಕೀರ್ಣವಾದ ಅರ್ಥವಿದೆ. ಇಲ್ಲಿ ಅವೆಲ್ಲವುಗಳ ವಿವರಣೆಗೆ ಹೋಗದೆ ಕೇವಲ ಸಂಸ್ಕೃತಿ ಎಂದರೆ ಜೀವನ ಕ್ರಮ ಎಂಬ ಸರಳ ಅರ್ಥವನ್ನು ಪ್ರಸ್ತುತ ಚಿಂತನೆಯಲ್ಲಿ ತಿಳಿಯುವುದಾಗಿದೆ.

ಎಸ್.ಎಫ್.ನಿಡ್ಯೋಲ್ ಎಂಬ ಮಾನವ ಶಾಸ್ತ್ರಜ್ಞರ ಪ್ರಕಾರ "ಸಮೂಹ ಮತ್ತು ಸಂಬಂಧಗಳ ಆಯಾಮದಲ್ಲಿ ಪ್ರಕಟಗೊಳ್ಳುವ ಸಾಮಾಜಿಕ ಸತ್ಯಗಳ ಒಟ್ಟು ಮೊತ್ತವೇ ಸಮಾಜವಾಗಿದೆ. ಇವೆಲ್ಲ ಒಟ್ಟು ಮೊತ್ತಗಳ ಕ್ರಿಯೆಗಳ ಆಯಾಮವೇ ಸಂಸ್ಕೃತಿ ಎಂದಾಗಿದೆ."

ಈ.ಬಿ.ಟೇಲರ ಎಂಬ ಸಂಸ್ಕೃತಿ ತಜ್ಞರ ಪ್ರಕಾರ "ಸಮಾಜದ ಒಬ್ಬ ಸದಸ್ಯನಾಗಿ ಮನುಷ್ಯ ಗಳಿಸಿಕೊಂಡ ಜ್ಞಾನ, ನಂಬಿಕೆ, ಕಲೆ, ನೀತಿ, ನಿಯಮ, ಆಚರಣೆ, ಸ್ವಭಾವ ಮತ್ತು ಯಾವುದೇ ಶಕ್ತಿ ಸ್ಥಿತಿಯನ್ನು ಒಳಗೊಳ್ಳುವ ಒಂದು ಸಂಕೀರ್ಣವೇ ಸಂಸ್ಕೃತಿ."

ಮಾನವಶಾಸ್ತ್ರವೇ ಸಂಸ್ಕೃತಿ ಎಂಬ ಶಬ್ದವು ಮಾನವನ ಸಕಲ ಕಾರ್ಯಕಲಾಪಗಳನ್ನೊಳಗೊಂಡಿದೆ. ಅದು ಸಾಂಪ್ರದಾಯಿಕವಾಗಿ ಜನರು ಅಡಿಗೆ ಮಾಡುವ ರೀತಿ ಅಥವಾ ಊಟ ಮಾಡುವ ಪದ್ಧತಿ, ಅವರು ಮನೆಕಟ್ಟಿಲು ಮಾಡುವ ಜೀವನ ಕ್ರಮ ಮತ್ತು ಕಟ್ಟಿಕೊಳ್ಳುವ ಪದ್ಧತಿ ಅಥವಾ ಮನೆಯನ್ನು ಕಟ್ಟುವ ಒಂದು ಅನುಕ್ರಮ ಮುಂತಾದ ವಿಷಯಗಳಿಂದ ಹಿಡಿದು ಜನರು ಸಾಮಾನ್ಯವಾಗಿ ಅನುಸರಿಸುವ ಸಾಮಾಜಿಕ, ನೈತಿಕ, ಧಾರ್ಮಿಕ ಗುಣಾಮೌಲ್ಯಗಳನ್ನು ಮಾನವನು ಉನ್ನತ ಮನೆ, ಮನೋಧರ್ಮಗಳನ್ನು ತೃಪ್ತಿಗೊಳಿಸಲು ತನ್ನ ಅಭ್ಯಾಸ ಬಲದಿಂದ ಮಾಡುವ ಎಲ್ಲ ರೀತಿಯ ವಿಚಾರಗಳು ಸಂಸ್ಕೃತಿಯಲ್ಲಿ ಒಳಗೊಂಡಿರುವುವು.

ಮಾನವನು ಸ್ಥಿರವಾದ ಬದುಕನ್ನು ಪ್ರಾರಂಭಿಸಿ ಅನೇಕ ಶತಮಾನಗಳು ಕಳೆದರು ಹಕ್ಕಿಪಿಕ್ಕಿಯಂತಹ ಅಲೆಮಾರಿ ಸಮುದಾಯವು ಅಲೆಮಾರಿಗಳಾಗಿ ಹಿಂದೆ ಕಾಡಿನಿಂದ ಕಾಡಿಗೆ ಅಲೆಯುವ ಸ್ಥಿತಿಯಲ್ಲಿದ್ದರು. ಇಂದು ಊರಿಂದೂರಿಗೆ, ನಗರದಿಂದ ನಗರಕ್ಕೆ ಅಲೆಯುವರು. ಇದನ್ನು ವಲಸೆ ಸಂಸ್ಕೃತಿ ಎಂದು ಗುರುತಿಸುವುದು.

ಆಧುನಿಕವಾಗಿ ಹಕ್ಕಿಪಿಕ್ಕಿಯರು ಹೀಗೆ ಊರಿಂದೂರಿಗೆ ಹೊಟ್ಟೆ ಪಾಡಿಗಾಗಿ ಅಲೆಯುವ ಜನವಿರುವುದರಿಂದ ವಿವಿಧ ಭಾಷಿಕ ಪ್ರದೇಶಗಳನ್ನು ಹಾದು ಹೋಗುವುದರಿಂದ ಆಯಾ ಪ್ರದೇಶಗಳ ಜನರ ಜೊತೆ ವ್ಯವಹರಿಸಲು ಅಲ್ಲಲ್ಲಿನ ಭಾಷೆಗಳನ್ನು ಅಷ್ಟಿಷ್ಟು ಕಲಿಯುತ್ತಾರೆ. ಕೊನೆಗೆ ಅವರಾಡುವ ಭಾಷೆಯೇ ಒಂದು ವಿಶಿಷ್ಟ ಬಗೆಯ ಮಿಶ್ರ ಭಾಷೆಯಾಗುವುದು. ಇದನ್ನು ಇಂತಹದೇ ಭಾಷೆ ಎಂದು ಹೇಳಲು ಕಷ್ಟವಾಗುವುದು.

ಹಕ್ಕಿಪಿಕ್ಕಿಯರು ವಾಗ್ರಿ ಭಾಷೆಯನ್ನಾಡುವರು. ಹಾಗೂ ಇತರ ಜನರ ಸಂಪರ್ಕದಿಂದ ಅವರು ಹಿಂದಿ, ತೆಲಗು, ಕನ್ನಡ, ಮುಂತಾದ ಪ್ರದೇಶಗಳಿಗೆ ಅನುಗುಣವಾಗಿ ಮಾತನಾಡುವರು. ಪ್ರತಿಯೊಂದು ಸಮುದಾಯಗಳು ತಮ್ಮದೇ ಆದ ಕೆಲವು ಆಚಾರ ವಿಚಾರ, ಸಂಪ್ರದಾಯ, ಸಂಸ್ಕೃತಿ ಪದ್ಧತಿಗಳನ್ನು ಹೊಂದಿರುವರು. ಅದರಂತೆ ಹಕ್ಕಿಪಿಕ್ಕಿ ಸಮುದಾಯ ಪ್ರತ್ಯೇಕತೆಯ ಸಂಸ್ಕೃತಿಯ ಬದುಕನ್ನು ಹೊಂದಿರುವುದು. ಹಕ್ಕಿಪಿಕ್ಕಿಯರು ನಾಲ್ಕು ಪಂಗಡಗಳನ್ನು ಹೊಂದಿರುವರು.

೧. ಗಾಜರಾತಯೋ (ಬುಕ್ಕಾ)

೨. ಪವಾರ್ (ಪವಾ)

೩. ಕಾಳಿವಾಳೊ (ಮಾಟ)

೪. ಮೇವಾಡೋ (ಬಾಟ್)

ಈ ಒಂದೊಂದು ಪಂಗಡಗಳಲ್ಲಿ ಮತ್ತೆ ಒಳಪಂಗಡಗಳಿವೆ. ಇವುಗಳನ್ನು ಅವರು ಜಾತ್ ಗಳೆಂದು ಕರೆಯುವರು.

ವಸತಿ ವ್ಯವಸ್ಥೆ : ಹಕ್ಕಿಪಿಕ್ಕಿಯರು ಅಲೆಮಾರಿಗಳಾಗಿರುವುದರಿಂದ ಇವರಿಗೆ ಖಾಯಂ ಆದ ವಸತಿ ವ್ಯವಸ್ಥೆ ಇರಲಿಲ್ಲ. ಈ ಪದ್ಧತಿ ಇತ್ತೀಚೆಗೆ ಸಡಿಲಗೊಂಡು ಖಾಯಂ ಆಗಿ ಮನೆಯನ್ನು ಕಟ್ಟಿಕೊಟ್ಟಿದ್ದಾರೆ. ಮಣ್ಣು ಇಟ್ಟಿಗೆಗಳಿಂದ ನಿರ್ಮಿಸಿದ ಗೋಡೆಗಳು ಮೇಲು ಚಾವಣಿಗೆ ಹೆಂಚು ಇಲ್ಲವೇ ತೆಂಗಿನ ಗರಿಗಳನ್ನು ಬಳಸಿ ಚಿಕ್ಕ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಊರಿಂದ ಊರಿಗೆ ಅಲೆಯುವಾಗ ಅವರು ಗುಡಿಸಲು ಅಥವಾ ಗುಡಾರಗಳಲ್ಲಿ ವಾಸಿಸುತ್ತಾರೆ.

ಹಕ್ಕಿಪಿಕ್ಕಿಯರು ಯಾವುದೇ ಜಾಗದಲ್ಲಿ ಟೆಂಟುಗಳನ್ನು ಹಾಕಿಕೊಳ್ಳುವಾಗಲು ಸಾಲುಗಳನ್ನು ಅನುಸರಿಸುವರು. ಜೊತೆಗೆ ಎದುರು ಬದರು ಹಾಕುತ್ತಾರೆ. ಒಬ್ಬರ ಟೆಂಟಿನ ಹಿಂದೆ ಮತ್ತೊಬ್ಬರು ಟೆಂಟು, ಗುಡಾರ ಗುಡಿಸಲು ಹಾಗೂ ಮನೆಗಳು ಇರುವುದಿಲ್ಲ. ಎರಡು ಕಡೆಯಲ್ಲು ತಲೆಯನ್ನು ಎದುರಿ ಟೆಂಟಿನವರ ಕಡೆಯೇ ಹಾಕಿ ಮಲಗಬೇಕು ಯಾವ ಕಾರಣಕ್ಕೂ ಕಾಲನ್ನು ಎದುರಾಗಿ ನೀಡುವಂತಿಲ್ಲ. ಅದರಂತೆ ಇದು ಪ್ರಸ್ತುತ ಹೊಸಪೇಟೆ ತಾಲೂಕಿನ ವ್ಯಾಪ್ತಿಯಲ್ಲಿರುವ ಮನೆಯನ್ನು ಗಮನಿಸಿದಾಗ ಅವರು ಮನೆಯನ್ನು ಸಾಲುಗಳಾಗಿ ಒಂದು ಅನುಕರಣೆಯಲ್ಲಿ ಕಟ್ಟಿಕೊಂಡಿರುವರು. ಅವರ ಶಿಕಾರಿ ಕಾಲೋನಿಯಲ್ಲಿ ಸಾಲಾಗಿ ಮನೆಗಳನ್ನು ನೋಡಬಹುದು. ಒಂದರ ಹಿಂದೆ ಇನ್ನೊಂದು ಮನೆಯಿಲ್ಲ. ಸಾಂಪ್ರದಾಯಿಕವಾಗಿ ಅವರದೇ ಆದ ಒಂದು ಸಂಸ್ಕೃತಿಯಲ್ಲಿ ಮನೆಯನ್ನು ನಿರ್ಮಿಸಿಕೊಂಡಿರುವರು. ವಸತಿ ವ್ಯವಸ್ಥೆಯ ಸಂಸ್ಕೃತಿಯು ಹಿಂದಿನಿಂದಲೂ ತಲಾ ತಲಾಂತರದಿಂದಲೂ ಬಂದಿದೆ.

ಉಡುಗೆ ತೊಡುಗೆಗಳು : ಹಕ್ಕಿಪಿಕ್ಕಿಯವರಲ್ಲಿ ಉಡುಗೆ ತೊಡುಗೆಗಳು ಇತರ ಬುಡಕಟ್ಟುಗಳ ರೀತಿ ಒಂದು ನಿಗದಿತವಾದ ಚೌಕಟ್ಟಿಗೆ ಒಳಗಾಗಿರುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಅವರ ಆರ್ಥಿಕ ಪರಿಸ್ಥಿತಿ ಮತ್ತು ಅಲೆಮಾರಿ ಜೀವನ. ವಯಸ್ಸು, ಲಿಂಗ, ಸಂದರ್ಭಗಳಿಗನುಗುಣವಾಗಿ ಅವರ ಉಡುಗೆ ತೊಡುಗೆಗಳು ಸರಳವಾಗಿರುವವು. ಬಹುತೇಕ ಗಂಡಸರು ಅಭರಣಗಳನ್ನು ಧರಿಸುವುದಿಲ್ಲ. ಯುವಕರು ಕೊರಳಿಗೆ ಮೂರು ಹವಳ ಪೋಣಿಸಿದ ಸರವನ್ನು ಹಾಕುತ್ತಾರೆ ಹುಲಿ ಉಗುರನ್ನು ಧರಿಸುತ್ತಾರೆ. ಹಚ್ಚೆಯನ್ನು ಹೆಂಗಸರು, ಎರಡು ಹುಬ್ಬಿನ ನಡುವೆ ನಾಮದಂತೆ ಹುಯಿಸಿಕೊಳ್ಳುತ್ತಾರೆ. ಇದನ್ನು ಗೊಂಡಸ್ ಎನ್ನುತ್ತಾರೆ. ಪ್ರಸ್ತುತ ದಿನವೇ ಹಕ್ಕಿಪಿಕ್ಕಿಯ ಆ ಕಾಲೊನಿಯಲ್ಲಿ ಹೆಣ್ಣು ಮಕ್ಕಳು ಸೀರೆ ಹಾಗೂ ನೈಟಿಯನ್ನು ಧರಿಸುವರು.

ದೇಸೀ ಸಂಸ್ಕೃತಿ ಎಂಬ ಗ್ರಂಥದಲ್ಲಿ ಡಾ.ಡಿ.ಬಿ.ನಾಯಕರವರು ಬಡುಕಟ್ಟು ಜನರ ಆಭರಣಗಳ ವಿನ್ಯಾಸಗಳಲ್ಲಿ ಹಕ್ಕಿಪಿಕ್ಕಿಯರ ಉಡುಪುಗಳ ಬಗ್ಗೆ ವಿಶ್ಲೇಷಿಸುವರು. ಗಂಡಸರು ಕಿವಿಗೆ ಓಲೆ, ಕೈಖಿಡಗ, ಕೊರಳಿಗೆ ಕೊರಳಸರ, ಕಾಲಿಗೆ ಕಾಲ್ಗಡಗಳನ್ನು ಧರಿಸುವುದನ್ನು ಕಾಣಬಹುದು. ಹೆಂಗಸರು ಶಂಖದ

ಸರವನ್ನು ಧರಿಸುವರು. ಹವಳಗಳನ್ನು, ಕವಡೆ, ಕನ್ನಡಿಗಳನ್ನು ಶಂಖ-ಮಣಿಗಳನ್ನು ಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಕಟ್ಟುನಿಟ್ಟಿನ ಧಾರ್ಮಿಕ ಆಚರಣೆಯಾಗಿದೆ ತಮ್ಮ ಮಕ್ಕಳಿಗೆ ಕಿವಿ ಚುಚ್ಚುವ ಶಾಸ್ತ್ರ ಮಾಡಿ ಹುಟ್ಟು ಮೂರು ಕಕ್ಕಡ ಹಾಕುವುದುಂಟು. ಬುಡಕಟ್ಟಿನ ಜನರ ಅಭರಣಗಳ ವಿನ್ಯಾಸ ಸಂಕೀರ್ಣವಾಗಿರುವಷ್ಟೇ ಸರಳವಾಗಿರುತ್ತದೆ. ಹಕ್ಕಿಪಿಕ್ಕಿ ಜನರು ಸಾಮಾನ್ಯವಾಗಿ ದಾರ್ಮಿಕ ಹಾಗೂ ಶೃಂಗಾರದ ಹಿನ್ನಲೆಯಿಂದ ಬಂದಿರುವ ಈ ಕಲೆಯು ಬುಡಕಟ್ಟಿನ ಜನರಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ. ಎಲೆ, ಹೂವು, ಬಳ್ಳಿ, ಬೇರು, ಪಶು, ಪಕ್ಷಿ, ಹಾವು, ಚೇಳು, ಸಾಮಾನ್ಯ ಮಟ್ಟದ ಲೋಹ, ಗಾಜುಗಳ ಒಡವೆಗಳಿಂದ ಅಲಂಕಾರ ಮಾಡಿಕೊಂಡು ಸುಂದರವಾಗಿ ಕಾಣುವರು.

ಮದುವೆ ಸಂಪ್ರದಾಯ : ಸಾಮಾನ್ಯವಾಗಿ ಹಕ್ಕಿಪಿಕ್ಕಿಯರಲ್ಲಿ ಬಾಲ್ಯ ವಿವಾಹ ಪದ್ಧತಿ ರೂಢಿಯಲ್ಲಿದೆ. ಅವರಲ್ಲಿ ಹೆಚ್ಚಾಗಿ ಹೆಣ್ಣಿಗೆ ಬೇಡಿಕೆ ಇದೆ. ಅಂತೆಯೇ ವಧು ದಕ್ಷಿಣೆ ಪದ್ಧತಿ ಅವರಲ್ಲಿದೆ. ಮದುವೆಯಲ್ಲಿ ಹೆಣ್ಣಿಗೆ ನಾಲ್ಕಾರು ಸೀರೆ ಹಾಗೂ ಹಣವನ್ನು ಕೊಟು ಮದುವೆಯಾಗುವರು. ಇದಕ್ಕೆ ತೆರು ಪದ್ಧತಿ ಎನ್ನುವರು. ಮೊದಲು ತೆರುವಿನ ಹಣ ೧೨ ರೂಪಾಯಿ ಇತ್ತು. ಮುಂದೆ ೬೦ ರೂಪಾಯಿಗೆ ಬಂತು. ಇದು ಕೆಲವು ಕಡೆ ೫೦೦-೬೦೦ರವರೆಗೆ ಏರಿದೆ. ಈ ತೆರುವಿಗೆ 'ಮಹರ್' ಎಂದು ಕರೆಯುವರು. ಎಲ್ಲಾ ಬುಡಕಟ್ಟು ಸಮುದಾಯಗಳಲ್ಲಿ ನಡೆಯುವಂತೆ ಸಂಪ್ರದಾಯವಾಗಿ ಕ್ರಮಬದ್ಧವಾಗಿ ಕ್ರಿಯಾ ವಿಧಿ ವಿಧಾನಗಳ ಮುಖಾಂತರ ಮದುವೆ ಸಂಪ್ರದಾಯವು ನಡೆಯುವುದು. ಗಂಡು ಹೆಣ್ಣು ಓಡಿ ಹೋಗಿ ಕೆಲವು ದಿನಗಳಾದ ಮೇಲೆ ಮನೆಗೆ ಸೇರಿದರೆ ೨೦೦-೩೦೦ ರೂಪಾಯಿ ದಂಡವಿರುವುದು. ಇದಕ್ಕೆ ಕೆಲಾವತಿ ಎಂದು ಕರೆಯುವರು. ಇದಕ್ಕೆ ಸಂಪ್ರದಾಯಬದ್ಧವಾಗಿ ಮದುವೆ ನೆರವೇರಿಸುತ್ತಾರೆ. ಹಕ್ಕಿಪಿಕ್ಕಿಯರಲ್ಲಿ ಗಂಡು ಎಷ್ಟು ಸಲ ಬೇಕಾದರೂ ಮದುವೆ ಮಾಡಿಕೊಳ್ಳಬಹುದು. ಒಳ ಬಾಂಧವ್ಯ ವಿವಾಹ ಪದ್ಧತಿ ಹೆಚ್ಚಾಗಿರುವುದು. ಒಂದೇ ರಕ್ತ ಬಳ್ಳಿಗಳ ನಡುವೆ ಮದುವೆ ನಡೆಯುವುದಿಲ್ಲ. ಹೆಣ್ಣು ಇನ್ನೊಂದು ಮದುವೆಯಾಗಲು ಅವಕಾಶವಿದೆ. ಆದರೆ ಅದು ಮದುವೆ ಎನಿಸಿಕೊಳ್ಳುವುದಿಲ್ಲ. ಸೀರುಡಿಕೆ, ಹಾಗೂ ಕೂಡವಳಿ ಎನ್ನುವರು. ಹಕ್ಕಿಪಿಕ್ಕಿಯರು ಮದುವೆ ವಿಧಿ ಎಷ್ಟು ಸರಳವೊ ವಿಚ್ಛೇದನವೂ ಅಷ್ಟು ಸುಲಭವಾದದ್ದು. ಸಮುದಾಯದ ಪಂಚಾಯಿತಿಯಲ್ಲಿ ಎಲ್ಲರು ಸೇರಿ ನಿರ್ಣಯಗಳನ್ನು ತೆಗೆದುಕೊಳ್ಳುವರು. ಮಕ್ಕಳು ಮಾತ್ರ ತಂದೆಗೆ ಸೇರುವುದು ಎಂದು ಹೇಳುವರು. ಅಂತರ ಜಾತಿಯ ವಿವಾಹದ ಬಗ್ಗೆ ಇವರಲ್ಲಿ ಕೂಡ ಒಲವು ಹೊಂದಿರುವರು. ಬೇರೆ ಬೇರೆ ಪ್ರದೇಶದಲ್ಲಿ ನೆಲೆಸಿರುವ ಜನರು ಶಿಕ್ಷಣ ಹೊಂದಿದಂತೆ ಅವರಲ್ಲಿ ಅಂತರ ಜಾತಿ ವಿವಾಹವನ್ನು ಕಾಣಬಹುದು. ಈ ಕ್ಷೇತ್ರದಲ್ಲಿ ಅವರನ್ನು ಮದುವೆ ವಿಷಯದಲ್ಲಿ ಅಭ್ಯಾಸಿಸಿದಾಗ ಗ್ರಾಮಗಳಲ್ಲಿ ಸಮುದಾಯದವರು ಸಗೋತ್ರದಲ್ಲಿಯ ಒಂದೇ ಸಮುದಾಯದಲ್ಲಿಂಪೇ ಪ್ರೇಮಿಸಿ ಮದುವೆಯಾಗಿರುವುದಕ್ಕೆ ಹೆಚ್ಚಿನ ಜನರು ಒಲವನ್ನು ಹೊಂದಿರುವುದು ಕಂಡುಬಂದಿತು.

ನ್ಯಾಯ ವ್ಯವಸ್ಥೆ : ಅವರ ಮಧ್ಯೆ ನಡೆಯುವ ಜಗಳಗಳನ್ನು ತೀರ್ಮಾನಿಸಲು ತಮ್ಮ ಸಮುದಾಯದ ವ್ಯಾಜ್ಯಗಳನ್ನು ಬಗೆಹರಿಸಲು, ಸಮುದಾಯದ ಎಲ್ಲರೂ ಕೂಡಿ ತಪ್ಪಾದ ವಿಷಯದ ಬಗ್ಗೆ ಚರ್ಚಿಸಿ ಸಮುದಾಯ ಜನರ ಒಮ್ಮತದ ಮೇರೆಗೆ ಸಮುದಾಯದ ಹಿರಿಯರು ಹೇಳಿದ ಮಾತಿಗೆ ಎಲ್ಲರು ಒಪ್ಪುವರು. ತಪ್ಪಿತಸ್ಥರಿಗೆ ದಂಡ ಹಾಕಲಾಗುವುದು. ಮೊದಲಿನಂತೆ ನ್ಯಾಯ ವ್ಯವಸ್ಥೆ ಬಿಗಿಯಾಗಿಲ್ಲ. ಈಗ ಹೆಚ್ಚಾಗಿ ಜನರು ಕೋರ್ಟ್ ಕಛೇರಿಯ ಕಡೆ ಒಲವು ತೋರಿಸುತ್ತಿರುವುದು ಕಂಡುಬರುವುದು.

ಧಾರ್ಮಿಕ ವ್ಯವಸ್ಥೆ : ಹಕ್ಕಿಪಿಕ್ಕಿಯರು ನೆಲೆಸಿರುವ ಗ್ರಾಮಗಳು ಹಾಗೂ ಕಾಲೋನಿಯಲ್ಲಿ ತುಳಜಾ ದೇವಿಯ ದೇವಸ್ಥಾನವಿರುವುದು. ಯಾವುದೇ ಹಬ್ಬವನ್ನಾಗಲೀ ಮಾಡವಷ್ಟು ಸರಳವಾದರೂ, ಅವರು ಒಂದು ವರ್ಷದ ಅವಧಿಯಲ್ಲಿ ಈದ್ ಹಬ್ಬವನ್ನು ಮಾಡುತ್ತಾರೆ. ಚಾಮುಂಡಿ, ದುರ್ಗಿ, ಎಲ್ಲಮ್ಮ ಮುಂತಾದ ಹೆಣ್ಣು ದೇವರುಗಳನ್ನು ಪೂಜಿಸುವರು. ಆಡು, ಕುರಿ, ಕೋಳಿ, ಮತ್ತು ಕೋಣಗಳನ್ನು ಬಲಿಕೊಡುವರು. ಧಾರ್ಮಿಕ ಆಚರಣೆ ಕಲೆಗಳು ಇರುವುವು. ಇವರಲ್ಲಿ ದೇವರನ್ನು ಕರೆಯುವುದು ಒಂದು ಕಲೆ. ಡಮರುಗದಂತಿರುವ ಒಂದು ವಾದ್ಯ. ಇದಕ್ಕೆ ಒಂದು ಕಡೆ ಅಡ್ಡದಾರವನ್ನು ಸಡಿಲವಾಗಿ ಕಟ್ಟಿರುವುದರಿಂದ ಮತ್ತೊಂದು ಕಡೆ ಬಡಿದಾಗ ಧ್ವನಿ ದ್ವಿಗುಣಿಸಿ ಬಂದು ವಿಶೇಷ ನಾದದ ಗುಂಗು ಗುಯ್ ಗುಟ್ಟುತ್ತಿರುತ್ತದೆ. ಇದನ್ನು ಬಡಿಯುತ್ತ ಚಾಮುಂಡಿ, ದುರ್ಗ, ಎಲ್ಲಮ್ಮ ಮುಂತಾದ ದೇವರನ್ನು ಹೂಗಳುತ್ತ ಕರೆಯುವರು. ಇನ್ನು ಹಲವಾರು ಬಗೆಗಳಲ್ಲಿ ಹಕ್ಕಿಪಿಕ್ಕಿಯ ಸಂಸ್ಕೃತಿಯ ವಿಷಯಗಳು ಹೆಚ್ಚಾಗಿರುವುವು. ಕೇವಲ ಅಧ್ಯಯನಕ್ಕೆ ಅವಶ್ಯವಿರುವ ಸಾಂಸ್ಕೃತಿಕ ಬದುಕನ್ನು ತಿಳಿಯಲು, ಅವರ ಜೀವನವೇ ಸಾಂಸ್ಕೃತಿಯು ಎಷ್ಟು ಮಹತ್ವ ಪಡೆದಿದೆ ಎಂದು ಈ ಅಧ್ಯಯನದಿಂದ ತಿಳಿಯಬಹುದಾಗಿದೆ.

ಹಕ್ಕಿಪಿಕ್ಕಿಯರು ಕೂಡ ಇತರ ಸಮುದಾಯಗಳಂತೆ ಅವರು ತಮ್ಮದೇ ಆದ ಸಂಸ್ಕೃತಿಯಲ್ಲಿ ಪ್ರಾತ್ಯೇಕತೆಯ ನಿಟ್ಟಿನಲ್ಲಿ ಬೇರೆ ಬೇರೆ ಸಂಪ್ರದಾಯ ಆಚರಣೆ, ವಿಧಿ ವಿಧಾನಗಳನ್ನು ಹೊಂದಿರುವ ಸಮುದಾಯ ಇದಾಗಿರುವುದು. ಕ್ಷೇತ್ರ ಕಾರ್ಯದ ಮುಖಾಂತರ ಉಲ್ಲೇಖಿಸುವಾಗ ಬೇರೆ ಸಮುದಾಯಗಳ ಪ್ರಭಾವ ಇವರ ಸಮುದಾಯಗಳ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿದೆ ಎಂದು ತಿಳಿಯಬರುತ್ತದೆ. ಜನರು ಆಧುನಿಕಗೊಂಡಂತೆ ಅವರ ವಿಚಾರಗಳು ಬದಲಾವಣೆ ಹಾಗುತ್ತಾ ಅವರ ಸಂಪ್ರದಾಯಗಳು ಬದಲಾವಣೆಯನ್ನು ಸುಲಭವಾಗಿ ಗುರುತಿಸಬಹುದು. ನಾಗರಿಕ ಪ್ರಪಂಚದಿಂದ ದೂರವಿದ್ದು, ತಮ್ಮದೇ ಆದ ಜೀವನ ಕ್ರಮ ಅನುಸರಿಸಿಕೊಂಡು ವಿಶಿಷ್ಟವಾದ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವ ಈ ಸಮುದಾಯವು ಹಂತ ಹಂತವಾಗಿ ಬದಲಾಗುತ್ತಿದೆ. ಅವರ ಜೀವನದಲ್ಲಿ ಆಧುನಿಕತೆಯ ಗಾಳಿ ಬೀಸಿ, ನೂರಾರು ವರ್ಷಗಳಿಂದ ಬೇರುಬಿಟ್ಟುಕೊಂಡಿದ್ದ ಇವರ ಸಾಂಸ್ಕೃತಿಕ ವಿಚಾರಗಳು ಬದಲಾವಣೆಯಾಗಿವೆ.

ಅಡಿ ಟಿಪ್ಪಣಿಗಳು

೧. ಲಕ್ಷ್ಮಣ್ ತೆಲಗಾವಿ, **ಸ್ಥಳೀಯ ಚರಿತ್ರೆ ಅಧ್ಯಯನ ತಾತ್ವಿಕತೆ ಮತ್ತು ಸ್ವರೂಪ**, ೨೦೦೭, ಪು.೬

೨. ಸ.ಚಿ.ರಮೇಶ್, **ಜನಪದ ಕರ್ನಾಟಕ**, ಪು.೧೨೫

೩. ಕೆ.ಎಂ.ಮೇತ್ರಿ, **ಕರ್ನಾಟಕದ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ**, ೨೦೦೭, ಪು.೬

೪. **ಸುಧಾಕರ್, ಜನಪದ ನುಡಿಗಟ್ಟುಗಳ ಕೋಶ**, ೨೦೦೬, ಪು.೪೭೬

೫. ಕೆ.ಎಂ.ಮೇತ್ರಿ, **ಬುಡಕಟ್ಟು ಕುಲಕಸುಬುಗಳು**, ೨೦೦೨, ಪು.೮೦

೬. ಎಚ್.ಜೆ.ಲಕ್ಕಪ್ಪಗೌಡ, ಕರ್ನಾಟಕ ಬುಡಕಟ್ಟುಗಳು, ೨೦೦೦, ಪು.೮೦

೭. ಕೆ.ಎಂ.ಮೇತ್ರಿ, **ಬುಡಕಟ್ಟು ಕುಲಕಸುಬುಗಳು**, ೨೦೦೨, ಪು.೮೧

೮. ಎ.ಎಸ್.ಪ್ರಭಾಕರ, **ಆದಿವಾಸಿ ಆಖ್ಯಾನ**, ೨೦೦೬, ಪು.೪೮೦

೯. ಶಾಲಿನಿ ರಘುನಾಥ, **ಜಾನಪದ ಸಾಹಿತ್ಯ ದರ್ಶನ ಭಾಗ-೨೪**, ೨೦೦೧, ಪು.೫೧

೧೦. ಹಿ.ಚಿ.ಬೋರಲಿಂಗಯ್ಯ, ಡಾ.ಎ.ಎಸ್.ಪ್ರಭಾಕರ್, **ಬುಡಕಟ್ಟು ಅಧ್ಯಯನ ೨**, ೨೦೦೪, ಪು.೪೬

೧೧. ಎ.ಎಸ್.ಪ್ರಭಾಕರ್, **ಕರ್ನಾಟಕ ದೊಂಬರು**, ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ ೨೦೦೬, ಪು.೧೭೮

೧೨. ಎ.ಎಸ್.ಪ್ರಭಾಕರ್, **ಡೊಂಬರು ಒಂದು ಚಾರಿತ್ರಿಕ ಹಿನ್ನೋಟ**, ೨೦೦೬, ಪು.೧೧೫

೧೩. ಎಚ್.ಜೆ.ಲಕ್ಕಪ್ಪಗೌಡ, **ಕರ್ನಾಟಕ ಬುಡಕಟ್ಟುಗಳು**, ೨೦೦೦, ಪು.೧೮೪

೧೪. ಎಸ್.ಎಂ.ಸಾವಿತ್ರಿ, **ಕುಮಾರರಾಮ ಸಂಪ್ರದಾಯದ ಅಧ್ಯಯನ**, ೨೦೦೨, ಪು.೪

೧೫. ಎಚ್.ಜೆ.ಲಕ್ಕಪ್ಪಗೌಡ, **ಕರ್ನಾಟಕ ಬುಡಕಟ್ಟುಗಳು**, ೨೦೦೦, ಪು.೨೦೮

೧೬. ಅದೇ, ಪು.೨೦೯

೧೭. ಸ.ಚಿ.ರಮೇಶ, **ಬೇಟೆ**, ೨೦೦೧, ಪು.೯

ಅಧ್ಯಾಯ ೩

ಹಕ್ಕಿಪಿಕ್ಕಿ ಸಮುದಾಯ ಮತ್ತು ಸಾಮಾಜಿಕಾರ್ಥಿಕ ಬದುಕಿನ ಸ್ಥಿತ್ಯಂತರಗಳು

೩

ಹಕ್ಕಿಪಿಕ್ಕಿ ಸಮುದಾಯ ಮತ್ತು ಸಾಮಾಜಿಕಾರ್ಥಿಕ ಬದುಕಿನ ಸ್ಥಿತ್ಯಂತರಗಳು

ಪೀಠಿಕೆ

ಭಾರತದ ಯಾವುದೇ ಸಮುದಾಯ ಅನನ್ಯತೆಯನ್ನು ಉಳಿಸಿಕೊಳ್ಳಲು ತನ್ನ ಸಾಮಾಜಿಕ ನಿಯಮಗಳನ್ನು ಕಟ್ಟುನಿಟ್ಟಿನಿಂದ ಪಾಲಿಸುತ್ತಲೇ ಇರುತ್ತವೆ. ಆದ್ದರಿಂದ ಸಹಜವಾಗಿ ತಮ್ಮ ಸಮಾಜದ ಬದುಕಿನ ನಿಯಮಗಳನ್ನು ಆತ್ಮದಂತೆ ಪೋಷಿಸಿಕೊಂಡು ಬರುತ್ತವೆ. ಸಮಾಜದಲ್ಲಿ ಬದಲಾವಣೆ ನಿಸರ್ಗದ ನಿಯಮವಾಗಿದೆ. ಸಮಾಜ ಬದಲಾವಣೆ ಆಗದೆ ಇರಲು ಅಸಾಧ್ಯ. ಬದಲಾವಣೆಗೆ ಕಾರಣ ಸಾಮಾಜಿಕ ಚಲನೆ. ಇದು ಸಾಮಾಜಿಕ ಅಸಮಾನತೆಗೆ ಸಂಬಂಧಿಸಿದ್ದುದಾಗಿದೆ. ಅಸಮಾನತೆ ಸಾಮಾಜಿಕ ಸ್ತರ ವ್ಯವಸ್ತೆಯನ್ನು ಒಳಗೊಂಡಿದೆ. ಸಮಾಜ ಹಲವಾರು ಸ್ತರಗಳನ್ನು ಹೊಂದಿರುವುದೇ ಸ್ತರ ವಿನ್ಯಾಸ. ಹೀಗೆ ಮಾನವನು ಒಂದು ಅಂತಸ್ತಿನಿಂದ ಇನ್ನೊಂದು ಅಂತಸ್ತಿಗೆ ಬದಲಾಗುವುದೇ ಸಾಮಾಜಿಕ, ಆರ್ಥಿಕ ಸ್ಥಿತ್ಯಂತರ.

ಭಾರತದಲ್ಲಿ ಬುಡಕಟ್ಟುಗಳು ಶತಮಾನಗಳಿಂದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ನ್ಯೂನ್ಯತೆಗಳನ್ನು ಅನುಭವಿಸುತ್ತ ಬಂದಿದೆ. ಅನಾದಿ ಕಾಲದಿಂದಲೂ ಅವು ಸಾಂಸ್ಕೃತಿಕ ಒಂಟಿತನವನ್ನು ಅನುಭವಿಸಿದ್ದರ ಪರಿಣಾಮವಾಗಿ ಸಮಾಜದ ಮುಂದುವರೆದ ವರ್ಗಗಳ ಶೋಷಣೆಗೆ ಗುರಿಯಾಗಿ ಹಿಂದುಳಿಯ ಬೇಕಾಯಿತು. ತೀವ್ರ ಅವಮಾನ ಹಸಿವು, ಗಂಭೀರ ಸ್ವರೂಪ, ರೋಗ ರುಜಿನಗಳಿಗೆ ತುತ್ತಾಗಿರುವ ಬುಡಕಟ್ಟುಗಳು ಸಮಾಜದಲ್ಲಿ ನಿಜವಾಗಿಯೂ ದಟ್ಟ ದಾರಿದ್ಯದ ಬದುಕನ್ನು ಬದುಕುತ್ತಿದ್ದಾರೆ.

ಹಕ್ಕಿಪಿಕ್ಕಿಯಂತಹ ಸಮುದಾಯದ ಜನರನ್ನು ಇಂದಿಗೂ ಸಮಾಜದಲ್ಲಿ ಅವರನ್ನು ಅಪರಾಧಿಗಳು ಎಂದು ಪರಿಗಣಿಸುವರು. "೧೯೪೭ರಲ್ಲಿ ಭಾರತಕ್ಕೆ ಅಧಿಕಾರ ಹಸ್ತಾಂತರವಾದ ನಂತರದ ದಿನದಿಂದಲೂ ಅಪರಾಧಿ ಬುಡಕಟ್ಟುಗಳ ಕಾಯ್ದೆಯಲ್ಲಿ ಪೋಲಿಸರು ಇಂತಹ ಸಮುದಾಯಗಳನ್ನು ಗುರುತಿಸಿ, ಗುರಿಯಾಗಿಟ್ಟುಕೊಂಡಿದ್ದಾರೆ. ಸ್ವತಂತ್ರ ಬಂದರೂ ಇವತ್ತು ಅಮವಾಸೆ ದಿನ ಪೋಲಿಸ್ ಠಾಣೆಗೆ ಹೋಗಿ ಮಲಗುವ ಜನ ಸಮುದಾಯಗಳು ಇವೆ."[೧] "ಇಂತಹ ಸಮುದಾಯಗಳಲ್ಲಿ ಹಕ್ಕಿಪಿಕ್ಕಿ ಸಮುದಾಯದವರು ಒಬ್ಬರು ಎಂದು ಗುರುತಿಸಿ ಸ್ವಾತಂತ್ರ್ಯ ಭಾರತದಲ್ಲಿ ಯಾವುದೋ ಊರಲ್ಲಿ ಕಳ್ಳತನವಾದರೂ ಮೊದಲು

ಬಂಧಿಸುವುದು ಆ ಊರಿನ ಹೊರಗೆ ಗುಡಿಸಲು ಹಾಕಿಕೊಂಡು ತಾತ್ಕಲಿಕವಾಗಿ ಬದುಕುವ ಅಲೆಮಾರಿಗಳನ್ನು. ಹೊಸಪೇಟೆ ಬಳಿ ಇರುವ ಹಕ್ಕಿಪಿಕ್ಕಿರು ಸ್ವತಂತ್ರ ಬಂದು ೬೦ ವರ್ಷಗಳು ಕಳೆದು ಹೋಗಿದ್ದರೂ ಅಮವಾಸೆಯ ರಾತ್ರಿ ಯಾರಾದರೂ ಹೊಟ್ಟೆಪಾಡಿಗಾಗಿ ಹಕ್ಕಿಗಳನ್ನು ಹೊಡೆದು ತಿಂದುಬಿಟ್ಟರೆ ಅವರನ್ನು ಬಂಧಿಸಿ ಪೋಟೋ ತೆಗೆಸಿ ನಮ್ಮ ಪೋಲೀಸರು ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳಲು ಈಗಲೂ ಹಾತೊರೆಯುತ್ತಾರೆ."[೨] ಈ ಸಮುದಾಯಕ್ಕೆ ಯಾವುದೇ ಸಹಾಯ ಒದಗಿಸದೆ ಅಮಾಯಕವಾಗಿ ಇದ್ದಂತಹ ಜನರ ಬದುಕನ್ನು ಆರ್ಥಿಕ ಸ್ಥಿತಿಯನ್ನು ಸುಧಾರಿಸದೇ ಕಾನೂನಿನ ಮೂಲಕ ದಂಡಿಸುವುದು ಹೀಗೆ ಸಮಾಜ ಬದಲಾದಂತೆ ಸಮುದಾಯಗಳ ಆರ್ಥಿಕ ಸ್ಥಿತಿಯಲ್ಲೂ ಬಹಳ ಬದಲಾವಣೆಯನ್ನು ಗುರುತಿಸಬಹುದು.

ಸಾಂಸ್ಕೃತೀಕರಣ, ನಗರೀಕರಣ, ಔದ್ಯೋಗಿಕರಣ ಪಾಶ್ಚಾತೀಕರಣ ಇತ್ಯಾದಿ ಕಾರಣಗಳು ಬುಡಕಟ್ಟುಗಳ ಮೇಲೆ ದಿನೇ ದಿನೇ ತನ್ನದೇ ಆದ ಪ್ರಭಾವ ಬೀರಿ ಬುಡಕಟ್ಟುಗಳನ್ನು ಸ್ಥಿತ್ಯಾಂತರಗೊಳಿಸುತ್ತಿವೆ. ಕಸುಬು, ಊಟೋಪಚಾರ, ಭಾಷೆ, ಉಡಿಗೆ ತೊಡಿಗೆ ಇತ್ಯಾದಿಗಳು ಬುಡಕಟ್ಟು ಸಮುದಾಯಗಳ ಬದುಕಿನಲ್ಲಿ ಬದಲಾವಣೆ ತರುತ್ತಿವೆ. ಇಂತಹ ಬದಲಾವಣೆಗಳು ಹಕ್ಕಿಪಿಕ್ಕಿ ಸಮುದಾಯಗಳ ಮೇಲೆ ಅನುಕೂಲವಾಗುವುದಕ್ಕಿಂತ ಪೂರಕವಾಗಿ ಅನಾನುಕೂಲಗಳೆ ಹೆಚ್ಚುತ್ತಿವೆ ಎಂಬುದೇ ನನ್ನ ಅಭಿಪ್ರಾಯ.

ಇದರಿಂದ ಬುಡಕಟ್ಟು ಸಮುದಾಯಗಳ ಸಮಸ್ಯೆಗಳು ಹೆಚ್ಚುತಿವೆ. "ಆಯಾ ಪ್ರದೇಶಗಳ ಮೂಲ ನಿವಾಸಿಗಳನ್ನು ಸ್ಥಳಾಂತರಿಸಲಾಗುತ್ತದೆ. ಸಂಸ್ಕೃತಿ, ಆಚಾರ-ವಿಚಾರ ಸಮಾಜದ ಆರ್ಥಿಕತೆಯ ಮೇಲೆ ಆಧುನಿಕತೆಯ ಕೆಟ್ಟ ಪರಿಣಾಮಗಳು ದಾಳಿ ಮಾಡುತ್ತಿವೆ ಹೊರತು ಅವರಿಗೆ ಅದರಿಂದಾಗಬಹುದಾದ ಒಳ್ಳೆತನದ ಸಾಧನಗಳು ದೊರೆಯುತ್ತಿಲ್ಲ. ಸಮುದಾಯಗಳು ಎಲ್ಲ ದೇಶಗಳಲ್ಲಿ ಇದ್ದಾರೆ. ಇಂಥವರೆಲ್ಲ ಒಂದೊಂದು ರೀತಿಯಲ್ಲಿ ಅಲ್ಲಲ್ಲಿನ ಪ್ರದೇಶಗಳಲ್ಲಿ ದಲಿತರಂತೆ ರೂಪಾಂತರಗೊಂಡಿದ್ದಾರೆ."[೩] ಇವರನ್ನು ಸಮಾಜವಲ್ಲಿ ಮೇಲು ವರ್ಗಗಳ ಸಮಾಜದಿಂದ ಅವರು ಪ್ರತ್ಯೇಕವಾಗಿ ಜೀವನ ನಡೆಸಿದ್ದರು. ಆ ವರ್ಗಗಳ ಪ್ರಭಾವ ಇವರ ಮೇಲೆ ಬೀಳವುದರಿಂದ ಇಂದು ಹಕ್ಕಿಪಿಕ್ಕಿ ಸಮುದಾಯದ ಜನರು ಬದಲಾವಣೆ ಹೊಂದುತ್ತಿದ್ದಾರೆ.

೩.೧. ಸಮಾಜದ ಬದಲಾವಣೆಗಳು

ಸಮಾಜದಲ್ಲಿ ಬದಲಾವಣೆ ನಿರತಂರವಾದುದು. ಈ ಕ್ರಿಯೆ ಪ್ರಕೃತಿದತ್ತವಾದುದು ಕೂಡ ಎಂದರೆ ತಪ್ಪಾಗಲಿಕ್ಕಿಲ್ಲ. ಸಮಾಜದಲ್ಲಿ ಬದಲಾವಣೆ ಎಂಬುವುದು ನಿರಂತರವಾಗಿರುವುದು. ಹಿಂದಿನ ಸಮಾಜ ಈಗಿಲ್ಲ, ಇಗಿದ್ದ ಸಮಾಜ ಮುಂದೆ ಇರಲಾರದು. ಬದಲಾವಣೆ ಎಂಬ ಕ್ರಿಯೆಯು ನಿರಂತರವಾಗಿರುವುದು. ಸಮಾಜ ಬದಲಾವಣೆ ಯಾವಾಗಲು ಸಕಾರಾತ್ಮಕವಾಗಿಯೇ ಇರುವುದಿಲ್ಲ. ಬದಲಾವಣೆಯನ್ನು ಎಲ್ಲರೂ

ಸ್ವೀಕರಿಸುತ್ತಾರೆ ಎಂದು ಭಾವಿಸಬಾರದು. ಸಾಮಾಜಿಕ ಬದಲಾವಣೆ ತರುವಲ್ಲಿ ಅಡಚಣೆಗಳು ಉಂಟಾಗಬಹುದು. ನೂತನ ವಿಚಾರಗಳಿಗೆ, ಭಾವನೆಗಳಿಗೆ ವಿರೋಧ, ಟೀಕೆ, ಸರ್ವಸಾಮಾನ್ಯವಾಗಿರುವುವು. ಇಂದಿನ ಯುವ ಪೀಳಿಗೆ ಬದಲಾವಣೆಯನ್ನು ಬಯುವುದರ ಜೊತೆ ಜೊತೆಗೆ ಸ್ವೀಕರಿಸುವಂತದ್ದು. ಆದರೆ ವೃದ್ಧರು ಹಿರಿಯರು ಬದಲಾವಣೆಯನ್ನು ಸ್ವೀಕರಿಸಲು ನಿರಾಕರಿಸುವರು. ಏಕೆಂದರೆ ಇವರ ಭಾವನೆಗಳು ಅನೇಕ ವರ್ಷಗಳ ಹಿಂದೆಯೇ ರೂಪಗೊಂಡಿರುವುದರಿಂದ ಅವರ ವಿಚಾರಗಳು ಸುಲಭವಾಗಿ ಬದಲಾಗುವುದಿಲ್ಲ. ಸಮಾಜದ ಬದಲಾವಣೆಯ ಬಗ್ಗೆ ಹಲಾವರು ಸಮಾಜಶಾಸ್ತ್ರಜ್ಞರು ತಮ್ಮದೆಯಾದ ಅಭಿಪ್ರಾಯಗಳನ್ನು ಹಾಗೂ ಒಮ್ಮತಗಳನ್ನು ಸಲ್ಲಿಸಿರುವರು. ಸಮಾಜ ಮತ್ತು ಸಮುದಾಯಗಳ ಅಧ್ಯಯನದಲ್ಲಿ ತಮ್ಮದೇಯಾದ ವ್ಯಾಖ್ಯನಗಳನ್ನು ನೀಡಿರುವರು. ಈ ವ್ಯಾಖ್ಯಾನಗಳನ್ನು ಈ ಅಧ್ಯಯನದಲ್ಲಿ ಪ್ರಸ್ತಾಪಿಸಲಾಗಿದೆ.

ಎಂ.ಎನ್.ಶ್ರೀನಿವಾಸರವರು, Social Change In modern India ಎಂಬ ಕೃತಿಯಲ್ಲಿ 'ಕೆಳಸ್ತರ ಹಿಂದು ಜಾತಿ ಅಥವಾ ಆದಿವಾಸಿ ಅಥವಾ ಇತರ ಸಮೂಹವು ತಮ್ಮ ರೂಢಿ ಸಂಪ್ರದಾಯ, ಪದ್ಧತಿ, ಸಂಸ್ಕಾರ ಕ್ರಿಯಾವಿಧಿ ಆದರ್ಶ ಜೀವನ ವಿಧಾನಗಳನ್ನು ಮೇಲ್ಜಾತಿಯವರ ಅದರಲ್ಲಿಯೂ ಹೆಚ್ಚಾಗಿ ದ್ವಿಜಾತಿಯವರ ರೀತಿ-ನೀತಿಗಳಿಗೆ ಅನುಗುಣವಾಗಿ ಬದಲಾಯಿಸಿಕೊಳ್ಳುವ ಪ್ರಕ್ರಿಯೆಯನ್ನು ಸಾಂಸ್ಕೃತಾನುಕರಣ ಎಂದು ಹೇಳುವರು.

ಚಲನೆಯ ಪ್ರಕ್ರಿಯೆಯನ್ನು ವಿವರಿಸಲು (Religion and sociaty among the coorgs of south India) ೧೯೫೨ ಎಂಬ ಗ್ರಂಥದಲ್ಲಿ ಅವರು ಮೊದಲು 'ಬ್ರಾಹ್ಮಣೀಕರಣ' ಎಂಬ ಪದವನ್ನು ಬಳಸಿದರು. ನಂತರ Social changs In modern India ಎಂಬ ಗ್ರಂಥದಲ್ಲಿ ಸಂಸ್ಕೃತಿಕರಣ ಎಂಬ ಪರಿಕಲ್ಪನೆಯನ್ನು ಬಳಸಿದರು.

ಪಿ.ಸರೋಕಿನ್ "ಒಂದು ಸಾಮಾಜಿಕ ಸ್ಥಾನದಿಂದ ಮತ್ತೊಂದು ಸಾಮಾಜಿಕ ಸ್ಥಾನಕ್ಕೆ ವ್ಯಕ್ತಿಗಳ ಅಥವಾ ಸಮೂಹಗಳ ಸ್ಥಳಾಂತರ ಹಾಗೂ ವ್ಯಕ್ತಿಗಳ ಮತ್ತು ಸಮೂಹಗಳಲ್ಲಿನ ಸಾಂಸ್ಕೃತಿಕ ಅಂಶಗಳ, ಮೌಲ್ಯಗಳ ಮತ್ತು ವಿಶೇಷ ಲಕ್ಷಣಗಳ ಬದಲಾವಣೆಯನ್ನು ಸಾಮಾಜಿಕ ಬದಲಾವಣೆ (ಸಾಮಾಜಿಕ ಚಲನೆ) ಎಂದು ಅಭಿಪ್ರಾಯಪಟ್ಟಿದ್ದಾರೆ."[೪]

ಹರ್ಬರ್ಟ್ ಸ್ಪೆನ್ಸರ್ ಅವರು 'ಸಮಾಜ ಒಂದು ಜೈವಿಕ ವ್ಯವಸ್ಥೆಯೆಂದು' ಪ್ರತಿಪಾದಿಸಿದ್ದಾರೆ. ಜೀವನ ವಿಕಾಸಕ್ಕೂ ಮತ್ತು ಸಮಾಜದ ವಿಕಾಸಕ್ಕೂ ಸಾಮ್ಯವಿದೆಯೆಂದು ಪ್ರತಿಪಾದಿಸುತ್ತಾರೆ.

"ಗತಕಾಲದ ಸಮಾಜದಲ್ಲಿ ಮಾನವ ಅನಾಗರಿಕ ವ್ಯವಸ್ಥೆಯಲ್ಲಿ ಬದುಕಿದ್ದ. ಆಗ ಇದ್ದ ಕುಶಲತೆಯೇ ಒಂದು ಮೌಲ್ಯವಾಗಿತ್ತು. ಸಮಾಜವು ಕೇವಲ ಹೋರಾಟ ನಡೆಸುವ ಗುಂಪುಗಳಿಂದ

ಕೂಡಿತ್ತು. ಯುದ್ಧ ಕುಶಲತೆಯೇ ಒಂದು ಮೌಲ್ಯವೆಂದು ಹೊಸ ನಿಲುವಿನತ್ತ ಸರಿಯಿತು. ಹೀಗೆ ಸಮಾಜದಲ್ಲಿ ಒಂದು ತಾರತಮ್ಯ ಭಾವನೆ ಮೂಡಿತು. ಸಮಾಜವು ಒಂದು ಪರಿಪೂರ್ಣ ಘಟಕವೆಂದು ಕಾರ್ಯನಿರ್ವಹಿಸಬೇಕಾದರೆ ವಿವಿಧ ಸಮೂಹಗಳ ನಡುವೆ ಅನ್ಯೋನ್ಯ ಸಂಬಂಧ ಅನಿವಾರ್ಯ.

ಅನಾದಿ ಕಾಲದಿಂದಲೂ ಮಾನವ ಸಮಾಜ ಬದಲಾವಣೆ ಹೊಂದುತ್ತಲೇ ಬಂದಿದೆ. ಇದಕ್ಕೆ ನಿರಂತರ ಬದಲಾವಣೆಯೇ ಮೂಲ ಕಾರಣ. ಬದಲಾವಣೆಯು ಸಮಾಜದ ಮೂಲಭೂತ ಗುಣವಾಗಿದ್ದರೂ ಪರಿವರ್ತನೆಯ ಗತಿಯಲ್ಲಿ ಏರುಪೇರುಗಳು ಕಂಡುಬರುತ್ತವೆ. ಒಂದು ಸಮಾಜದಲ್ಲಿ ಪರಿವರ್ತನೆಯು ತೀವ್ರಗತಿಯಾಗಿರಬಹುದು. ಇಲ್ಲವೇ ಆಗದೇ ಇರಬಹುದು.

ಉದಾ. ಕೈಗಾರೀಕರಣಗೊಂಡ ಔದ್ಯೋಮಿಕವಾಗಿ ಮುಂದುವರಿದಿದ್ದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪರಿವರ್ತನೆಯ ಗತಿ ತೀವ್ರವಾಗಿರುತ್ತದೆ. ಅದೇ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಬದಲಾವಣೆಯು ಮಂದಗತಿಯಲ್ಲಿರುತ್ತದೆ. ಹಕ್ಕಿಪಿಕ್ಕಿ ಸಮುದಾಯದ ಜನರು ತೀವ್ರಗತಿಯಲ್ಲಿ ಬದಲಾವಣೆ ಹೊಂದದಿದ್ದರೆ ಅವರು ಹಂತ ಹಂತವಾಗಿ ಬದಲಾವಣೆ ಹೊಂದುತ್ತಿರುವರು. ತಂತ್ರಜ್ಞಾನದಿಂದ ಅವಿಷ್ಕಾರದಿಂದ ಜಾತಿಯ ಪ್ರಭಾವ ಕಡಿಮೆಯಾದುದರಿಂದ ಹಕ್ಕಿಪಿಕ್ಕಿಯರಲ್ಲಿ ಜಾತಿ ಮತ ಭೇದವಿಲ್ಲದೆ ಒಂದೇ ಕಡೆ ಸೇರುವಂತಾಯಿತು. ಮೀಸಲಾತಿಯು ಸಹ ಸಮಾಜ ಪರಿವರ್ತನೆಯಲ್ಲಿ ಮುಖ್ಯ ಪಾತ್ರವಹಿಸುತ್ತದೆ.

ಅಲೆಮಾರಿಗಳಾಗಿ ಸಂಚರಿಸುತ್ತಿದ್ದ ಇವರುಗಳು ಇಂದು ಒಂದೇ ಕಡೆ ನೆಲೆ ನಿಲ್ಲುವಂತಾಗಿದ್ದಾರೆ. ಅಲೆಮಾರಿಗಳಾದ ಇವರು ಒಂದೇ ಕಡೆ ನೆಲೆ ನಿಲ್ಲುತ್ತಿರುವರು. ಪ್ರತ್ಯೇಕವಾಗಿ ನಗರಗಳಲ್ಲಿ ಅವರು ತಮ್ಮದೇ ಆದ ಕಾಲೋನಿಯಲ್ಲಿ ಜೀವನ ಸಾಗಿಸುತ್ತಿರುವರು. ಇಲ್ಲಿ ಒಂದು ಸಮುದಾಯವನ್ನು ಅಧ್ಯಯನ ಮಾಡವಾಗ ಕೇವಲ ಈ ಒಂದು ಸಮುದಾಯವು ಹಿಂದಿನಿಂದ ಬಂದ ದಾರಿ ಅಂದರೆ ಅದು ಹೊಂದಿರುವ ಚಾರಿತ್ರಿಕ ಹಿನ್ನೆಲೆ, ಹಿಂದಿನಿಂದ ಈಗ ಯಾವ ರೀತಿಯಾಗಿ ಬದಲಾವಣೆ ಹಂತ ಹಂತವಾಗಿ ಹೊಂದುತ್ತಿವೆ ಎಂದು ಅಭ್ಯಸಿಸುವುದು. ಆದರೆ ಪೂರ್ತಿ ಸಮುದಾಯಗಳು ಯಾವ ರೀತಿಯಾಗಿ ಬದಲಾವಣೆ ಹೊಂದಿದವು ಹಾಗೂ ಸಾಮಾಜಿಕ ಬದಲಾವಣೆಯಲ್ಲಿ ಕೇವಲ ಮೇಲ್ವರ್ಗದ ಸಮುದಾಯಗಳು ಮಾತ್ರ ತೀವ್ರಗತಿಯಲ್ಲಿ ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಅವು ಬದಲಾವಣೆಯ ಹಂತವನ್ನು ವೇಗವಾಗಿ ಹೊಂದಿದ್ದವು. ಆದರೆ ಬುಡಕಟ್ಟು ಸಮುದಾಯ ಎನಿಸಿರುವ ಸಮುದಾಯಗಳು ಅಂದರೆ ಕೆಳವರ್ಗದ ಸಮುದಾಯಗಳಲ್ಲಿ ಬದಲಾವಣೆ ಎಂಬುದು ಇದುವರೆಗೂ ಕಂಡುಬಂದಿಲ್ಲ ಎಂದು ಹೇಳಬಹುದು. ಕೈಗಾರೀಕರಣ ಹಾಗೂ ಖಾಸಗೀಕರಣಗಳ ಒಂದು ಬೆಳವಣಿಗೆಯಿಂದ ಸಮುದಾಯದಲ್ಲಿ ಬದಲಾವಣೆ ಎಂಬುವುದು ಮಂದಗತಿಯಲ್ಲಿ ಚಲಿಸುತ್ತಿರುವುದು ವಿಕಾಸ ಹಾಗೂ ಚಲನೆಯ ಪ್ರಕ್ರಿಯೆಯಲ್ಲಿ ನಿಧಾನಗತಿಯಲ್ಲಿ ಸಮುದಾಯಗಳು ಬದಲಾವಣೆಯ ಹಂತವನ್ನು

ತಲುಪಿರುವವು. ಅಲೆಮಾರಿ, ಆದಿವಾಸಿ, ಅನಾಗರಿಕನಂತೆ ಸಮಾಜದಲ್ಲಿ ಮಾನವ ಶಿಲಾಯುಗದಿಂದ ಪ್ರಾರಂಭವಾಗಿ ಕಬ್ಬಿಣಯುಗದವರೆಗೆ ಬದಲಾವಣೆ ಅರಸುತ್ತಲೇ ಬಂದಿದ್ದಾನೆ.

ಸ್ಪೆಗ್ಲೆರ್ (Spergler) ಎಂಬ ಸಮಾಜ ವಿಜ್ಞಾನಿಯು ಸಮಾಜಕ್ಕೆ ಹುಟ್ಟು, ಬೆಳವಣಿಗೆ, ಅಭಿವೃದ್ಧಿ ಹಾಗೂ ಅವನತಿಗಳು ಇರುವುದಾಗಿ ಪ್ರತಿಪಾದಿಸಿದರು. ಪ್ರಸ್ತುತ ಸಮಾಜದಲ್ಲಿ ಹೊಸಪೇಟೆ ತಾಲ್ಲೂಕಿನಲ್ಲಿ ನೆಲೆಸಿದ್ದ ಅಲೆಮಾರಿ ಜನಾಂಗ ಎನಿಸಿರುವ ಹಕ್ಕಿಪಿಕ್ಕಿ ಸಮುದಾಯದ ಸಮಾಜವನ್ನು ಅವರನ್ನು ಅವಲೋಕಿಸಿದಾಗ, ಅವರ ಮೊದಲಿನ ಸಾಮಾಜಿಕ ಜೀವನಕ್ಕೂ ಹಾಗೂ ಪ್ರಸ್ತುತ ನೆಲೆಸಿರುವ ಸಮುದಾಯಕ್ಕೂ ಬಹಳ ವ್ಯತ್ಯಾಸವನ್ನು ಗುರುತಿಸಬಹುದು. ಮೂಲತಃ ಹಕ್ಕಿಪಿಕ್ಕಿಯರು ಗುಜರಾತ್ ರಾಜಸ್ಥಾನದಿಂದ ಬಂದು ಕರ್ನಾಟಕಕ್ಕೆ ನೆಲೆಸಿರುವರು.

ಹಕ್ಕಿಪಿಕ್ಕಿ ಸಮುದಾಯದವರು ಮೊದಲು ಬೇಟೆಯೇ ಅವರ ಮೂಲ ಕಸುಬು. ಆದ್ದರಿಂದ ಅವರು ಅವರ ಒಂದು ಜೀವನಕ್ಕೆ ಆಧಾರ ಬೇಟೆಯಾಗಿತ್ತು. ಅಗ ಸಮಾಜದಲ್ಲಿ ಅವರು ಊರ ಹೊರಗಡೆ ಗುಡಾರಗಳನ್ನು ಹಾಕಿಕೊಂಡು ಜನ ಸಂಪರ್ಕವಿರದ ಸ್ಥಳದಲ್ಲಿ ಜೀವನ ನಡೆಸುತ್ತಿದ್ದರು. ಆದರೆ ಇಂದು ಹಕ್ಕಿಪಿಕ್ಕಿಯರು, ಹೊಸಪೇಟೆಯಂತಹ ತಾಲ್ಲೂಕಿನಲ್ಲಿರುವರು. ಜನನಿಬಿಡ ಶಹರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇಂದು ಪ್ರತ್ಯೇಕವಾದ ಶಿಕಾರಿ ಕಾಲೋನಿ, ಕಾರಿಗನೂರು, ಸಣ್ಣಾಪುರ, ಕಂಪ್ಲಿ ಈ ಎಲ್ಲಾ ಗ್ರಾಮಗಳಲ್ಲಿ ತಮ್ಮದೇ ಆದ ಸ್ವತಃ ಮನೆಗಳಲ್ಲಿ ಸರ್ಕಾರ ಸೌಲಭ್ಯಗಳನ್ನು ಪಡೆದು ಸರ್ಕಾರದ ಹಲವು ರೀತಿಯ ಯೋಜನೆಗಳ ಒಂದು ಅಡಿಯಲ್ಲಿ ಅವರು ಜೀವನ ಸಾಗಿಸುತ್ತಿರುವರು. ಬೇರೆ ಬೇರೆ ವರ್ಗಗಳ ಜೊತೆಯಲ್ಲಿಯೂ ಕೂಡ ಸಂಪರ್ಕವನ್ನು ಹೊಂದಿರುವರು. ಹಲವು ಸಮುದಾಯಗಳ ಪ್ರಭಾವ ಇವರ ಮೇಲೆ ಬೀಳುವುದರಿಂದ ಸಮಾಜವು ಬದಲಾವಣೆಯತ್ತ ನಡೆಯುತ್ತಿರುವುದು. ಸ್ವಯಂ ಸಂಘಗಳು ಹಾಗೂ ಸ್ತ್ರೀಶಕ್ತಿ ಸಂಘಗಳನ್ನು ಹೊಂದಿರುವರು. ಮೈಸೂರು, ಬೆಂಗಳೂರಿನಲ್ಲಿ ನೆಲೆಸಿರುವ ಇವರು ಗಿಡ ಮೂಲಿಕೆ ಔಷಧಿಗಳಲ್ಲಿ ಪರಿಣಿತಿ ಹೊಂದಿದ್ದು, ಕರಕುಶಲ ವಸ್ತುಗಳನ್ನು ಮಾರಾಟ ಮಾಡುವರಾಗಿದ್ದಾರೆ. ಇತರ ಕೃಷಿ, ಕೂಲಿ, ವ್ಯಾಪರದಲ್ಲಿ ಪರಿಣಿತಿ ಹೊಂದಿರುವರು. ಅವರ ಮೂಲ ವೃತ್ತಿ ಬೇಟೆಯು ಕ್ರಮೇಣ ಕಡಿಮೆಯಾಗಿದೆ. ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಬದಲಾವಣೆಗೆ ಆಧುನಿಕತೆಯು ಬಹುಮುಖ್ಯ ಪಾತ್ರವಹಿಸಿದೆ. ಆದರೆ ಆಧುನಿಕತೆಯು ಇಡೀ ಸಮಾಜ ರಚನೆಯನ್ನು ಹಿಡಿಯಾಗಿ ಬದಲಾಯಿಸಿದೆ ಎಂದರೆ ತಪ್ಪಾಗುತ್ತದೆ. ಗ್ರಾಮಗಳಲ್ಲಿ ಇಂದಿಗೂ ಮೌಲ್ಯಗಳು, ಉಡುಗೆ ತೊಡುಗೆಗಳು ಬೇಟೆಗೆ ಬಳಸುವ ವಸ್ತುಗಳು ಪ್ರತ್ಯೇಕವಾದ ವಾಸಸ್ಥಾನ ಹಬ್ಬ, ಆಚರಣೆ, ಮುಂತಾದವು, ಅವುಗಳ ಸ್ವರೂಪದಲ್ಲಿ ಕೆಲವೊಂದು ಬದಲಾವಣೆಗಳು ಉಂಟಾಗಿವೆ. ಆದರೆ ಸಂಪೂರ್ಣವಾಗಿ ಬದಲಾವಣೆ ಹೊಂದದೆ ಇಂದಿಗೂ ಇವುಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಬದಲಾವಣೆ ಸರ್ವವ್ಯಾಪಿಯಾದದ್ದು ಪ್ರತಿಯೊಂದು ಸಮಾಜವು ಪರಿವರ್ತನೆಯ ಸುಳಿಯಲ್ಲಿ ಜೀವಂತವಾಗಿರುತ್ತದೆ. ಆದರೆ ಇದರ ತೀವ್ರತೆ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿರುತ್ತದೆ.

ನಾನು ಕ್ಷೇತ್ರಕಾರ್ಯ ಮಾಡಿದ ಗ್ರಾಮಗಳಲ್ಲಿ ಆಧುನಿಕತೆಯ ಪ್ರಭಾವದಿಂದ ದಿನನಿತ್ಯದ ಅತ್ಯಾವಶ್ಯಕ ವಸ್ತುಗಳ ಉಪಯೋಗದ ದಿನಚರಿಯಲ್ಲಿ ಜೀವನ ಶೈಲಿ ಮಾರ್ಪಟಾಗಿದೆ. ಮೊದಲೇ ಹೇಳಿದಂತೆ ಆಧುನಿಕತೆಗೆ ಒಳಗಾದ ವ್ಯಕ್ತಿಗಳು ತಮ್ಮ ಉಡುಗೆ ತೊಡುಗೆಗಳು, ಆಚಾರ ವಿಚಾರಗಳಲ್ಲಿ ಮದುವೆ ಸಂಪ್ರದಾಯದ ಅಂಶಗಳಲ್ಲಿ ಬದಲಾವಣೆ ತಂದು ಕೊಂಡಿದ್ದಾರೆ.

ಈ ಬದಲಾವಣೆಗೆ ಸಮೂಹ ಮಾಧ್ಯಮ, ಶಿಕ್ಷಣ, ಸಾರಿಗೆ ಸಂಪರ್ಕವು ಮುಂತಾದವುಗಳು ಕಾರಣವಾಗಿವೆ. ಇಂದು ಗ್ರಾಮಗಳಲ್ಲಿ ಆಧುನಿಕ ವಸ್ತುಗಳನ್ನು ಬಳಕೆ ಮಾಡುತ್ತಿದ್ದಾರೆ. ನಗರಕ್ಕೆ ಹತ್ತಿರವಿರುವ ಗ್ರಾಮಗಳು ನಗರ ಜೀವನ ಶೈಲಿಯನ್ನು ಸಂಪೂರ್ಣವಾಗಿ ಅನುಕರಿಸುತ್ತಿವೆ. ಶಿಥಿಲ ಗುಡಿಸಲುಗಳಲ್ಲಿ ವಾಸಿಸುತ್ತಿದ್ದವರು, ಹಂಚಿನ ಮನೆಯಲ್ಲಿ, ಆರ್.ಸಿ.ಸಿ. ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಹಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ದೊರೆತಿದ್ದು, ಹಣವು ಘನತೆಯನ್ನು ನಿರ್ಧರಿಸುವ ಅಳತೆಗೋಲಾಗಿದೆ. ರಸ್ತೆಯಲ್ಲಿ ಮೋಟಾರು ವಾಹನಗಳು ಓಡಾಡುತ್ತಿವೆ, ಶಾಲೆಗಳಾಗಿವೆ, ಬೇಸಾಯದಲ್ಲಿ ಆಧುನಿಕ ಸುಧಾರಿತ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಅಧುನಿಕತೆಯ ರೂಪಗಳಾದ ರೇಡಿಯೋ, ಮೋಟಾರು ವಾಹನಗಳು, ಟಿ.ವಿ., ಪತ್ರಿಕೆಗಳು ಹಾಗೂ ದೂರವಾಣಿ ಸಮುದಾಯದ ಜನರಲ್ಲಿ ಇರುವುದನ್ನು ಕಾಣುತ್ತೇವೆ. ಈ ರೀತಿಯ ಬದಲಾವಣೆಗಳನ್ನು ಸಮುದಾಯಗಳಲ್ಲಿ ಉಂಟು ಮಾಡುತ್ತಿವೆ. ಹೀಗೆ ಸಮುದಾಯದ ರಚನೆಯನ್ನೇ ಆಧುನಿಕತೆಯು ಬದಲಾಯಿಸಿದೆ. ಉದಾ. ಎಸ್.ಮೋತಿ ತಂದೆ ರಾಮಣ್ಣ ಕವನೂರು ಇವರು ಕಂಪ್ಲಿ ಪಟ್ಟಣದಲ್ಲಿ ಬಿ.ಎ. ಪದವಿಯನ್ನು ಪಡೆದುಕೊಂಡು ಸಮಾಜ ಕಲ್ಯಾಣ ಇಲಾಖೆಯ ಆಶ್ರಯದಲ್ಲಿ ಒಂದು ವರ್ಷದ ಅವಧಿಗೆ ಉಚಿತ ಕಂಪ್ಯೂಟರ್ ತರಬೇತಿಯನ್ನು ಸಹ ಪಡೆದಿರುತ್ತಾರೆ. ಹಾಗೆಯೇ ಎಚ್.ಪಿ.ಶಿಕಾರಿ ರಾಮು ತಂದೆ ಕಂಸಪ್ಪ ಸಾವಂಡಿಯ ಇವರು ಸಹ ಪಿ.ಯು.ಸಿ.ವರೆಗೆ ಓದಿಕೊಂಡು ಬಳ್ಳಾರಿ ಜಿಲ್ಲೆಯ ಹಕ್ಕಿಪಿಕ್ಕಿ ಸಂಘಕ್ಕೆ ಅಧ್ಯಕ್ಷರಾಗಿ ಅತ್ಯಂತ ಚುರುಕಿನಿಂದ ಸರ್ಕಾರದಿಂದ ದೊರೆಯುಬೇಕಾದ ಎಲ್ಲಾ ಸವಲತ್ತುಗಳ ಒದಗಿಸಲು ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ.

ಸಾಮಾಜಿಕ ಬದಲಾವಣೆಯ ಬಗ್ಗೆ ಡಾ.ಎಂ.ಎಂ.ಶ್ರೀನಿವಾಸರವರು "ಸಂಸ್ಕೃತಾನುಕರಣೆ ಸಾರ್ವತ್ರಿಕವಾದ ಪ್ರಕ್ರಿಯೆಯಾಗಿದೆ" ಎಂಬ ಪ್ರಸ್ತಾಪವನ್ನು ಮುಜಮೆದಾರರವರು ಹೀಗೆ ವಿಮರ್ಶಿಸುವರು. "ಕಾರಣವೆನೆಂದರೆ ಜಾತಿ ವ್ಯವಸ್ಥೆ ಹಲವಾರು ಕಟ್ಟುಪಾಡುಗಳಿಂದ ಕೂಡಿದ ಮುಚ್ಚಿದ ವ್ಯವಸ್ಥೆಯಾಗಿದೆ. ಇಂತಹ ಜಾತಿ ವ್ಯವಸ್ಥೆಯ ಸಾಮಾಜಿಕ ಚಲನೆಯಲ್ಲಿ ಸಾರ್ವತ್ರಿಕವಾಗಿ ಎಲ್ಲಾ ಕೆಳಜಾತಿಯವರು ಮೇಲ್ಜಾತಿಯವರ ಹೆಸರು, ಉಡುಪು, ಆಹಾರ ಅಭ್ಯಾಸಗಳು ಇತ್ಯಾದಿಗಳನ್ನು ಅನುಕರಣೆ ಮಾಡುವುದರಿಂದ ಜಾತಿ ಶ್ರೇಣಿಯಲ್ಲಿ ಮೇಲಕ್ಕೆ ಹೋಗಲಾರರು ಎನ್ನುವ ಅಪವಾದ ಸ್ಥಿತಿಯನ್ನು ಮೋಹನ್ ಗ್ರಾಮದ ತಮ್ಮ ಅಧ್ಯಯನದಲ್ಲಿ ಅವಲೋಕಿಸಿದ್ದಾರೆ. "ಸಮಾಜದಲ್ಲಿ ಬದಲಾವಣೆಯು ಹಕ್ಕಿಪಿಕ್ಕಿಯರ ಮನೋವೃತ್ತಿ, ಆಲೋಚನಾ ಸಾಮರ್ಥ್ಯ ಬದಲಾವಗುತ್ತಿದೆ. ಹೀಗಾಗಿ ಅವರು ಬದಲಾವಣೆಯನ್ನು ಸಹಜವಾಗಿ

ಬಯಸುತ್ತಾರೆ. ಸರ್ಕಾರದ ಪುನರ್ವಸತಿ ಯೋಜನೆ ಅಡಿಯಲ್ಲಿ ಸಹಾಯ ಪಡೆದು ಒಂದೇ ಕಡೆಯಲ್ಲಿ ನೆಲೆಯಾಗಿ ನಿಲ್ಲಲು ಸಹಾಯವಾಯಿತು. ಹೀಗೆ ವ್ಯಾಪಾರದ ಜೊತೆ ಮುಂತಾದ ಕಸುಬನ್ನು ಮಾಡಲು ಅನುಕೂಲವಾಯಿತು. ಸ್ಥಿರವಾದ ನೆಲೆ ಬದುಕಿನ ಬದಲಾವಣೆಗೆ ಹೊಸ ಆಯಾಮವನ್ನು ನೀಡಿತು."[೬]

೩.೨. ಆರ್ಥಿಕ ಚಟುವಟಿಕೆಗಳಲ್ಲಾದ ಬದಲಾವಣೆಗಳು

"ಭಾರತದಲ್ಲಿ ಬುಡಕಟ್ಟುಗಳು ಹಿಂದಿನಿಂದಲೂ ಸಾಮಾಜಿಕ ಆರ್ಥಿಕ ನ್ಯೂನ್ಯತೆಗಳನ್ನು ಅನುಭವಿಸುತ್ತಾ ಬಂದಿದೆ. ಆಧುನೀಕರಣ ಮತ್ತು ಕೈಗಾರೀಕರದಿಂದಾಗಿ ದೇಶದಲ್ಲಿ ಅರಣ್ಯ ಪ್ರದೇಶ ಕಿರಿದಾಗುತ್ತಾ ಬಂದಿದೆ. ಪುನರ್ ವಸತಿ ಮತ್ತು ಬಂಡವಾಳ ಯೋಜನೆಗಳು ಅವರನ್ನು ಕಾಡಿನಿಂದ ಬಯಲಿಗೆ ಸ್ಥಳಾಂತರಗೊಳಿಸಿತು. ಬದಲಾದ ಆರ್ಥಿಕ ಪರಿಸರದಿಂದ ಅನೇಕರು ತಮ್ಮ ಮೂಲಸ್ಥಾನಗಳನ್ನು ತೊರೆದು ಬುಡಕಟ್ಟು ಕಸುಬುಗಳನ್ನು ಕೈಬಿಟ್ಟಿದ್ದಾರೆ. ಅಂತೆಯೇ ಆರ್ಥಿಕ ಜೀವನವು ಬದಲಾಗಿದೆ. ಜಾತಿ ಮತ್ತು ವೃತ್ತಿಯ ನಡುವಣ ಸಂಬಂಧದಲ್ಲಿನ ಬದಲಾವಣೆಯಲ್ಲಿ ಸಾಮಾಜಿಕ ಆರ್ಥಿಕ ಅಂಶಗಳು ಗಮನಾರ್ಹ ಪಾತ್ರವಹಿಸುತ್ತವೆ. ಬದಲಾವಣೆಯನ್ನು ತೀವ್ರಗೊಳಿಸುವ ಇಲ್ಲವೇ ಕುಂಠಿತಗೊಳಿಸುವ ಅಂಶಗಳಲ್ಲಿ ಮಾನವನ ಆರ್ಥಿಕ ಚಟುವಟಿಕೆಗಳಲ್ಲಾದ ಬದಲಾವಣೆಯು ಹೀಗೆ ಮುಂದುವರೆಯುತ್ತಿರುತ್ತದೆ."[೭] ಮೊದಲಿನಿಂದಲೂ "ರಾಜರ ದತ್ತಿ ಇನಾಮುಗಳನ್ನು ಭೂಮಿಗಳನ್ನು ನಂಬಿಕೊಂಡು ಬಂದ ಈ ಬುಡಕಟ್ಟು ಸಮುದಾಯಗಳು ಭಾರತ ಮಧ್ಯಕಾಲೀನ ಆರ್ಥಿಕ ಚಟುವಟಿಕೆಗಳಿಂದ ತಲ್ಲಣಗೊಂಡವು. ಅಲ್ಲದೆ ಕೃಷಿ ಭೂಮಿಗೆ ಸಂಬಂಧಿಸಿದ ಮತ್ತು ಭೂ ಕಂದಾಯಕ್ಕೆ ಸಂಬಂದಿಸಿದಂತೆ ಕಾನೂನುಗಳು ರೂಪುಗೊಂಡವು. ಮೊಘಲರು ಜಮೀನ್ದಾರಿ ಪದ್ಧತಿಯನ್ನು ಮೊದಲ ಬಾರಿಗೆ ಖಾಸಗಿ ಆಸ್ತಿಯನ್ನಾಗಿ ಪರಿಗಣಿದರು. ಕಂದಾಯ ಪಾವತಿಸಲು ವಿಫಲರಾದರೆ, ಅವರ ಜಮೀನುಗಳನ್ನು ವಶಪಡಿಸಿಕೊಂಡರು."[೮]

"ಜಮೀನ್ದಾರರ ಒಂದು ಆಳ್ವಿಕೆಗೆ ಬುಡಕಟ್ಟುಗಳು ಗುರಿಯಾದವು. ೧೭೯೩ರಲ್ಲಿ ಶಾಶ್ವತ ಜಮೀನ್ದಾರಿ ಪದ್ಧತಿ ಜಾರಿಯಲ್ಲಿ ಬಂದಿತು. ವಸಾಹತುಶಾಹಿ ಕಾಲಘಟ್ಟದ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ರಷ್ಯದ ಲೇಖಕ ಎ.ಆಯ್.ಮಿದೆವೋಯ್ ಅಧ್ಯಯನ ಮಾಡಿರುವರು."[೯] ಭೂಕಾಯ್ದೆಯ ಒಂದು ನಿಯಮದಿಂದ ಕಂಪನಿ ಆಡಳಿತಗಾರರ ಸಂಚಿನಿಂದ ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರ, ಒರಿಸ್ಸಾ, ಆಂಧ್ರ ಪ್ರದೇಶದಿಂದ ಅನೇಕ ಬುಡಕಟ್ಟು ಸಮುದಾಯಗಳು ವಲಸೆ ಬಂದು ನೆಲೆನಿಂತು ಪರಿವರ್ತನೆಗೊಂಡವು.

"ಮೌರ್ಯೋತ್ತರ ಕಾಲದಲ್ಲಿ ಬುಡಕಟ್ಟು ಜನರ ಬದುಕಿನ ಆರ್ಥಿಕ ಸ್ಥಿತಿಗತಿಯೂ ತುಂಬಾ ಕೆಳ ದರ್ಜೆಯಲ್ಲಿತ್ತು. ಜೀವನ ಪರಿಸ್ಥಿತಿಯು ತುಂಬಾ ಶೋಚನೀಯವಾಗಿತ್ತು. ಹತ್ತು ಹಸುಗಳನ್ನು ಕಾಯುತ್ತಿದ್ದರೆ. ಆ ಹಸುವಿನಲ್ಲಿ ಒಂದು ಹಸುವಿನ ಹಾಲನ್ನು ಕೂಲಿಯ ರೂಪದಲ್ಲಿ ಯಾವುದಾದರೂ

ಹಸುವಿನ ಹಾಲನ್ನು ಅವನು ಕರೆದುಕೊಳ್ಳಬಹುದು. ಅದು ಆ ದಿನದ ಶ್ರಮದ ಕೂಲಿ. ಈ ರೀತಿಯ ಹಲವು ಕರಾರುಗಳು ಇದ್ದವು. ಕೇವಲ ಅವರು ಶ್ರೀಮಂತನೊಬ್ಬನ ಮನೆಯ ಸುತ್ತ ಬೀಳುವ ಕಸವನ್ನು ತೆಗೆದುಹಾಕುತ್ತ ಅವನ ಮನೆಯ ಹತ್ತಿರವೇ ಒಂದು ಹುಲ್ಲಿನ ಜೋಪಡಿಯಲ್ಲಿ ಬದುಕು ಸಾಗಿಸುತ್ತಿದ್ದರು."[೨೦] ಕಾಲಗತಿಸಿದಂತೆಲ್ಲ ಈ ಬುಡಕಟ್ಟಿಗರ ಆರ್ಥಿಕ ಜೀವನ ಬದಲಾಗುತ್ತ ಬಂತು. ಮುಂದೆ ವೈಯಕ್ತಿಕವಾಗಿ ಭೂಮಾಲೀಕರ ಅಡಿಯಲ್ಲಿ ಕೃಷಿ ಕಾರ್ಮಿಕರಾಗಿ ಮುಂದುವರೆದರು.

ಆದರೆ ಕೈ ಕಸುಬುಗಾರರಾಗಿ ತಮ್ಮ ಕೆಲಸದಲ್ಲಿ ಹಿಂದಿಗಿಂತ ಹೆಚ್ಚು ಸ್ವತಂತ್ರವಿತ್ತೆಂದು ತೋರುತ್ತದೆ. ಹೊಸ ಕಸುಬುಗಳು ಹುಟ್ಟಿಕೊಂಡವು. ಅವರ ಜೀವನ ಸ್ಥಿತಿಯು ಏಳ್ಗೆಯನ್ನು ಕಂಡಿತು. ಬಹುಪಾಲು ಬುಡಕಟ್ಟು ಜನರ ಮೇಲೆ ಅವರ ಬದುಕಿನಲ್ಲಿ ಆರ್ಥಿಕ ರೂಪಾಂತರಗಳು ಕಂಡುಬಂದವು."[೨] ಹೀಗೆ ಬುಡಕಟ್ಟು ಸಮುದಾಯಗಳು ಆರ್ಥಿಕತೆಯಲ್ಲಿ ಬದಲಾವಣೆಯ ಪಂಥದಲ್ಲಿ ಮುಂದುವರೆದವು. ಸಾಧನೆಗಳ ಪ್ರಗತಿಗನುಗುಣವಾಗಿ ಪರಿವರ್ತನೆಯನ್ನು ಎಂಗೆಲ್ಸ್‌ರವರು ಈ ರೀತಿಯಾಗಿ ಗುರುತಿಸುತ್ತಾರೆ. "ಮಾನವ ಕೌಶಲ್ಯದ ಮೇಲೆಯೇ ಅವನ ಪಾರಮ್ಯದ ಪ್ರಶ್ನೆ ನಿಸರ್ಗದ ಮೇಲೆ ಅವನ ಅಧಿಪತ್ಯದ ಪ್ರಶ್ನೆ ಅವಲಂಬಿಸಿದ್ದು, ಜೀವನ ಉಪಾಯೋಗಕ್ಕಾಗಿ ಸಾಧನೆಗಳ ಮೂಲಗಳನ್ನು ವಿಸ್ತರಿಸಿದೆ. ಈ ಕಾಲಘಟ್ಟಗಳು ಹೆಚ್ಚು ಕಡಿಮೆ ಮಾನವನ ಪ್ರಗತಿಯು ಮಹೋನ್ನತ ಮೆಟ್ಟಿಲುಗಳೇ ಆಗಿವೆ. ಕೃಷಿಯ ಹಂತದಲ್ಲಿನ ಉತ್ಪಾದನಾ ಪರಿಕರಗಳು ಶ್ರಮದಲ್ಲಿನ ಬದಲಾವಣೆಯು ಮಾನವನನ್ನು ಅನೇಕ ಬಗೆಯ ಹೊಸ ಹೊಸ ಕ್ಷೇತ್ರಗಳ ಕಡೆಗೆ ನಡೆಯುವಂತೆ ಮಾಡಿದೆ."[೨೨] ಹೀಗೆ ಹಕ್ಕಿಪಿಕ್ಕಿ ಜನಾಂಗಕ್ಕೆ ವಿಕಾಸದ ಮಾರ್ಗದರ್ಶನ ಸಿಗಲಿಲ್ಲ. ಅವರು ಹಕ್ಕಿಗಳನ್ನು ಹುಡುಕಿ ಅಲೆದಾಡುವ ವೃತ್ತಿಯಲ್ಲಿ ಉಳಿಯಬೇಕಾಯಿತು. ಇವರನ್ನು ಈ ಕಾರಣಕ್ಕೆ 'ವೃತ್ತಿ ಅಲೆಮಾರಿಗಳು' ಎಂದು ಕರೆಲಾಯಿತು. ನೆಲ ಮತ್ತು ನೆಲೆ ಇಲ್ಲದವರು ಒಂದು ಸಮಾಜದ ಮುಖ್ಯಸ್ಥಾನದಲ್ಲಿ ಸ್ಥಾಪಿತವಾಗಲು ಸಾಧ್ಯವಾಗುವುದಿಲ್ಲ. ಅವರು ಮುಖ್ಯ ಉತ್ಪತ್ತಿಯಲ್ಲಿ ತೊಡಗಲು ಪಾಲುದಾರರಾಗಲು ಆಗುವುದಿಲ್ಲ.

ಅಲೆಮಾರಿ ಜನಾಂಗ ಸ್ವತಂತ್ರವಾಗಿ ಎಂದೂ ಮುಖ್ಯ ಉತ್ಪತ್ತಿಯಲ್ಲಿ ತೊಡಗಿಲ್ಲ. ಬೇರೆಯವರ ಉತ್ಪತ್ತಿಯ ಉಳಿತಾಯಕ್ಕೆ ಕೈ ಚಾಚಿದ್ದಾರೆ. ಅವರ ಕೆಲಸ ಪ್ರಧಾನ ಅಲ್ಲ. ಪೂರಕ ಕ್ರಿಯೆಗಳಾಗಿವೆ. ಉದಾ : ವೇಷ ಹಾಕುವುದು, ಆಹಾರ ಸರಬರಾಜು, ಔಷಧ ಕೊಡುವುದು, ಶಾಸ್ತ್ರ-ಶಕುನ ಹೇಳುವುದು. ಕಲಾ ಸೇವೆ ಮಾಡುವುದು. ಮಾಟ ಮಂತ್ರ ಮಾಡುವುದು. ಕಸೂತಿ ಹಾಕುವುದು, ಹಾಡುವುದು, ವಾದ್ಯ ನುಡಿಸುವುದು ಇತ್ಯಾದಿ.

ಹಕ್ಕಿಪಿಕ್ಕಿಯರು ಹೆಸರೇ ಸೂಚಿಸುವಂತೆ ಹಕ್ಕಿಯನ್ನು ಹೊಡೆದು ತಿಂದು ಬದುಕುವ ಜನ. ಅವರು ಮೂಲತಃ ಬೇಟೆಯನ್ನು ಅವಲಂಬಿಸಿದ್ದಾರೆ. ಬೇಟೆ ಸಿಗದಿದ್ದಾಗ ಲೂಟಿ ಮಾಡುವುದರಲ್ಲಿ ತೊಡಗುತ್ತಿದ್ದರು. ಸುಳ್ಳು ಹೇಳಿ ಗಿಡ ಮೂಲಿಕೆ ಔಷಧಿಗಳನ್ನು ಮಾರುತ್ತಿದ್ದರು. ಹೀಗಾಗಿ ಬ್ರಿಟಿಷ್ ಸರ್ಕಾರ ಇವರನ್ನು

ಗುನೇಗಾರ ಪಟ್ಟಿಯಲ್ಲಿ ಸೇರಿಸಿತು. ಸೆಂಟ್ರಲ್ ಮಂಟಗಳಲ್ಲಿ ಕೂಡಿ ಹಾಕಿ ಬಟ್ಟೆಯ ಮಿಲ್‌ಗಳಲ್ಲಿ ಕೆಲಸಕ್ಕೆ ತೊಡಗಿಸಿತ್ತು. ಹೀಗಾಗಿ ಹಕ್ಕಿಪಿಕ್ಕಿಯವರು ತಮ್ಮ ಮೂಲ ವೃತ್ತಿಯಿಂದ ಕೈ ತೊಳೆದುಕೊಂಡು ಬೇರೆ ವೃತ್ತಿಯನ್ನೆ ಅವಲಂಬಿಸಬೇಕಾಯಿತು. ಇದು ಹಕ್ಕಿಪಿಕ್ಕಿಯರು ಗಿಡಮೂಲಿಕೆಗಳನ್ನು ಉಪಯೋಗಿಸಿ ಔಷಧ ತಯಾರಿಸಿ ಮಾರಾಟ ಮಾಡುತ್ತಾ ಇದ್ದಾರೆ. ಇನ್ನು ಕೆಲವರು ಕೂಲಿ ವ್ಯವಸಾಯಗಳಿಗೆ ಅಂಟಿಕೊಂಡಿದ್ದಾರೆ.

ಬದಲಾಗುತ್ತಿರುವ ಇಂದಿನ ಸಮಾಜದಲ್ಲಿ ನಾನಾ ಕಾರಣಗಳಿಂದ ಬೇಟೆಯಾಡುವುದು ಕಣ್ಮಾರೆಯಾಗುತ್ತಿದೆ. ಇಂದಿನ ಬೇಟೆಗಾರರಿಗೆ ಇರುವ ಪ್ರತಿಕೂಲ ಸನ್ನಿವೇಶಗಳು ಹಲವಾರು. ಹಿಂದೆ ಬೇಟೆಗೆ ಮುಕ್ತವಾಗಿದ್ದ ಪರಿಸರ ಈಗ ಅಂತರಾಷ್ಟ್ರೀಯ ವ್ಯವಹಾರಗಳ ನಡುವೆ ಸಿಲುಕಿ ಸಂಕುಚಿತಗೊಳ್ಳುತ್ತಿವೆ. ಹೇಳಿಕೊಳ್ಳುವಂತಹ ವನ್ಯಜೀವಿಗಳು ಇಂದು ಸಿಗುವುದಿಲ್ಲ. ಒಂದು ವೇಳೆ ಬೇಟೆಯಲ್ಲಿ ಸಿಗುವ ಒಂದೆರೆಡು ಪ್ರಾಣಿಗಳನ್ನು ಬೇಟೆಯಲ್ಲಿ ಸಿಕ್ಕರೆ ಅವುಗಳನ್ನು ಸಮಪಾಲು ಮಾಡಿ ಹಂಚಿಕೊಳ್ಳುವರು ಹೀಗೆಲ್ಲ ಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಇನ್ನು ಕೆಲವು ಊರುಗಳಲ್ಲಿ ಮನೆಗೊಬ್ಬರು ಬೇಟೆಗೆ ಬರಬೇಕೆಂಬ ನಿಯಮವಿತ್ತು. ಅಗ್ರಹಾರದ ನಾಲ್ಕೈದು ಮನೆಯವರು ಉತ್ಸುಕತೆಯಿಂದ ಬೇಟೆ ವ್ಯವಸ್ಥೆ ಮಾಡಿದರು. ಆಸಕ್ತಿ ಇರುವ ಬೇಟೆಯು ಹಿಂದೆಂದೋ ತಲೆಮಾರಿನಿಂದ ಬಂದ ಹವ್ಯಾಸವೇ ಹೊರತು ವೃತ್ತಿಯಲ್ಲ. ಅವರು ಅದನ್ನೊಂದು ಹೊಣೆಯಾಗಿ ವೃತಿಯಾಗಿ ಒಪ್ಪಿಕೊಂಡಂತೆ ಕಾಣುತ್ತದೆ. ಬೇಟೆಗೆ ಏಕೆ ಹೋಗುತ್ತಿರಾ? ಎಂದರೆ ಖುಷಿ ಮನರಂಜನೆ ಎಂದು ಸಲೀಸಾಗಿ ಹೇಳುತ್ತಾರೆ. ಬೇಟೆಯ ವಿಧಿ ವಿಧಾನಗಳನ್ನು ಪರಿಶೀಲಿಸಿ ಅದೊಂದು ಕೇವಲ ಹವ್ಯಾಸವಾಗಿರದೆ ವಿಧಿಯಾಚರಣೆಯಾಗಿರುವುದು ವ್ಯಕ್ತವಾಗುತ್ತದೆ. ಪ್ರಸುತ್ತ ಸಮಾಜದಲ್ಲಿ ಬೇಟೆಯು ಹಕ್ಕಿಪಿಕ್ಕಿ ಸಮುದಾಯದ ಆರ್ಥಿಕ ಭದ್ರೆಯನ್ನು ಹಾಗೂ ಆಹಾರವನ್ನು ಕಲ್ಪಿಸುವ ಇದು ಕೇವಲ ಒಂದು ಆಚರಣೆಯಾಗಿದೆ ಎಂದು ಈ ಅಧ್ಯಯನದಿಂದ ತಿಳಿಯಬಹುದು.

ಹಕ್ಕಿಪಿಕ್ಕಿಯಂತಹ ಸಮುದಾಯವು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸುತ್ತಮುತ್ತ ಇರುವ ಇವರು ಹೆಚ್ಚು ಕಡಿಮೆ ಕೂಲಿಗಳನ್ನು ಅಥವಾ ಇನ್ನಾವುದೋ ಚಿಕ್ಕಪುಟ್ಟ ವ್ಯಾಪಾರಗಳನ್ನು ಮಾಡಿಕೊಂಡು ಕಷ್ಟದಿಂದಲೇ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಆದರೆ ಬೇರೆ ಬೇರೆ ಪ್ರದೇಶಗಳಲ್ಲಿ ಹಕ್ಕಿಪಿಕ್ಕಿಯರು ತಮ್ಮ ಹೆಸರೇ ಅನ್ವರ್ಥಕ ಎಂಬಂತೆ ಹಕ್ಕಿಯಂತೆ ಆಕಾಶದಲ್ಲಿ (ವಿಮಾನದಲ್ಲಿ) ಹಾರಾತುತ್ತಾ ತಮ್ಮ ಜೀವನ ಸಾಗಿಸುತ್ತಿರುವರು. ಇವರ ಮುಖ್ಯ ಕಸುಬು ಬೇಟೆಯಾಡುವುದು. ವಿವಿಧ ಪ್ರಾಣಿಗಳ ಚರ್ಮವನ್ನು ಹದಮಾಡಿ ಒಣಗಿಸಿ ಮಾರುವುದು ಇತ್ಯಾದಿ ದಿನ ಕಳೆದಂತೆ ಅರಣ್ಯ ಇಲಾಖೆಯು ಬೇಟೆಯನ್ನು ನಿಷೇಧಿಸಿತ್ತು. ಯಾವಾಗ ತಮ್ಮ ಮೂಲ ಕುಲಕಸುಬುಗೆ ಕುತ್ತು ಬಂದಿತು ಆಗಲೇ ಹಕ್ಕಿಪಿಕ್ಕಿಯರು ಆರಿಸಿಕೊಂಡ ಕರಕುಶಲ ವಸ್ತುಗಳ ತಯಾರಿಕೆ ಕೆಲಸ ಹೂವಿನ ಬುಟ್ಟಿ, ಪ್ಲಾಸ್ಟಿಕ್

ಹೂವಿನ ಹಾರಗಳನ್ನು ತಯಾರಿಸುವುದು, ಹಾಗೂ ರುದ್ರಾಕ್ಷಿ ಮಾಲೆಗಳನ್ನು ಮಾರುವುದು, ಬಹಳ ದಿನಗಳ ಹಿಂದೆ ಇವರು ಹುಲಿಗಳ ಉಗುರುಗಳನ್ನು, ಹುಲಿ, ಚಿರತೆ ಹಾಗೂ ಜಿಂಕೆಗಳ ಚರ್ಮ ಮಾರುತ್ತಿದ್ದರು. ಹಸುವಿನ ಚರ್ಮಕ್ಕೆ ಬಣ್ಣ ಹಾಕಿ ಹುಲಿಯ ಚರ್ಮದಂತೆ ರೂಪಿಸಿ ಮಾರುತ್ತಿದ್ದಾರೆ. ಈ ರೀತಿಯಾಗಿ ಇವರು ತಯಾರಿಸಿದೆಲ್ಲ ನಕಲಿ. ಅವರು ತಮ್ಮ ಕೈಯಿಂದ ಮಾಡುವ ಕರಕುಶಲ ವಸ್ತುಗಳು ಎಂದು ಸರ್ಕಾರ ಮಾನ್ಯತೆ ನೀಡಿದೆ. ದೂರದ ದೇಶಗಳಲ್ಲಿ ಇವರ ಈ ವಸ್ತುಗಳ ಬೇಡಿಕೆ ಹೆಚ್ಚುತ್ತ ಭಾರತದಲ್ಲಿ ಕೆಲವು ಏಜೆಂಟರು ಮೊದಲು ವಿದೇಶಿಗಳಿಗೆ ನಂತರ ದೇಶಿಗಳಿಗೆ ಇಂತಹ ನಕಲಿ ಕರಕುಶಲ ಸಾಮಾನುಗಳನ್ನು ಮಾರುವುದನ್ನು ಕಾಣಬಹುದು. ಮೈಸೂರು ಜಿಲ್ಲೆಯಲ್ಲಿ ಸುಮಾರು ೨೦೦ ಕುಟುಂಬಗಳಲ್ಲಿ ಸುಮಾರು ೧೦೦ ಕ್ಕೂ ಹೆಚ್ಚಿನ ಜನರಲ್ಲಿ ವಿದೇಶಕ್ಕೆ ಹೋಗಲು ಪಾಸ್ ಪೋರ್ಟ್ ಇದ್ದು ಇವರಲ್ಲಿ ಬಹುತೇಕರು ವಿವಿಧ ದೇಶಗಳಿಗೆ ಹತ್ತಾರು ಭಾರಿ ಭೇಟಿ ಕೊಟ್ಟು ಈ ಎಲ್ಲಾ ದೇಶ ವಿದೇಶಗಳಲ್ಲಿ ತಾವು ತಯಾರಿಸಿದ ಕರಕುಶಲ ವಸ್ತುಗಳನ್ನು ಮಾರಿ ಹಣ ಸಂಪದಿಸಿಕೊಂಡಿದ್ದಾರೆ. ಜಿಲ್ಲೆಯ ಸುಮಾರು ೩೦ ಜನ ಮಹಿಳೆ ಮತ್ತು ಪುರುಷರು ಅಂತರಾಷ್ಟ್ರೀಯ ಸೌದಿ, ಕುವೋತ್, ದುಬೈಗಳಿಗೆ, ಮಲೇಶಿಯಾ, ಬರ್ಮಾ ಇಂಡೋನೇಷಿಯ ಹೀಗೆ ಇನ್ನು ಅನೇಕ ರಾಷ್ಟಗಳಿಗೆ ಭೇಟಿ ಕೊಟ್ಟಿದ್ದಾರೆ.

"ಎಚ್.ವಿ.ನಂಜುಡಯ್ಯನಾವರು ೧೯೦೩ರಿಂದಲೇ ಇಲ್ಲಿ ೩೩ ಸಮುದಾಯಗಳ ಕಿರು ಪುಸ್ತಕಗಳನ್ನು (Monogrwphs) ಮೊದಲ ಹಂತದಲ್ಲಿ ಪ್ರಕಟಿಸಿದರು. ಅನಂತಕೃಷ್ಣ ಅಯ್ಯರ್ ತಮ್ಮ The Mysore Tribes caste. ನಂಜುಂಡಯ್ಯನವರು ಹಾಗೂ ಅನಂತಕೃಷ್ಣ ಅಯ್ಯರ್ ಸಮುದಾಯಗಳ ಮಾಹಿತಿಯನ್ನು ಕಲೆ ಹಾಕಿ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿದರು. ೧೯೪೯ರಲ್ಲಿ ಭಾರ್ಗವ ಅವರು The crininal Tribes of India ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಪಿ.ಕೆ. ಮಿಶ್ರರವರು Nomads of Mysore city 1971ರಲ್ಲಿ ಹಾಗೂ ೧೯೮೩ ಉಪಸಂಸ್ಕೃತಿ ಮಾಲೆ ಕರ್ನಾಟಕದಲ್ಲಿ ಹಲವು ಅಲೆಮಾರಿ ಸಮುದಾಯಗಳು ಬದುಕುತ್ತಿವೆ."[೨] ಇಂತಹ ಸಮುದಾಯಗಳು ಭಾರತದ ವಿಷಮ ಆರ್ಥಿಕ ವ್ಯವಸ್ಥೆಯಲ್ಲಿ ಆಸ್ತಿಯ ಹಕ್ಕು ಇಲ್ಲ. ಹೀಗೆ ಶ್ರಮವನ್ನು ಆಳುವ ವರ್ಗದ ಸೇವೆಗಳಿಗೆ ಮೀಸಲಾಗಿಡುವರಲ್ಲಿ ಇರುವರು. ಒಂದು ಕೆಳಜಾತಿಗಳು ಕುಶಲಕರ್ಮಿಗಳು ಅಂದಿನಿಂದ ಸಮಾಜದ ವ್ಯವಸಾಯ ಚಟುವಟಿಕೆಗಳನ್ನು ತಮ್ಮ ಕೌಶಲ್ಯಗಳಿಂದ ನಿಯುಂತ್ರಿಸಿದ ಕಾರಣಕ್ಕೆ ತಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಉನ್ನತಿಕರಿಸಿಕೊಂಡರು.

ಭಾರತದಲ್ಲಿ ಅಲೆಮಾರಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಪಿ.ಕೆ.ಮಿಶ್ರರವರು, ಅಲೆಮಾರಿಗಳನ್ನು ಪಾರಂಪರಿಕ ಭಾರತದ ಪ್ರತಿನಿಧಿಗಳೆಂದು ಕರೆಯುತ್ತಾರೆ. ಒಟ್ಟಿನಲ್ಲಿ ಇಲ್ಲಿನ ಸಮುದಾಯಗಲೂ ಬದಲಾದ ವಲಯಗಳನ್ನು ಉಳಿಸಿಕೊಳ್ಳುವ ಇಲ್ಲವೆ ಬಿಟ್ಟು ಕೊಡುವ ಸಂದಿಗ್ದಗಳಿಗೆ ಮುಖಾ ಮುಖಿಯಾಗುತ್ತಲೇ ಬಂದಿದೆ. ಆಧುನಿಕತೆ ತನ್ನೆಲ್ಲ ತಂತ್ರಜ್ಞಾನದಿಂದ ಭಾರತದ ಸಾಂಪ್ರದಾಯ

ಮತ್ತು ಅಸಮಾನ ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸುತ್ತದೆ. ಉತ್ಪಾದನಾ ಸಾಧನಗಳ ಕ್ರಾಂತಿಕಾರಿ ಬದಲಾವಣೆಗಳಿಂದ ಭಾರತದಾದ್ಯಂತ ಪಾರಂಪರಿಕ ಉತ್ಪಾದನಾ ವ್ಯವಸ್ಥೆಯಲ್ಲಿ ಅಗಾಧ ರೂಪಾಂತರಗಳು ಸಂಭವಿಸುತ್ತವೆ. ಈ ರೀತಿಯಾಗಿ ಹಕ್ಕಿಪಿಕ್ಕಿ ಸಮುದಾಯವು ತನ್ನ ಒಂದು ಅಲೆಮಾರಿತನದಿಂದ ಒಂದು ಅನ್ಯನತೆಯನ್ನು ಹೆಚ್ಚಿಸಿಕೊಳ್ಳಲು ಕೆಲವು ಸಮುದಾಯಗಳು ಇಂದು ವಲಸೆ ಬಂದಿವೆ.

೧. ಬಹುತೇಕ ಹೊರ ರಾಜ್ಯಗಳಿಂದ ವಲಸೆ ಬಂದವರು ಹಾಗೂ ಅದನ್ನು ಹೋಗಲಾಡಿಸಿಕೊಳ್ಳದವರು.

೨. ಊರ ಹೊರಗೆ ವಸತಿ ಹೂಡುವವರು

೩. ಒಂದು ರಾಜ್ಯದ ಭಾಷೆ, ಸಂಸ್ಕೃತಿ ಮತ್ತು ಆಡಳಿತವನ್ನು ಅವಲಂಬಿಸಿದವರು.

ಹೀಗೆ ಹಲವು ಬಗೆಗಳಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಬದಲಾವಣೆಯು ಅವರ ಒಂದು ಆರ್ಥಿಕ ಜೀವನದ ಮೇಲೆ ಪ್ರಭಾವ ಬೀರಿದೆ. ಇಂದಿನ ಸಮಾಜದಲ್ಲಿ ಆರ್ಥಿಕತೆಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಲಾಗುತ್ತದೆ. ಹಕ್ಕಿಪಿಕ್ಕಿಯರು ಆರ್ಥಿಕ ಬದಲಾವಣೆಗಳಿಗೆ ಒಳಗಾಗಿದ್ದಾರೆ. ಕಳೆದ ೨೦-೩೦ ವರ್ಷಗಳ ಹಿಂದೆ ಆರ್ಥಿಕ ಸ್ಥಿತಿ ತುಂಬಾ ಹಿಂದುಳಿದಿತ್ತು. ಊರು ಬೆಳೆದಂತೆ ಇದರೊಂದಿಗೆ ಇತರೆ ಸಮುದಾಯದ ಜನರು ಬಂದು ವಾಸಿಸತೊಡಗಿದರು. ಇಂತಹ ಜನರ ಪ್ರಭಾವದಿಂದ ಹಾಗೂ ಸಾರಿಗೆ ಸಂಪರ್ಕ ವ್ಯವಸ್ಥೆಯ ಸುಧಾರಣಾ ಕ್ರಮದಿಂದಲೂ ಇವರಿಗೆ ಸಮಾಜದ ಮುಖ್ಯವಾಹಿನಿಯ ಸಂಪರ್ಕ ದೊರೆಯಿತು. ಇಂದಿನ ದಿನಗಳಲ್ಲಿ ಹಣ, ಆಸ್ತಿಗಳಿಗೆ ನೀಡುವ ಪ್ರಾಮುಖ್ಯತೆ ಬೇರೆ ಯಾವುದಕ್ಕೂ ನೀಡುವುದಿಲ್ಲ. ಕೆಲವರು ಆರ್ಥಿಕ ಬದಲಾವಣೆ ಹೊಂದಿ ಸ್ಥಿತಿವಂತರಾಗಿದ್ದಾರೆ. ಹಾಗೆಯೇ ಹೆಚ್ಚಾಗಿ ಕೂಲಿಕಾರ್ಮಿಕರು ಕೂಲಿಯನ್ನೇ ಅವಲಂಬಿಸಿ ಜೀವನ ಸಾಗಿಸುವುದನ್ನು ಕಾಣಬಹುದಾಗಿದೆ. ಇವರು ಅನುಸರಿಸುವ ವೃತ್ತಿಗಳಲ್ಲಿ ಕೂಡ ಸಾಕಷ್ಟು ವ್ಯತ್ಯಾಸ ಹಾಗೂ ಬದಲಾವಣೆ ಆಗಿರುವುದು ಕಂಡುಬರುತ್ತದೆ. ಕೃಷಿ ಭೂಮಿಯನ್ನು ಇಲ್ಲಿ ಯಾರು ಹೊಂದಿದ್ದವರಿಲ್ಲ. ಭೂರಹಿತ ಕೂಲಿಯನ್ನು ಜೀತವನ್ನು ಮಾಡುವವರು ಗ್ರಾಮಗಳಲ್ಲಿ ಸಣ್ಣಪುಟ್ಟ ದಿನಸಿ, ಸಾರಾಯಿ, ಹೋಟೆಲುಗಳಲ್ಲಿ ಕ್ಯಾಂಟೀನುಗಳಲ್ಲಿ ಕೆಲಸ ಮಾಡುತ್ತ ಇರುವರು. ಗ್ರಾಮಗಳಲ್ಲಿ ಆರ್ಥಿಕ ಸ್ವಾವಲಂಬಿಗಳೆಂದರೆ ಉದ್ಯೋಗದಲ್ಲಿರುವವರು ಮಧ್ಯಮ ವರ್ಗದಲ್ಲಿ ವ್ಯಾಪಾರ ಮಾಡುವ ತಾತ್ಕಾಲಿಕ ವೃತ್ತಿಯನ್ನು ಮಾಡುವವರು. ಮಧ್ಯ ಭೂಹಿಡುವಳಿದಾರರು ಕೆಳ ಹಂತದಲ್ಲಿ ಭೂರರಹಿತ ಕೂಲಿ ಜೀತದಾಳುಗಳು ಇದ್ದಾರೆ. ಮೇಲ್ವರ್ಗದವರ ಸಾಮಾಜಿಕ ಸ್ಥಾನಮಾನವನ್ನು ಹೊಂದಿರುವ ಅವರನ್ನು ಆರ್ಥಿಕ ಚಟುವಟಿಕೆಯ ಆಧಾರದ ಮೇಲೆ ವಿಭಜಿಸಬಹುದು. ಆಸ್ತಿಯನ್ನು ಹೊಂದಿರುವವರು ಆರ್ಥಿಕವಾಗಿ ಸಬಲರಾಗಿರುವರು. ಇಲ್ಲದವರು ಕೆಳ ಸ್ಥಾನವನ್ನು ಹೊಂದಿರುವರು. ಆದರೆ ಹಕ್ಕಿಪಿಕ್ಕಿಯರು ಸ್ವಂತ ಆಸ್ತಿ ಎಂದರೆ ಮನೆಗಳು ಮಾತ್ರ ಎಂದು ಹೇಳಬಹುದು. ಅವರು ಇನ್ನೂ ಬಹಳ ವೇಗಗತಿಯಿಂದ ಸಮಾಜದಲ್ಲಿ ಹಾಗೂ ಆರ್ಥಿಕತೆಯಲ್ಲಿ ಬೆಳವಣಿಗೆಯನ್ನು ಹೊಂದಬೇಕು.

೩.೩. ಸಾಂಸ್ಕೃತಿಕ ಬದುಕಿನಲ್ಲಾಗಿರುವ ಬದಲಾವಣೆಗಳು

ಎಲ್ಲಾ ಬುಡಕಟ್ಟುಗಳ ಸಂಸ್ಕೃತಿಯು ಒಂದೇ ರೀತಿಯಾಗಿಲ್ಲ. ಬುಡಕಟ್ಟು ಮತ್ತು ಜನಾಂಗದ ವ್ಯತ್ಯಾಸವನ್ನು ಈಗಾಗಲೇ ಅನೇಕ ವಿದ್ವಾಂಸರು ಗುರುತಿಸಿದ್ದಾರೆ. "ಜಗತಿನಾದ್ಯಂತ ಪಟ್ಟಣಗಳಲ್ಲಿ ಹಳ್ಳಿಗಳಲ್ಲಿ ಜನರುಗಳು ವಾಸ ಮಾಡುತ್ತಾರೆ. ಇವರ ಸಂಸ್ಕೃತಿಯನ್ನು ಕ್ರಮವಾಗಿ ನಗರ ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ ಎಂದು ಕರೆಯಬಹುದು. ಇವೆರಡನ್ನು ಬಿಟ್ಟರೆ ಇನ್ನೊಂದು ಸಾಂಸ್ಕೃತಿಕ ವರ್ಗದ ಸಂಸ್ಕೃತಿಯನ್ನು ಗುರುತಿಸಬಹುದು. ಇದೇ ಬುಡಕಟ್ಟು ಸಂಸ್ಕೃತಿ. ಇದನ್ನು ಈಚೆಗೆ ಉಪಸಂಸ್ಕೃತಿ ಎಂದು ಗುರುತಿಸಲಾಗುತ್ತದೆ. ಇಂಥ ಬುಡಕಟ್ಟುಗಳ ಸಂಸ್ಕೃತಿಗಳ ನಡುವೆಯೂ ಅನೇಕ ವ್ಯತ್ಯಾಸಗಳು ಗೋಚರಿಸುತ್ತವೆ. ಪ್ರತಿಯೊಂದು ಬುಡಕಟ್ಟು ತನ್ನ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳಲು ತಮ್ಮದೇಯಾದ ಭಾಷೆಯನ್ನು ರೂಢಿಸಿಕೊಳ್ಳಲು ಸಾಧ್ಯವಾಗಿರುವುದು.

ಮೂಲ ಸಂಸ್ಕೃತಿಯ ಸಂದರ್ಭದಲ್ಲಿ ಅವು ದೂರ ಉಳಿದು ಭಿನ್ನ ಸಂಸ್ಕೃತಿಯನ್ನು ರೂಢಿಸಿಕೊಂಡಿದ್ದ ಕೆಳಜಾತಿಗಳು ಸಾಮಾಜಿಕ ಅವಮಾನಕ್ಕೆ ಕಾರಣವಾಗುವ ಪಾರಂಪರಿಕ ವೃತ್ತಿಗಳನ್ನು ಬಿಟ್ಟುಕೊಡಲು ಸಿದ್ಧರಿರುವಾಗ ಮೇಲದರ್ಜೆಯಲ್ಲಿರುವ ವಿದ್ವಾಂಸರು, ಚಿಂತಕರು, ಪರಂಪರೆಯ ಸಂಸ್ಕೃತಿ ಎಂಬುವುದು ವೈವಿದ್ಧತೆಗಳಲ್ಲಿಯೇ ಉಳಿಯಬೇಕೆಂದು ಹೇಳುವರು. ಆದರೆ ಸಮುದಾಯಗಳು ತಾವು ಅನುಸರಿಸುವ ಸಂಸ್ಕೃತಿ ಮತ್ತು ವೃತ್ತಿಗಳ ಒಂದು ಕಾರಣಕ್ಕಾಗಿಯೇ ಇವರನ್ನು ಸಮಾಜದಲ್ಲಿ ಹೀನಾಯವಾಗಿ ಕಾಣುವರು. "ಆಧುನಿಕತೆಯಿಂದ ಇಂಡಿಯಾದ ವೈವಿಧ್ಯತೆಯು ನಾಶವಾಗಬಹುದು ಎಂದು ಹೇಳುವ ಪಂಡಿತ ಜವಹರಲಾಲ ನೆಹರುರವರು ಆದಿವಾಸಿಗಳು. ಸಮುದಾಯಗಳು ತಮ್ಮ ಹಾಡು, ನೃತ್ಯ, ಸಂಸ್ಕೃತಿಗಳನ್ನು ಉಳಿಸಬೇಕು. ನಗರಗಳಲ್ಲಿ ಆಧುನಿಕತೆಯಿಂದ ವಿಕಾರಗೊಂಡಿರುವ ಸಮುದಾಯಗಳಂತೆ ಆದಿವಾಸಿಗಳು ರೂಪಾಂತರಗೊಳ್ಳಬಾರದು. ಪಾರಂಪರಿಕ ಉತ್ಪಾದನಾ ವ್ಯವಸ್ಥೆ ಮತ್ತು ಸಾಮುದಾಯಿಕ ಬದುಕನ್ನು ಹಾಗೆಯೇ ಉಳಿಸಿಕೊಂಡು ಹೋಗಬೇಕು ಎಂದು ಹೇಳುವರು. 'ಭಾರತದ ಬಹುತ್ವ ಅಂದು ಮತ್ತು ಇಂದು ಜೀವಂತವಿರುವುದು ಈ ದೇಶದ ಶ್ರಮ ಜೀವಿಗಳಿಂದಾಗಿ'. ಅವರೇ ಈ ದೇಶದ ನಿಜ ಸಂಸ್ಕೃತಿಯ ವಾರಸುದಾರರು. ಆಳುವ ವರ್ಗದ ಎಲ್ಲ ಬಗೆಯ ಹಿಂಸೆ ಮತ್ತು ಕ್ರೌರ್ಯಗಳನ್ನು ಅನುಭವಿಸಿಯೂ ಈ ನೆಲದ ಅನನ್ಯತೆಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಈ ಕಾರಣಕ್ಕಾಗಿ ಸಾಮಾಜಿಕ ಮತ್ತು ರಾಜಕೀಯಾರ್ಥಿಕ ಸ್ವಾತಂತ್ರಗಳನ್ನು ಶತಮಾನಗಳಿಂದ ಕಳೆದುಕೊಳ್ಳುತ್ತಲೇ ಬಂದಿದ್ದಾರೆ. ಅಂದಿನ ರಾಷ್ಟ್ರೀಯತೆಯ ಕಲ್ಪನೆಯೇ ಇಂದು ಸಾಂಸ್ಕೃತಿಕ ರಾಷ್ಟ್ರೀಯತೆ ಎಂಬ ಭೂತವಾಗಿ ಭಾರತದ ಕೋಮು ಸಾಮರಸ್ಯವನ್ನು ಕದಡುತ್ತಿದೆ.

ಹಕ್ಕಿಪಿಕ್ಕಿ ಸಮುದಾಯದವರು ಈ ಎಲ್ಲ ಅಂಶಗಳಲ್ಲಿ ಶ್ರೀಮಂತವಾಗಿದ್ದಾರೆ ಎಂದು ಹೇಳಬಹುದು. ಹಕ್ಕಿಪಿಕ್ಕಿಯರು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಸಮುದಾಯಗಳಿಗಿಂತ ಕೀಳಾದುದೇನು

ಅಲ್ಲ. ಇವರಲ್ಲಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಸಮಾಜ ಬಂಧನಕ್ಕೆ ಪುಷ್ಟಿ ಕೊಡುವ ಆತ್ಮಸ್ಥೈರ್ಯ ಕಾಣುತ್ತವೆ. ಹಿರಿಯರಲ್ಲಿ ವಿನಯ, ದೇವರಲ್ಲಿ ಭಕ್ತಿ ದುಡಿದು ತಿನ್ನುವ ಬುದ್ಧಿ ಪರಿಸರ ಮೇಲಿನ ಪ್ರೀತಿ, ಒಟ್ಟಾಗಿ ಬದುಕುವ ಲಕ್ಷಣ ಹಾಗೂ ಅದರಲ್ಲಿರುವ ಆಚಾರ ವಿಚಾರ, ಪಾರಂಪರಿಕ ಸಾಂಸ್ಕೃತಿಕ ಚಟುವಟಿಕೆಗಳು ಎಲ್ಲವನ್ನು ಇವರಲ್ಲಿ ಗುರುತಿಸಬಹುದು.

"ಆಧುನಿಕತೆಯಿಂದ ಸಮುದಾಯವೊಂದರ ಸಾಂಸ್ಕೃತಿಕ ಚಟುವಟಿಕೆಯ ಬದಲಾವಣೆಗಳು ಕಾಲದಿಂದ ಕಾಲಕ್ಕೆ ಸಂಭವಿಸುತ್ತವೆ. ಆಧುನಿಕತೆ ಎಂಬುದನ್ನು ಒಂದು ಚೌಕಟ್ಟಿನಲ್ಲಿರಿಸಿ ಇದೇ ಆಧುನಿಕತೆ ಎಂದು ಖಚಿತ ವ್ಯಾಖ್ಯೆಯನ್ನು ನೀಡಲು ಆಗದು. ಒಂದು ಸಮುದಾಯಕ್ಕೆ ಆಧುನಿಕ ಎಂದು ಅನಿಸಿದರೆ ಮತ್ತೊಂದು ಸಮುದಾಯಕ್ಕೆ ಅನಿಸದೆ ಇರಬಹುದು. ಕೈಗಾರೀಕರಣದಿಂದ ಸಂಸ್ಕೃತಿಯಲ್ಲಿ ಬದಲಾವಣೆಗಳನ್ನು ಕಂಡುಕೊಳ್ಳಬಹುದು. ನಾಗರೀಕತೆಯ ಉಗಮದಿಂದ ಸಮುದಾಯ ನಗರವಾಗಿ ರೂಪುಗೊಳ್ಳುತ್ತ ನಗರೀಕರಣ ಪ್ರಕ್ರಿಯೆಗೆ ಒಳಗಾಗಿರುವುದನ್ನು ಕಾಣುತ್ತೇವೆ. ಜನರು ಹೊಸ ಮೌಲ್ಯಗಳನ್ನು ನೂತನ ರೀತಿಗಳನ್ನು ವಿಚಾರಿಸುವಂತಿಕೆಯ ಕಡೆ ಒಲವು ಹೊಂದುವುದನ್ನು ಆಧುನಿಕರಣ ಎನ್ನುವುದು.''[೧೩] "ಒಂದು ಸ್ಥಿತಿಗತಿ ನಿಲುವನ್ನು ಬೋಧಿಸಲು ಆಧುನಿಕತೆಯೆಂಬ ಪದವನ್ನು ಬಳಸುತ್ತೇವೆ.''[೧೪]

ಹಕ್ಕಿಪಿಕ್ಕಿ ಸಮುದಾಯವು ಆಧುನಿಕತೆಯು ಬಹು ಮುಖ್ಯ ಪಾತ್ರವಹಿಸಿದೆ. ಆದರೆ ಆಧುನಿಕತೆಯು ಇಡೀ ಸಮಾಜದ ರಚನೆಯನ್ನು ಹಿಡಿಯಾಗಿ ಬದಲಾಯಿಸಿದೆ ಎಂದರೆ ತಪ್ಪಾಗುತ್ತದೆ. ಗ್ರಾಮದಲ್ಲಿ ಇಂದಿಗೂ ಮೌಲ್ಯಗಳು, ಉಡುಗೆ ತೊಡಗೆ, ಸಂಪ್ರದಾಯ, ಸಾಂಸ್ಕೃತಿಕ ಅನ್ಯೂನ್ಯತೆ ಪ್ರತೇಕವಾದ ವಾಸಸ್ಥಾನ ಹಬ್ಬ ಆಚರಣೆ ಮುಂತಾದವು ಇವೆ. ಅವುಗಳ ಸ್ವರೂಪಗಳಲ್ಲಿ ಕೆಲವೊಂದು ಬದಲಾವಣೆಗಳು ಉಂಟಾಗಿವೆ. ಆದರೆ ಸಂಪೂರ್ಣವಾಗಿ ಬದಲಾಗಿದೆ. ಇಂದಿಗೂ ಇವುಗಳನ್ನು ಕಾಪಾಡಿಕೊಂಡು ಹಕ್ಕಿಪಿಕ್ಕಿಯರು ಬಂದಿದ್ದಾರೆ.

ಸಾಂಸ್ಕೃತಿಕ ಬದುಕಿನಲ್ಲಾಗಿರುವ ಬದಲಾವಣೆಗಳು ಭಾರತ ವಿವಿಧ ಸಮಾಜಗಳಲ್ಲಾಗಿರುವ ರೂಪಾಂತರಗಳನ್ನು ಅಧ್ಯಯನ ಮಾಡಲು ದೇಶೀಯ ಮತ್ತು ವಿವೇಚನ ಸಮಾಜ, ವಿಜ್ಞಾನಿಗಳು ಅನೇಕ ಪ್ರಸ್ತಾಪನೆಗಳನ್ನು ಹಟ್ಟು ಹಾಕಿದ್ದಾರೆ. ಎಂ.ಎನ್.ಶ್ರೀನಿವಾಸ ಜೆ.ಎಫ್.ಸ್ಟೆಲ್, ಲೂಯಿಂಡೊವೊಗಳ, ಎಚ್.ವಿ.ಗೋಲ್ಪರವರ ಭಾರತದ ಸಮಾಜಗಳು ಇವರೆಲ್ಲರು ಚಲನೆಗಳನ್ನು ವಿವಿಧ ಕಾಲಘಟ್ಟದಲ್ಲಿ ಅಧ್ಯಯನಕೊಳ್ಳಪಡಿಸಿದ್ದಾರೆ.

ಯಾವುದೇ ಜಾತಿಯು ಉನ್ನತ ಸ್ಥಾನಮಾನವನ್ನು ಬಯಸುವುದಾದರೆ ಉನ್ನತ ಜಾತಿಗಳ ಸಂಪ್ರದಾಯ ಆಚಾರ-ವಿಚಾರ ರೀತಿ-ನೀತಿ ಜೀವನ ಕ್ರಮಗಳನ್ನು ತಮ್ಮದನ್ನಾಗಿಸಿಕೊಳ್ಳುವುದರಲ್ಲಿ ಇರುವುದು ಕೆಳಜಾತಿಗಳೂ ಹೆಚ್ಚಾಗಿ ಉನ್ನತ ಜಾತಿ ಎನ್ನಿಸಿರುವ ಬ್ರಾಹ್ಮಣ ಸಮುದಾಯಗಳ ಒಂದು ಜೀವನ ಕ್ರಮವನ್ನು ಅನುಸರಿಸಲು ಪ್ರಯತ್ನಿಸುವವು.

"ಎಂ.ಎನ್.ಶ್ರೀನಿವಾಸ ಬದಲಾವಣೆಯನ್ನು ಸಮುದಾಯಗಳ ಸಾಂಸ್ಕೃತಿಕ ಬದುಕಲ್ಲಿ ಮಾತ್ರ ಗುರುತಿಸುತ್ತಾರೆ. ಅವರ ಪ್ರಕಾರ ಸಾಂಸ್ಕೃತೀಕರಣವೆಂದರೆ ಕೇವಲ ಸಂಸ್ಕೃತಿ ಸಾಹಿತ್ಯದಲ್ಲಿರುವ ಬದುಕಿನ ವಿಧಾನಗಳನ್ನು ವಿಧಿ ಆಚರಣೆಗಳನ್ನು ಹೊಂದುವುದು ಮಾತ್ರವಲ್ಲ., ಆ ಅಭಿಜಾತ ಸಾಹಿತ್ಯದಲ್ಲಿರುವ ಪವಿತ್ರ ಚಿಂತನೆ ಮತ್ತ ಮೌಲ್ಯಗಳಿಗೆ ನಮ್ಮನ್ನು ತೆರೆದುಕೊಳ್ಳುವುದು ಎಂದು ವಿವರಿಸುತ್ತಾರೆ."[೧೭] ಆದರೆ ಅವರ ಚರ್ಚೆಯಲ್ಲಿ ಸಂಸ್ಕೃತಿಯನ್ನು ರೂಪಿಸುವ ಮತ್ತು ಬದಲಾಯಿಸುವ ಮೂಲಭೂತ ಅಂಶಗಳ ಕುರಿತು ಮೌಲ್ಯಗಳೇ ಇಲ್ಲ. ಅಲೇನ್ ಟಾರೇನ್ ಎನ್ನುವ ಫ್ರೆಂಚ್ ಸಮಾಜ ಶಾಸ್ತ್ರಜ್ಞರಾದ ಇವರು ಸಾಮಾಜಿಕ ಬದಲಾವಣೆಯ ಕುರಿತು ಹೀಗೆ ಹೇಳುತ್ತಾರೆ.

ಸಾಮಾಜಿಕ ಬದಲಾವಣೆ ಅಥವಾ ಚಲನೆಗಳನ್ನು ಆರ್ಥಿಕ ಅಂಶಗಳು ನೇರವಾಗಿ ಪ್ರಚೋಧಿಸುತ್ತವೆ. ಆರ್ಥಿಕ ಚಟುವಟಿಕೆಗಳಲ್ಲಾದ ಬದಲಾವಣೆಗಳು ಸಾಮಾಜಿಕ ಸ್ಥಿತಿಗತಿಗಳನ್ನು ನಿಯಂತ್ರಿಸುತ್ತವೆ. ಸಮಾಜದ ಒಬ್ಬ ಜೀವಿಯಾಗಿ ಮಾನವ ಪರಂಪರಾಗತವಾಗಿ ರೂಢಿಸಿಕೊಂಡು ಬಂದಿರುವ ವರ್ಗಾಯಿಸುವ ಹಂಚಿಕೊಳ್ಳುವ ಮತ್ತ ಗೌರವಿಸುವ ಕ್ರಿಯೆಗಳ ಅಲೋಚನೆಗಳ ಮೌಲ್ಯಗಳ ಮತ್ತು ನಿರ್ವಹಣೆ ಮಾಡುವ ಕ್ರಿಯೆಗಳ ಆಲೋಚನೆಗಳ ಮೊತ್ತವನ್ನು ಸಂಸ್ಕೃತಿಯೆಂದು ಕರೆಯಬಹುದು.

ಸಂಸ್ಕೃತಿಯು ಮಾನವನಿಗೆ ವಿಶಿಷ್ಟವಾದದ್ದು ಪ್ರಾಣಿಗಳಿಗಿಂತ ವಿಭಿನ್ನವಾದ ರೀತಿಯಲ್ಲಿ ಮಾನವ ತನ್ನ ಅಗತ್ಯಗಳನ್ನು ಈಡೇರಿಸಿಕೊಳ್ಳುವಾಗ ಸ್ವಾರ್ಥ ಮತ್ತು ಸಮಾಜದ ಹಿತ ರಕ್ಷಣೆ ಇವೆರಡರ ನಡುವಣ ಸಂಘರ್ಷಕ್ಕೆ ಒಳಗಾಗುತ್ತಾನೆ. ಸಂಸ್ಕೃತಿಯ ಪ್ರಭಾವದಿಂದ ಸಮಾಜದ ಹಿತಕ್ಕಾಗಿ ಸ್ವಾರ್ಥವನ್ನು ಕಡಿಮೆ ಮಾಡಿಕೊಳ್ಳುವುದರಿಂದ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಭಧ್ರತೆ ರಕ್ಷಣೆ ಸುಖ ಸಂತೋಷಗಳು ಲಭ್ಯವಾಗುತ್ತದೆ. ಸಂಸ್ಕೃತಿಯ ಸಹಾಯದಿಂದ ಮಾನವನು ಪ್ರಕೃತಿಯ ಸಂಪನ್ಮೂಲಗಳನ್ನು ಮಾತ್ರವಲ್ಲದೆ, ತನ್ನಲ್ಲಿಯೇ ಇರುವ ಪ್ರಾಚಾನ್ಯ ಶಕ್ತಿಗಳನ್ನು ಬಳಸಿಕೊಂಡು ಮುಂದುವರೆಯಲು ಸಾಧ್ಯವಾಗಿದೆ.

"ಸಂಸ್ಕೃತಿಯ ಒಂದು ಪ್ರಭಾವದಿಂದ ಬುಡಕಟ್ಟುಗಳು ಪರಿವರ್ತನೆಗೆ ಒಳಗಾಗಿರುವುವು ಎಂದು ದೀರೇಂದ್ರನಾಥ ಮುಜುಂದಾರ್ ಬುಡಕಟ್ಟುಗಲನ್ನು ಮೂರು ಹಂತಗಳಲ್ಲಿ ಗುರುತಿಸಿದ್ದಾರೆ.

೧. ಜಾತಿಗಳಿಗೆ ಸಂಪೂರ್ಣ ಪರಿವರ್ತಿತವಾಗಿರುವ ಬುಡಕಟ್ಟುಗಳು.

೨. ಹಿಂದುಗಳೊಡನೆ ಭಾಗವಹಿಸಿಯೂ ತಮ್ಮ ಸಂಪ್ರದಾಯಗಳನ್ನು ನಂಬಿಕೆಗಳನ್ನು ಉಳಿಸಿಕೊಂಡಿರುವ ಬುಡಕಟ್ಟುಗಳು

೩. ಹಿಂದೂ ಧರ್ಮದ ಪ್ರಭಾವಕ್ಕೆ ಒಳಗಾಗದೆ, ಆ ಧರ್ಮದ ದಬ್ಬಾಳಿಕೆಯನ್ನು ಸಹಿಸದೆ ತಮ್ಮ ಸ್ವತಂತ್ರಕ್ಕಾಗಿ ಪ್ರತ್ಯೇಕವಾಗಿ ಹೋರಾಡುತ್ತಿರುವ ಬುಡಕಟ್ಟುಗಳು."[೧೮]

ಬುಡಕಟ್ಟುಗಳನ್ನು ಎರಡು ಉದ್ದೇಶಗಳಿಗಾಗಿ ಅಧ್ಯಯನ ಮಾಡಲಾಗುತ್ತದೆ.

೧. ಪ್ರತಿಯೊಂದು ಬುಡಕಟ್ಟಿನ ಸಂಸ್ಕೃತಿಯನ್ನು ತಿಳಿಯುವುದಕ್ಕಾಗಿಯೇ ಅಧ್ಯಯನ ಮಾಡುವುದು.

೨. ಒಟ್ಟಾರೆ ಮಾನವ ಸಂಸ್ಕೃತಿಯ ಸ್ವರೂಪವೇನು ಎಂಬುದನ್ನು ತಿಳಿಯುವ ಉದ್ದೇಶದಿಂದ ಅಧ್ಯಯನ ಮಾಡುವುದು.

"ರೇಮಂಡ್ ಪರ್ತಿ ೧೯೫೨ರಲ್ಲಿ ಒಂದೆರಡು ವರ್ಷಗಳಲ್ಲಿ ಟಿಕೋಪಿಯಾ ಸಂಸ್ಕೃತಿಯಲ್ಲಿ ಆಧುನಿಕ ನಾಗರಿಕತೆಯ ಪ್ರಭಾವದಿಂದ ಆಗಿದ್ದ ಬದಲಾವಣೆಗಳನ್ನು ಗಮನಿಸಿ ಸಂಸ್ಕೃತಿಯ ವ್ಯತ್ಯಾಸ ಯಾವ ರೀತಿ ನಡೆದಿದೆ ಎಂಬುದನ್ನು ಪರಿಶೀಲಿಸಿ "Social class, In Tikopia" ಎಂಬ ಕೃತಿಯನ್ನು ಬರೆದ್ದರು."[೧೭]

"ಭಾರತ ಬುಡಕಟ್ಟುಗಳು ತಮ್ಮ ವಿಶಿಷ್ಟವಾದ ಸಂಸ್ಕೃತಿಯ ಘಟಕಗಳಿಂದ ನಂಬಿಕೆಗಳು, ಸಂಪ್ರದಾಯ, ಸಾಹಿತ್ಯ, ಸಂಗೀತ, ನೃತ್ಯ, ಕಲೆ, ಕುಶಲಕಲೆ ಹಲವಾರು ಅಂಶಗಳಿಂದ ಭಾರತದ ಸಂಸ್ಕೃತಿಯನ್ನು ಸಂಕೀರ್ಣಗೊಳಿಸಿ ಮಾತ್ರವಲ್ಲ ಶ್ರೀಮಂತಗೊಳಿಸಿದೆ. ವೆರಿಯರ್ ಎಲ್ವಿನರವರು ಬುಡಕಟ್ಟುಗಳ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ಮಾತ್ರವಲ್ಲದೆ, ಅದನ್ನು ಪ್ರತ್ಯೇಕವಾಗಿಯೇ ಬಳಸಬೇಕು ಎಂದು ಅಭಿಪ್ರಾಯಪಡುತ್ತಾರೆ."[೧೮] ಚಂದ್ರರಾಯರವರು ಬುಡಕಟ್ಟುಗಳ ಸಂಸ್ಕೃತಿ ಹಿಂದೂ ಧರ್ಮದಲ್ಲಿ ಲೀಲವಾಗಬೇಕು ಎಂದು ಅಭಿಪ್ರಾಯ ಹೊಂದಿದ್ದಾರೆ. ಭಾರತದಲ್ಲಿ ಭೂಮಿ ಪ್ರತಿಷ್ಠಿತ ಜಾತಿಗಳ ಕಪಿ ಮುಷ್ಟಿಯಲ್ಲಿದೆ. ಭೂಮಿಯು ಇಂಡಿಯಾದಲ್ಲಿ ಮೇಲ್ಜಾತಿ ಮೇಲ್ವರ್ಗಗಳ ಒಡೆತನದಲ್ಲಿ ಕೇಂದ್ರಿಕೃತವಾಗಿರುವಂತೆಯೇ ಅಧಿಕಾರ ಗ್ರಹಣವಾಗಿರುತ್ತದೆ. ಭೂಮಿ ಈ ಹಿನ್ನಲೆಯಲ್ಲಿ ಅಸಮಾನತೆಯನ್ನು ಶ್ರೀಮಂತರನ್ನಾಗಿಸಿತು. ಜಮೀನ್ದಾರ ಪ್ರಭುಗಳ ಕೊರಿಕೆ ಅಸಂಖ್ಯಾ ಭೂರಹಿತ ಸಮುದಾಯಗಳು ಹಲವಾರು ಸಂಕಷ್ಟಗಳಲ್ಲಿ ಬಡತನದ ಬಗೆಯಲ್ಲಿ ಬದುಕಲು ಕಾರಣವಾಯಿತು.

ಡಾ.ಎ.ಎಸ್.ಪ್ರಭಾಕರ ಅವರು ಭೂಮಿಯ ಮೂಲಕ ಸಂಸ್ಕೃತಿಯು ರೂಪುಗೊಳ್ಳುವುದನ್ನು ಹೀಗೆ ಗುರುತಿಸುತ್ತಾರೆ. "ಭಾರತದ ಅದಿಮ ಸಮಾಜಗಳ ಸಂಸ್ಕೃತಿ ರೂಪಗೊಂಡಿರುವುದೇ ಭೂಮಿಯ ಜೊತೆಗಿನ ಅವುಗಳ ಅನನ್ಯ ಅನುಸಂಧಾನದಲ್ಲಿ ಭೂಮಿ ಮತ್ತು ಅದಿಮ ಜನಾಂಗಗಳ ನಿರಂತರ ಅನುಸಂಧಾನದ ಫಲವಾಗಿಯೇ ಸಂಸ್ಕೃತಿಗೆ ವಿಕಾಸ ಶೀಲ ಪ್ರವೃತ್ತಿ ಮೈಗೂಡಿಬಂದಿದೆ. ಅದಿಮ ಜನ ಸಮೂಹಗಳು, ಸಮುದಾಯಗಳಾಗಿ ಸಂಘಟಿತವಾಗಿದೆ. ಅವು ಭೂಮಿಯ ಜೊತೆ ಸಾಧ್ಯವಾಗಿಸಿಕೊಂಡ ಆಧ್ಯಾತ್ಮಿಕ ಮೋಹದಿಂದಾಗಿ ಭೂಮಿ ತಾರ್ಕಿಕದಲ್ಲಿ ಅನೇಕ ಸಾಧ್ಯತೆಗಳನ್ನು ಸಾಕಾರಗೊಳಿಸುವ ಜೀವಂತ ವೇದಿಕೆಯೆಂಬ ಪರಿಭಾವನೆ ಈ ಸಮುದಾಯಗಳ ಮೋಹವನ್ನು ಆಧ್ಯಾತ್ಮದ ಮಟ್ಟಕ್ಕೆ ವಿಸ್ತರಿಸಿದೆ. ಇಂದು ಆದಿವಾಸಿಗಳು ಮತ್ತು ಕೆಳಜಾತಿಗಳ ಬಹುತೇಕ ಆಚರಣೆಗಳು ಮತ್ತು ಅಭಿವ್ಯಕ್ತಿ ಸಾಧ್ಯತೆಗಳು ಭೂಮಿಯ ಜೊತೆಗಿನ ಅವುಗಳ ಸಂಬಂಧದ ಫಲವಾಗಿ ಹುಟ್ಟಿಕೊಂಡಿದೆ"[೧೯] ಎಂದು ಹೇಳುವರು.

ಹಕ್ಕಿಪಿಕ್ಕಿಯವರನ್ನು ಸಂದರ್ಶಿಸಿ ಹಾಗೂ ಹಲವು ಪ್ರಶ್ನೆಗಳನ್ನು ಹಾಕಿಕೊಂಡು ಆ ಪ್ರಶ್ನೆಗಳ ಮುಖಾಂತರ ಅವರನ್ನು ಪ್ರಶ್ನಿಸಿ ಸಂದರ್ಶಿಸಿ ಅವರ ಅಭಿಪ್ರಾಯ ಹಾಗೂ ಅವರ ಒಮ್ಮತಗಳನ್ನು ಸ್ವೀಕರಿಸಿ ಹಕ್ಕಿಪಿಕ್ಕಿ ಸಮುದಾಯದ ಸಂಸ್ಕೃತಿಯಲ್ಲಿ ಬದಲಾವಣೆಯನ್ನು ಗುರುತಿಸಿ ಆ ಸಮುದಾಯದ ಜನರು ಅನ್ಯ ಸಂಸ್ಕೃತಿಯ ಕಡೆಗೆ ಒಲವನ್ನು ಹೊಂದಿರುವರು ಎಂದು ಹೇಳಲಾಗಿದೆ.

ಕಲೆ ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿಯಿದೆ. ಸಂಸ್ಕೃತಿಯನ್ನು ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ ನಾಗರೀಕತೆ ಮೈಗೂಡಿಸಿಕೊಂಡು ನವೀನ ಪ್ರಪಂಚಕ್ಕೆ ಬದಲಾವಣೆ ಹೊಂದಿರುವರು. ಗ್ರಾಮಗಳಲ್ಲಿ ಪ್ರತ್ಯೇಕವಾದ ಕಾಲೋನಿ ಹಾಗೂ ಸಮುದಾಯದ ಮನೆಗಳನ್ನು ಪ್ರತ್ಯೇಕವಾಗಿ ಗಮನಿಸಬಹುದು. ಇತರ ಸಮುದಾಯದಿಂದ ದೂರವಿದ್ದರೂ, ಸಂಸ್ಕೃತಿಯ ಬದುಕಿನಲ್ಲಿ ಬದಲಾವಣೆ ಹೊಂದಿವೆ.

ಹೀಗೆ ಸಂಸ್ಕೃತಿ ವಿಕಾಸದಲ್ಲಿ ನಾವು ವಿವಿಧ ಹಂತಗಳನ್ನು ಗುರುತಿಸಿದರೂ ಹೊಸ ಜೀವನ ಕ್ರಮಕ್ಕೂ ಕಾಲಿರಿಸಿದಾಕ್ಷಣ ಹಳೆಯ ಜೀವನ ಕ್ರಮವು ಸಂಪೂರ್ಣ ಮುಗಿದು ಹೋಗುತ್ತದೆ ಎಂದು ಹೇಳುವ ಹಾಗಿಲ್ಲ. ಅದರಂತೆ ಮನುಷ್ಯ ಸ್ಥಿರ ಬದುಕಿಗೆ ಕಾಲಿರಿಸಿದ ತಕ್ಷಣ ಹಿಂದಿನ ಸ್ಥಿತಿ ಪೂರ್ತಿಯಾಗಿ ಮುಗಿದು ಹೋಯತು ಎಂದರ್ಥವಲ್ಲ. ಅದು ಹೊಸ ರೂಪದಲ್ಲಿ ಇವತ್ತಿಗೂ ಮುಂದುವರೆದುಕೊಂಡು ಬಂದಿದೆ. ಇಂದಿನ ವಾಸ್ತವವೇ ಹಕ್ಕಿಪಿಕ್ಕಿಗಳ ಬದುಕಿನಲ್ಲಿ ಹತ್ತು ಹಲವು ವೈರುಧ್ಯಗಳನ್ನು ಸೃಷ್ಟಿಸಿವೆ. ಇಂದು ವಿವಿಧ ನೆಲೆಗಳಲ್ಲಾದ ಆಧುನೀಕರಣ ಪ್ರಕ್ರಿಯೆಯಲ್ಲಿ ಹಕ್ಕಿಪಿಕ್ಕಿಗಳ ಪಾರಂಪರಿಕ ಜೀವನ ಕ್ರಮಕ್ಕೆ ಒಂದರ್ಥದಲ್ಲಿ ಮಾರಕವೆನಿಸಿದೆ. ಆಧುನೀಕರಣವನ್ನು ತಮ್ಮ ಬದುಕಿಗೆ ಪೂರಕವಾಗಿಸಿಕೊಳ್ಳುವಲ್ಲಿ ಇಂದು ಹಕ್ಕಿಪಿಕ್ಕಿಯರು ಸಾಕಷ್ಟು ಹೆಣಗಾಡಬೇಕಾಗಿದೆ.

ಕುಟುಂಬದಲ್ಲಿ ಬದಲಾವಣೆ

ಕುಟುಂಬವು ಸಮಾಜದ ಮೂಲ ಘಟಕವಾಗಿದೆ. ಇಂತಹ ಘಟಕದಲ್ಲಿ ಹಕ್ಕಿಪಿಕ್ಕಿ ಸಮುದಾಯದ ಕುಟುಂಬಗಳು ಗ್ರಾಮದಲ್ಲಿ ಅವಿಭಕ್ತ ಕುಟುಂಬ ಹಾಗೂ ವಿಭಕ್ತ ಕುಟುಂಬ ವ್ಯವಸ್ಥೆಗಳೆರಡು ಅಸ್ತಿತ್ವದಲ್ಲಿದೆ. ವಿಭಿಕ್ತ ಕುಟುಂಬಗಳ ಸಂಖ್ಯೆಯೇ ಹೆಚ್ಚಾಗಿದೆ ಇಂದು. ಇದು ಅವಿಭಕ್ತ ಕುಟುಂಬಗಳು ಕಡಿಮೆಯಾಗಲು ಹಾಗೂ ಆ ಸಮುದಾಯದಲ್ಲಿ ಅವಿಭಕ್ತ ಕುಟುಂಬಗಳು ಕಣ್ಮಾರೆಯಾಗುವುದಕ್ಕೆ ಮೂಲ ಕಾರಣವಾಗಿರುವುದು ಮದುವೆ, ಮದುವೆಯ ನಂತರ ಒಂದೆರೆಡು ವರ್ಷಗಳಲ್ಲಿ ಬೇರೆ ಮನೆಯನ್ನು ಮಾಡಿಕೊಳ್ಳುವರು. ನಗರಗಳು ಆಧುನೀಕರಣಗೊಂಡಂತೆಲ್ಲ ಸಮುದಾಯಗಳ ಮೇಲೆ ನೇರವಾಗಿ ಪ್ರಭಾವ ಬೀರುವುದರಿಂದ ಕುಟುಂಬದ ಸ್ವರೂಪ ಬದಲಾಗುತ್ತದೆ. ತಂದೆ-ತಾಯಿ, ಮಕ್ಕಳ ಸಂಬಂಧದಲ್ಲಿ ಬದಲಾವಣೆ ಕಂಡುಬರುತ್ತದೆ. ಹೀಗೆ ಮಕ್ಕಳ ಮೇಲಿನ ನಿಯಂತ್ರಣ ಹಿರಿಯರ ಬಗ್ಗೆ ಇರುವ ಗೌರವ ಕಡಿಮೆಯಾಗಿದೆ. ಇಲ್ಲಿ ಪ್ರಮುಖವಾಗಿ ಕಾಣುವುದೆಂದರೆ ಪಿತೃ ಪ್ರಧಾನ ಕುಟುಂಬ

ಪದ್ಧತಿ ಜಾರಿಯಲ್ಲಿದೆ. ಅವಿಭಕ್ತ ಕುಟುಂಬದ ಮುಖ್ಯ ತೀರ್ಮಾನಗಳನ್ನು ಮುಖ್ಯಸ್ಥನೆನಿಸುವನ್ನು ತೆಗೆದುಕೊಳ್ಳುವನು. ಆದರೆ ವಿಭಕ್ತ ಕುಟುಂಬದಲ್ಲಿ ತೀರ್ಮಾನಗಳನ್ನು ಮನೆಯ ಕರ್ತೃನೆನಿಸುವ ವ್ಯಕ್ತಿ ಮನೆಯ ಯಜಮಾನ ತೆಗೆದುಕೊಳ್ಳುವನು. ಯಜಮಾನಯೆನಿಸಿರುವ ವ್ಯಕ್ತಿಯ ಮರಣ ಹೊಂದಿದ ಮೇಲೆ ಆ ಮನೆಯ ಹೆಣ್ಣುಮಗಳು ಅಥವಾ ಮಕ್ಕಳು ಅಣ್ಣತಮ್ಮಂದಿರು ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುವರು. ಪುರುಷರು, ಬೇಟೆ, ಕೃಷಿ, ಕೂಲಿ, ಇತರ ವ್ಯಾಪಾರಗಳಲ್ಲಿ ತೊಡಗಿದ್ದಾರೆ. ಸ್ತ್ರೀಯರು ಕೂಡ ಕೂಲಿ ಕೆಲಸಗಳಿಗೆ ಹಾಗೂ ಮನೆ ಕೆಲಸಗಳಿಗೆ ಹೋಗುವರು. ಮನೆ ಮಕ್ಕಳ ಪೋಷಣೆಯ ಜೊತೆಯಲ್ಲಿ ಇವರು ಸಾರಾಯಿಯನ್ನು ಮನೆಯಲ್ಲಿಯೇ ಮಾರಾಟ ಮಾಡುವರು.

ವಿವಾಹದಲ್ಲಿ ಬದಲಾವಣೆ

ಹಕ್ಕಿಪಿಕ್ಕಿ ಸಮುದಾಯದಲ್ಲಿ ವಿವಾಹದ ಬಗೆಗೆ ಪವಿತ್ರವಾದ ಭಾವನೆ ಇದ್ದು, ಸಗೋತ್ರ ಮದುವೆ ನಿಷಿದ್ಧವಿದೆ. ವಿವಾಹವೆಂದರೆ ಗಂಡು ಮತ್ತು ಹೆಣ್ಣಿನ ನಡುವೆ ನಡೆಯುವ ಒಂದು ಸುಮಧುರ ಬಾಂಧವ್ಯ "ಹಿಂದು ಸಮಾಜದ ಇತರ ಜಾತಿಗಳಲ್ಲಿ ಇದಕ್ಕೆ ವ್ಯತಿರಿಕ್ತ ಆಚರಣೆಯ ಗಮನಾರ್ಹ ವ್ಯತ್ಯಾಸವೊಂದನ್ನು ಇಲ್ಲಿ ಕಾಣುತ್ತೇವೆ. ಸಾಮಾಜಿಕ ಪ್ರತಿಷ್ಠೆ ತಾವು ಗಂಡಿನ ಕಡೆಯವರೆಂಬ ಅಹಂಭಾವ ಸ್ಥಾನಮಾನಗಳ ಪೂರ್ವಗ್ರಹ, ವರದಕ್ಷಿಣೆ ಇತ್ಯಾದಿಗಳ ಚೌಕಾಸಿಯ ಕಾರಣಕ್ಕಾಗಿ ಹೆಣ್ಣಿನ ಕಡೆಯವರೇ ಮೊದಲು ಬೇಡಿಕೆ ಕಳುಹಿಸಲಿ ಎಂಬ ಇತರ ಹಿಂದು ಸಮಾಜಗಳ ಈಚೀನ ರೂಢಿ ಇವರಲಿಲ್ಲ."[೨೦] ಆದರೆ ಹಕ್ಕಿಪಿಕ್ಕಿ ಸಮುದಾಯದಲ್ಲಿ ತೆರವು ಪಡೆಯುವ ಪದ್ಧತಿ, ಹಿರಿಯ ತಲೆಮಾರಿನಿಂದ ಹೀಗೆ ನಡೆದುಕೊಂಡು ಬಂದಿದೆ. ಮೊದಲು ತೆರುವಿನ ರೂಪದಲ್ಲಿ ಹಣವನ್ನು ಕೊಡುವುದು. ಇವರು ವಧುದಕ್ಷಿಣೆ ಎಂಬುವುದು ಮದುವೆಯ ಸಮಯದಲ್ಲಿ ಮೊದಲು ಅದು ಕಡಿಮೆ ಹಣದಲ್ಲಿತ್ತು. ಆದರೆ ಇಂದು ೫೦೦ ರೂಪಾಯವರೆಗೆ ಏರಿದೆ. ಹಾಗೂ ವರದಕ್ಷಿಣೆ ಎಂಬುವುದು ಇವರಲ್ಲಿ ಇರಲಿಲ್ಲ. ಆದರೆ ಬೇರೆ ಜಾತಿಗಳ ಒಂದು ಪ್ರಭಾವದಿಂದ ಹಾಗೂ ಆ ಜಾತಿಗಳ ಮದುವೆಯ ಸಂಪ್ರದಾಯಗಳು, ಸಮುದಾಯಗಳ ಮೇಲೆ ಪ್ರಭಾವ ಬೀರುವುದರಿಂದ ಅವರು ಆಚರಿಸುವ ಕೆಲವೊಂದು ನಿಯಮಗಳು ಬೇರೆ ಸಮುದಾಯಗಳ ನಿಯಮವನ್ನು ಇವರು ಅಳವಡಿಸಿಕೊಳ್ಳುತ್ತಾರೆ. ಶಿಕ್ಷಣವೆಂಬುವುದು ವರದಕ್ಷಿಣೆಗೆ ಮೂಲ ಕಾರಣವಾಗುತ್ತಿದೆ. ಎಷ್ಟು ಜನ ಶಿಕ್ಷಿತರಾಗುವರು ಹಾಗೂ ಸಮಾಜದಲ್ಲಿ ಉದ್ಯೋಗಸ್ಥ ಜಮೀನು ಹೊಂದಿದ್ದ ಆಸ್ತಿವಂತ ವ್ಯಾಪಾರಸ್ಥರು ಇವರೆಲ್ಲರು ಲಕ್ಷಗಟ್ಟಲೆ ವರದಕ್ಷಿಣೆ ಪಡೆಯುತ್ತಿರುವುದು ಕಂಡುಬರುತ್ತದೆ.

ಬಾಲ್ಯ ವಿವಾಹವೆಂಬುದು ಹಕ್ಕಿಪಿಕ್ಕಿ ಸಮುದಾಯದಲ್ಲಿ ಕಾಲಕ್ರಮೇಣ ಮುಂದುವರೆಯುತ್ತ ಬಂದಿತ್ತು. ಇಂದು ಈ ಪದ್ಧತಿ ಕಡಿಮೆಯಾಗುತ್ತಾ ಬಂದಿದೆ. ಹೆಣ್ಣುಮಕ್ಕಳು ೧೨ ವರ್ಷದ ಒಳಗೆ ಮದುವೆಯಾಗುತ್ತಿದ್ದರು. ಒಂದು ವೇಳೆ ಮದುವೆಯಾದ ಅವಳಿಗೆ ಗಂಡನ ಮನೆಗೆ ಋತುಮತಿಯಾದ ನಂತರ ಕಳಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಈ ಪದ್ಧತಿ ಪೂರ್ತಿಯಾಗಿ ಕಡಿಮೆಯಾಗಿದೆ. ೧೫ ವರ್ಷ

ತುಂಬಿದ ನಂತರ ಹೆಣ್ಣುಮಕ್ಕಳಿಗೆ ಮದುವೆ ಮಾಡಿಸುತ್ತಿರುವರು. ಶಾಲೆಗ ಕಳಿಸುತ್ತಿದ್ದಾರೆ. ಈ ಸಮುದಾಯದಲ್ಲಿ ಬಹಳಷ್ಟು ಹೆಣ್ಣು ಮಕ್ಕಳು ಓದು ಬರಹ ಕಲಿಯುತ್ತಿದ್ದಾರೆ. ಎಸ್ .ಎಸ್ .ಎಲ್ .ಸಿ ವರೆಗೆ ಓದಿದ ಹೆಣ್ಣುಮಗಳು ಎಂದರೆ ಜೀವಿತ ತಂದೆ ಜೀವನ್ ಈ ಸಮುದಾಯದಲ್ಲಿ ಕ್ಷೇತ್ರ ಕಾರ್ಯದ ಮುಖಾಂತರ ಗಮನಿಸಿದರೆ, ಅಂತರ ಜಾತಿಯ ವಿವಾಹ ಅಷ್ಟಾಗಿ ಕಂಡುಬಂದಿಲ್ಲ. ಆಧರೆ ಸಂಗೋತ್ರದಲ್ಲಿರುವ ಒಂದೇ ಸಮುದಾಯದಲ್ಲಿ ಪ್ರೇಮಿಸಿ ಮದುವೆಯಾಗಿರುವುದಕ್ಕೆ ಹೆಚ್ಚಿನ ಜನರು ಒಲವನ್ನು ಹೊಂದಿರುವರು. ಬದಲಾದ ಸಂದರ್ಭದಲ್ಲಿ ಗ್ರಾಮಗಳು ಒಳಪಟ್ಟು ಉಳಿದಿವೆಲ್ಲ, ಅಂತರ ಜಾತಿಯ ವಿವಾಹಗಳು ಆಗುತ್ತಿರುವ ಉದಾಹರಣೆಗಳು ಇಂದು ಇಲ್ಲಿ ಕಾಣಬಹುದಾಗಿದೆ. ಇಂದು ಪ್ರಸ್ತುತ ಸಮಾಜದಲ್ಲಿ ಹೆಚ್ಚಿನ ಖರ್ಚಿನಲ್ಲಿ ಮದುವೆ ಮಾಡದೆ, ಸಾಮೂಹಿಕ ವಿವಾಹವನ್ನು ಹಕ್ಕಿಪಿಕ್ಕಿ ಸಮುದಾಯಗಳಲ್ಲಿ ಕಂಡುಬರುವುದು.

ಧಾರ್ಮಿಕ ವ್ಯವಸ್ಥೆ ಹಾಗೂ ಸಂಪ್ರದಾಯ ಆಚರಣೆಗಳ ಬದಲಾವಣೆ

ಹಕ್ಕಿಪಿಕ್ಕಿ ತಮ್ಮದೇ ಆದ ಕಾಲೋನಿಯಲ್ಲಿ ತುಳಜಾ ದೇವಿಯ ದೇವಸ್ಥಾನ ಹೊಂದಿರುವರು. ತಮ್ಮ ಕುಲದೇವರ ಹಾಗೂ ಮನೆಯ ದೇವರುಗಳ ಜೊತೆಗೆ ಚೌಡೇಶ್ವರಿ, ವಿರೋಪಾಕ್ಷ, ವೀರ ಆಂಜನೇಯ ದೇವರನ್ನು ಪೂಜಿಸುತ್ತಿದ್ದಾರೆ. ವರ್ಷಕ್ಕೆ ಒಂದು ಸಲವಾದರೂ ತುಳಜಾಪುರ ಎಂಬ ಗ್ರಾಮಕ್ಕೆ ಹೋಗಿ ದೇವಿಯ ದರ್ಶನ ಮಾಡಿಕೊಂಡು ಬರುವರು. ದೇವರ ಒಂದು ಸನ್ನಿಧಿಯಲ್ಲಿ ಬಲಿಯನ್ನು ಕೊಡುವ ಪದ್ಧತಿ ಇಂದಿಗೂ ಬದಲಾಗಿಲ್ಲ. ಪೂಜೆಯ ವಿಧಿ ವಿಧಾನಗಳು ಹಾಗೂ ಆಚರಣೆಗಳು ಬದಲಾಗಿದ್ದರು. ಅವರು ದೇವರಿಗೆ ಕೊಡುವ ಬಲಿಯ ಆಚರಣೆಯು ಬದಲಾಗಿಲ್ಲ. ಒಂದು ವರ್ಷಕ್ಕೆ ಒಂದು ಸಲ ಅಂದರೆ ಯುಗಾದಿಯ ಹಬ್ಬದ ಸಂದರ್ಭದಲ್ಲಿ ನಡೆಯುವ ದೇವರ ಆಚರಣೆಯಲ್ಲಿ ಅವರು ಸಮುದಾಯದಲ್ಲಿ ಬರುವ ನಾಲ್ಕು ಬೆಡಗಿನ ದೇವತೆಗಳ ಹೆಸರಿನಲ್ಲಿ ದೇವತೆಗಳ ಪ್ರತಿರೂಪವಾಗಿ ಕುರಿ, ಕೋಣ, ಕೋಳಿಗಳನ್ನು ಬಲಿಕೊಟ್ಟು ಹೆಂಡವನ್ನು ದೇವರ ಮುಂದಿಟ್ಟು, ಗಂಡಸರು ಮತ್ತು ಹೆಣ್ಣು ಮಕ್ಕಳು ಇಬ್ಬರು ಸೇರಿ ಚೆನ್ನಾಗಿ ಕುಡಿದು ದೇವರನ್ನು ಊರ ತುಂಬಾ ಮೆರವಣಿಗೆ ಮಾಡುತ್ತಾ ವಾದ್ಯಗಳನ್ನು ಬಾರಿಸುತ್ತಾ ಹಾಗೂ ನೃತ್ಯ ಮಾಡುತ್ತ, ಮರಳಿ ತಮ್ಮ ಕಾಲೋನಿಯತ್ತ ಬರುವರು. ಹೀಗೆ ಹಕ್ಕಿಪಿಕ್ಕಿಯರು ಇದನ್ನು ಸಾಂಸ್ಕೃತಿಕ ಹಬ್ಬದಂತೆ ಆಚರಿಸುವರು. ಸಂಸ್ಕೃತಿಯ ಆಚರಣೆಯಲ್ಲಿ ಇವರು ಪ್ರತ್ಯೇಕವಾದ ಒಂದು ಕಲಾಮೇಳವನ್ನು ಮಾಡಿಕೊಂಡಿರುವರು. ಈ ಅಲೆಮಾರಿ ಸಮುದಾಯ ಹಿಂದೆ ಹೇಗಿತ್ತು ಎಂಬುವುದಕ್ಕೆ ಸರಿಯಾದ ದಾಖಲೆಗಳು ಇನ್ನು ದೊರೆಯುತ್ತಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಝೂಂಜ ಮಾದರಿ ವಾದ್ಯಗಳೊಂದಿಗೆ ಕುಣಿಯುವುದನ್ನು ರೂಢಿಸಿಕೊಂಡಿದ್ದಾರೆ. ಮೂಲಭೂತವಾಗಿ ಶಿಕಾರಿ ಮಾಡಿ ಹೊಟ್ಟೆ ಹೊರೆಯುವ ಈ ಸಮುದಾಯ ವೃತ್ತಿಯಾದ ಶಿಕಾರಿ ಮಾದರಿ ಕುಣಿತ ಇವರ ವಿಶೇಷ ರಂಗಾಯಣ ಹಾಗೂ ಪ್ರವಾಸೋಧ್ಯಮ ಇಲಾಖೆಯು

ಜೂನ್ ೨ರಂದು ನಡೆಸಿರುವ ಜನಪದ ನೃತ್ಯ ಕಲಾವಿದದಲ್ಲಿ ಶಿಕಾರಿ ರಾಮು ಅವರ ಸಂಘದ ತಂಡದವರಿಂದ ಹಕ್ಕಿಪಿಕ್ಕಿಯರು ತಮ್ಮ ಕುಲಕುಣಿತವನ್ನು ಆದಿನ ಸಂಜೆ ೬.೩೦ಕ್ಕೆ ಪ್ರದರ್ಶಿಸಿದರು. ಹೊಸ ಪ್ರತಿಭೆಗಳ ನಿಟ್ಟಿನಲ್ಲಿ ಬದಲಾವಣೆ ಹೊಂದಿದೆ ಎಂದು ಹೇಳಬಹುದು. ಈ ಎಲ್ಲ ಅಂಶಗಳನ್ನು ಗಮನಿಸಿದರೆ ಈ ಬುಡಕಟ್ಟಿನ ಮೂಲದ ಆಚರಣೆಗಳು ಸಾಮಾಜಿಕ ಸ್ಥಿತ್ಯಂತರದ ಮತ್ತು ತಮ್ಮ ಸಂಚಾರಿ ಬದುಕಿನ ನಡುವೆಯೂ ಕೆಲವು ಉಳಿದಕೊಂಡು ಬಂದಿರುವುದು ಈ ಜನರ ಶ್ರದ್ಧೆ ಮತ್ತು ನಂಬಿಕೆಯನ್ನು ನೆನಪಿಸುತ್ತದೆ.

ಸಂಸ್ಕೃತೀಕರಣ ಪ್ರಕ್ರಿಯೆ ಕೆಳಮುಖವಾಗಿ ಹರಿಯುತ್ತಾ ಬಂದಿದೆಯೇ ಹೊರತು ಉಪಸಂಸ್ಕೃತಿಗಳ ಸಾಂಸ್ಕೃತಿಕ ಮೌಲ್ಯಗಳು ಉನ್ನತೀಕರಣಗೊಂಡು ಮೇಲ್ಮುಖದ ಹರಿಯುವಿಕೆಯನ್ನು ಪಡೆದುಕೊಂಡಿಲ್ಲ ಎನ್ನುವುದನ್ನು ಇಂದಿನ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ. ಬ್ರಾಹ್ಮಣೀಕರಣವೇ ಸಂಸ್ಕೃತೀಕರಣ ಎಂಬ ವಿಚಾರ ಇಂದು ಬದಲಾಗಬೇಕಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಇತರ ಅಂಶಗಳಂತೆ ಸಾಂಸ್ಕೃತಿಕ ಅಂಶವು ಸಾಮಾಜಿಕ ಬದಲಾವಣೆಗೆ ಕಾರಣವಾಗಿದೆ. ಯಾವುದೇ ಒಂದು ಅಂಶವು ಸಂಪೂರ್ಣವಾಗಿ ಸಾಮಾಜಿಕ ಬದಲಾವಣೆ ತರಲಾರದು. ಎಲ್ಲ ಅಂಶಗಳು ಪ್ರತ್ಯಕ್ಷ ಇಲ್ಲವೆ ಪರೋಕ್ಷವಾಗಿ ಸಾಮಾಜಿಕ ಬದಲಾವಣೆಯು ಉಂಟಾಗಲು ಸಹಾಯ ಮಾಡುತ್ತವೆ ಎಂದು ಹೇಳಬಹುದು.

೩.೪. ಬದಲಾಗುವಿಕೆಯ ಹಿಂದಿರುವ ಒತ್ತಾಸೆಗಳು, ಒತ್ತಡಗಳು ಮತ್ತು ಅನಿವಾರ್ಯತೆಗಳ ವಿಶ್ಲೇಷಣೆ

ಬದುಕಿನ ಒಂದು ನಿರ್ದಿಷ್ಟ ಪರಿಶುದ್ಧತೆಯಿಂದ ಕೂಡಿದ ಕುಟುಂಬಗಳನ್ನು ಒಳಗೊಳ್ಳಲು ಪ್ರಯತ್ನಿಸುತ್ತದೆ. ಹೀಗಾಗಿ ಅದು ಒಂದು ನಿರ್ದಿಷ್ಟವಾದ ಕುಟುಂಬ ಒಂದು ವಿಶಿಷ್ಟ ಮಾದರಿಗೆ ಸಂಬಂಧಿಸಿದಂತೆ ತೀರ್ಮಾನಿಸುವುದಿಲ್ಲ. ಒಬ್ಬ ವ್ಯಕ್ತಿ ಅಥವಾ ಒಂದು ಕುಟುಂಬ ತಮ್ಮ ಬದುಕಿನ ರೀತಿ ನೀತಿಗಳನ್ನು ಉತ್ತಮಪಡಿಸುವ ಹಂಬಲದಿಂದ ಬದಲಾಗಬಯಸಿದರೆ ಅದು ಅನ್ಯಾಯವೆಂದು ಹೇಳುವುದು ಇಲ್ಲಿ ಬದುಕಿನಲ್ಲಿ ಬದಲಾವಣೆ ಎಂಬುದು ತೀರಾ ಸವಕಾಶವಾಗಿ ಕಾಣಿಸಿಕೊಳ್ಳುವ ಒಂದು ಪ್ರಕ್ರಿಯೆ. ಹೊಸ ಸಮುದಾಯಿಕ ಗುಂಪುಗಳು ಕ್ರಮೇಣ ಬದುಕಿನ ಬದಲಾವಣೆಗಳಿಗೆ ಹೊಂದಿಕೊಳ್ಳುವ ಅವಕಾಶವನ್ನು ಜಾತಿ ವ್ಯವಸ್ಥೆ ಮಾಡಿಕೊಡುವುದು.

ಹಕ್ಕಿಪಿಕ್ಕಿಯರ ಗುಂಪನ್ನು ವಿಚಾರಶಿಲ ಸಮುದಾಯವನ್ನಾಗಿ ಪರಿವರ್ತಿಸುವುದು ತುಂಬಾ ಸಾವಕಾಶವಾಗಿ ನಡೆಯಬೇಕಾದ ಕ್ರಿಯೆ. ಅದು ಅಷ್ಟು ಕಷ್ಟಕರವಾದದ್ದು ಹೌದು. ಆದರೆ ನಮ್ಮ ಪ್ರಜಾಪ್ರಭುತ್ವ ಉಳಿಯಬೇಕಾದರೆ ನಾವು ಅನಿವಾರ್ಯವಾಗಿ ಮಾಡಲೇಬೇಕಾದ ಪ್ರಯತ್ನ ಇದಾಗಿದೆ.

ಒಬ್ಬ ಹಿಂದೂ ತಾನು ಶ್ರೇಷ್ಠನೆಂದು ಇತರ ಸಮುದಾಯಗಳು ಕೀಳು ಎಂದು ಇತರ ಸಮುದಾಯಗಳು ಹಿಂದುವನ್ನು ಕನಿಷ್ಠವೆಂದು ಕರೆದುಕೊಳ್ಳುವುದು ಇಂಥ ವಿಚಾರ ಹೋಗಬೇಕು.

ಹಕ್ಕಿಪಿಕ್ಕಿಯರಲ್ಲಿ ಪ್ರತಿಯೊಬ್ಬರಿಗೂ ತಮ್ಮ ತಮ್ಮ ಹಕ್ಕಿನ ಭಾಗ ಸಿಗುವಂತಾಗಬೇಕು. ಪ್ರತಿಯೊಬ್ಬರಿಗೂ ಅವರು ನೀಡುವ ಪ್ರತಿಫಲ ಸಾಮಾಜಿಕವಾಗಿ ಉಪಯುಕ್ತವಾದ ಶ್ರಮಕ್ಕನುಗುಣವಾಗಿರಬೇಕು. ಅದು ನೈಜ ಸಮಾನತೆಯನ್ನು ಆಧರಿಸಬೇಕು. ಹೀಗಾದರೆ ಮಾತ್ರ ನಮ್ಮ ಅನೇಕ ಜನ ಸಮುದಾಯಗಳಲ್ಲಿ ಮನೆ ಮಾಡಿಕೊಂಡಿರುವ ಪರಕೀಯ ಮತ್ತು ಪ್ರತ್ಯೇಕತೆಯ ಭಾವ ಕ್ರಮೇಣ ತೊಲಗಿ ಅವರಲ್ಲಿ ಏಕತೆಯ ಪರಸ್ಪರ ಬಾಂಧವ್ಯದ ಭಾವ ಉಂಟಾಗುವುದು ಸಾಧ್ಯ.

ವಾಸ್ತವವಾಗಿ ಜಾತಿವಾದದ ಅನಾಗರಿಕ ಸ್ಥಿತಿಯಲ್ಲಿರುವ ಸಮುದಾಯಗಳ ಒಂದು ರೂಪವಾಗಿರುವ ಕೋಮುವಾದಿ ರೋಗ ಗುಣವಾಗಬೇಕಾದರೆ ಸಮಾಜದ ಮಾನಸಿಕ ವಿಮೋಚನೆಗಾಗಿ ಒಂದು ಅಂದೋಲನವೇ ನಡೆಯಬೇಕಾಗುತ್ತವೆಂದು ನನ್ನ ಅನಿಸಿಕೆ. ಬುಡಕಟ್ಟಿನ ಮಟ್ಟದಲ್ಲಿರುವ ನಮ್ಮ ಸಮಾಜವನ್ನು ಒಂದು ಸಾಮಾಜಿಕ ಪ್ರಜಾಪ್ರಭುತ್ವವಾದಿ ವ್ಯವಸ್ಥೆಯಾಗಿ ರೂಪಾಂತರಿಸುವುದು ತುಂಬಾ ಕಠಿಣವಾದ ಕೆಲಸವಾಗಿದೆ.

ಕೆಳ ಸಮುದಾಯಗಳು ಮಾಡುವ ಕೆಲವು ವೃತ್ತಿಗಳು ಅತ್ಯಂತ ಅಮಾನವೀಯವಾದದ್ದು. ಇಂತಹ ವೃತ್ತಿಗಳನ್ನು ಕೆಲವು ಕಾಯಿದೆಯ ಮೂಲಕ ನಿಷೇಧಿಸುವ ಅವಶ್ಯಕತೆ ಇದೆ. ನಮ್ಮ ಸಮುದಾಯಗಳು ತಮ್ಮ ಬದುಕಿನ ವಿಧಾನದಲ್ಲಿ ಒಂದಿಷ್ಟು ಬದಲಾವಣೆ ಮಾಡಿಕೊಂಡರೆ ಸಾಕು ಸಮಾಜಕ್ಕೆ ಆ ವೃತ್ತಿ ಅನಾವಶ್ಯಕವಾಗಿ ಬಿಡುತ್ತದೆ. ಅಂತೆಯೇ ಸತ್ತ ಪ್ರಾಣಿಗಳನ್ನು ಹೊತ್ತೊಯುವ, ಅವುಗಳ ಚರ್ಮ ಸುಲಿಯುವ, ಕರ್ಮವನ್ನು ಸುಧಾರಿಸಿ ಆ ವೃತ್ತಿಗೆ ಅಂಟಿಕೊಂಡಿರುವ ದೈವ್ಯದ ದುರ್ವಾಸನೆಯನ್ನು ದೂರ ಮಾಡಬಹುದು.

ನಮ್ಮ ಆರ್ಥಿಕ ವ್ಯವಸ್ಥೆಯ ಸಂಪೂರ್ಣ ಪುನರಚನೆಯ ಮೂಲಕ ಸಮಾಜದ ಎಲ್ಲರಿಗೂ ಕೈಗೊಂದು ಕೆಲಸ ಕೊಟ್ಟು ಇಂತಹ ಜನರಿಗೆ ಸಾರ್ವಜನಿಕ ಭದ್ರತೆಯನ್ನು ಒದಗಿಸಿ ಅಮಾನವೀಯತೆಯಿಂದ ಒಡಗೂಡಿದ ವೃತ್ತಿಗಳನ್ನು ನಿರ್ಮೂಲನೆ ಮಾಡುವುದು ಅದರಿಂದ ಸಮಾಜದ ದೃಷ್ಟಿಕೋನವನ್ನು ಬದಲಾಯಿಸಿ ದೈಹಿಕ ಶ್ರಮದ ಘನತೆಯನ್ನು ಹೆಚ್ಚಿಸಬಹುದು. ಹಾಗೆಯೇ ಉತ್ಪಾದಕ ಶ್ರಮದ ಮೌಲ್ಯವರ್ಧಿಸುವ ಸಂವರ್ಧಿಸುವ ಪರಿಸ್ಥಿತಿಗಳನ್ನು ಸೃಷ್ಟಿಸಬಹುದು. ಆದ್ದರಿಂದ ತುಳಿತಕೊಳಗಾದವರಿಗೆ ವಿಶೇಷ ಸೌಲಭ್ಯ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಅವರ ಶೈಕ್ಷಣಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಮುನ್ನಡೆಯನ್ನು ಸುಗಮಗೊಳಿಸಬಹುದು.

"ಸ್ವಾತಂತ್ರ್ಯ ನಂತರ ಅದಕ್ಕೊಂದು ರಾಜಕೀಯ ಸ್ವರೂಪ ಕೊಟ್ಟವರು ಸಮಾಜವಾದಿಗಳು ಅದರಲ್ಲೂ ಲೋಹಿಯಾವಾದಿಗಳು ಅವರು ಜಾತಿ ಹಣ ಮತ್ತು ಇಂಗ್ಲೀಷ ವಿದ್ಯೆ ಇವುಗಳಲ್ಲಿ ಯಾವುದಾದರೂ ಎರಡು ಲಭ್ಯವಿದ್ದವರು ಭಾರತವನ್ನು ಆಳುತ್ತಾರೆ ಎಂದರು.

ಆಧುನಿಕ ಸಮಾಜದಲ್ಲಿ ಹಕ್ಕಿಪಿಕ್ಕಿ ಸಮುದಾಯದ ಜನರು ಹಲವು ಸಮಸ್ಯೆಗಳ ಸುಳಿಯಲಿ ಸಿಕ್ಕಿಹಾಕಿ ಕೊಂಡಿರುವರು. ಅವರು ತಮ್ಮ ಒಂದು ಆಸೆ ಅಕಾಂಕ್ಷೆಗಳಿಗೆ ಅವರ ಸಮುದಾಯದ ಬೆಳವಣಿಗೆಗೆ ಹಲವು ಬಗೆಯಲ್ಲಿ ಒತ್ತಾಸೆಗಳನ್ನು ಹೊಂದಿರುವರು.

ಬದಲಾಗುವಿಕೆಯ ಹಿಂದಿರುವ ಒತ್ತಾಸೆಗಳು

ಈ ಪ್ರಪಂಚದಲ್ಲಿರುವ ಭೂಮಿಯ ಮೇಲೆ ಜೀವಿಸುವ ಹಕ್ಕು, ಬದುಕುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ತಮ್ಮ ಜೀವನದ ಮೌಲ್ಯಗಳನ್ನು ಪ್ರತಿಪಾದಿಸುವಲ್ಲಿ ಸಮಾಜದಲ್ಲಿ ತಮ್ಮನ್ನು ಗುರುತಿಸುವ ಉದ್ದೇಶದಿಂದ ಹಲವು ರೀತಿಯ ಆಸೆ-ಆಕಾಂಕ್ಷೆಗಳನ್ನು ಸಮುದಾಯಗಳು ಹೊಂದಿರುವವು. ಸಮುದಾಯಗಳ ಒಂದು ಏಳಿಗೆಗೆ ಹಾಗೂ ಅವರ ಆಸೆಗಳಿಗೆ ಮೂಲ ಕಾರಣವಾಗಿ ನಿಂತಿರುವ ಕೆಲವು ಅಂಶಗಳನ್ನು ಇಲ್ಲಿ ಪ್ರಸ್ತಾಪಿಸಲಾಗುವುದು. ಹಕ್ಕಿಪಿಕ್ಕಿಯಂತ ಅಲೆಮಾರಿ ಜನರಿಗೆ ಅವರದೆಯಾದ ಕೆಲವು ನೀತಿ ನಿಯಮ ಸಂಪ್ರದಾಯ ಆಚರಣೆ ಒಂದು ನಿಟ್ಟಿನಲ್ಲಿ ಅವುಗಳು ಕೂಡ ಜೀವನ ನಡೆಸುತ್ತಿರುವ ಪ್ರತ್ಯೇಕ ಸಮುದಾಯವೆಂದು ಹೇಳುವುದು. ನಾಗರಿಕವಾಗಿ ಈ ದೇಶದ ಸಂಪತ್ತಿನಲ್ಲಿ ಅವರಿಗೆ ಸಮಪಾಲನೆ ಬದುಕುವ ಹಕ್ಕು ಶಿಕ್ಷಣ ಪಡೆಯುವ ಹಕ್ಕು ಜೊತೆಗೆ ವಾಕ್ ಸ್ವಾತಂತ್ರ್ಯದ ಹಕ್ಕು ಕೂಡ. ಆದರೆ "ನಮ್ಮ ಸರ್ಕಾರ ಇನ್ನು ಕಂಪನಿ ಆಡಳಿತ ಕಾನೂನುಗಳ ಗುಂಗಿನಿಂದ ಹೊರಬಂದಿಲ್ಲ."[೨೧] ಹಕ್ಕಿಪಿಕ್ಕಿಯಂತಹ ಸಮುದಾಯಗಳಿಗೆ ಈ ದೇಶದ ಯಾವ ಹಕ್ಕುಗಳು ದಕ್ಕದೇ ಇದ್ದ ಸಂದರ್ಭದಲ್ಲಿ ಅವರನ್ನು ಕಾನೂನಿನ ಮೂಲಕ ದಂಡಿಸುವ ಯೋಚನೆಯೇ ಅತ್ಯಂತ ಅಮಾನವೀಯವಾದದ್ದು.

ಇಂತಹ ಒತ್ತಾಸೆಗಳಿಗೆ ಕಡಿವಾಣವಾಗಿ ಇರುವ ಕೆಲವು ವಿಷಯಗಳನ್ನು ಈ ಕೆಳಗಿನಂತೆ ವಿಸ್ತರಿಸಲಾಗಿದೆ.

೧. ಸಾಮಾಜಿಕ ಸ್ಥಿತಿಗತಿ

೨. ಆರ್ಥಿಕ ಸ್ಥಿತಿಗತಿ

೩. ರಾಜಕೀಯ ಸ್ಥಿತಿಗತಿ

೪. ಧಾರ್ಮಿಕ ಸ್ಥಿತಿಗತಿ

೧. ಸಾಮಾಜಿಕ ಸ್ಥಿತಿಗತಿ : ಸಮಾಜದಲ್ಲಿ ಹಕ್ಕಿಪಿಕ್ಕಿಯಂತಹ ಸಮುದಾಯದ ಜನ ಸಾಮಾನ್ಯರು ಸಾಮಾಜಿಕ ಮುನ್ನಡೆಗಾಗಿ ಶ್ರಮಿಸುವಂತೆ ನೋಡಿಕೊಳ್ಳಲಾಯಿತು. ಚರಿತ್ರೆ ನಿರ್ವಹಣದಂಥ ಪ್ರಕ್ರಿಯೆಯಲ್ಲಿ ಅವರು ಭಾಗಿಗಳಾಗದಂತೆ ಹೊರಗೆ ಉಳಿಸಲಾಯಿತು. ಉದ್ದೇಶ ಪೂರ್ವಕವಾಗಿಯೇ ಅವರನ್ನು ಚರಿತ್ರೆಯಿಂದ ಹೊರಗಿಡಲಾಯಿತು. ತತ್ಪರಿಣಾಮವಾಗಿ ಬಹುಸಂಖ್ಯಾತ ದುಡಿಮೆಗಾರರು ರಾಷ್ಟ್ರೀಯ ಸೃಜನಶೀಲ ಪ್ರಕ್ರಿಯೆಯ ಹೊರಗೆ ಉಳಿದುಬಿಟ್ಟರು.

"ಮೇಲ್ಜಾತಿಯ ಜನ ಇದನ್ನು ಸಾಧಿಸಲು ಸಾಧ್ಯವಾದುದಕ್ಕೆ ಕಾರಣ ಅವರು ಸಾಮಾಜಿಕವಾಗಿ ಬಲಿಷ್ಠರಾಗಿದದ್ದು. ಅಂತೆಯೇ ತಾವು ಅಲ್ಪಸಂಖ್ಯಾತರಾಗಿದ್ದು ಕೆಳಜಾತಿಯ ಬಹುಸಂಖ್ಯಾತರನ್ನು ತಮ್ಮ ಮೂಗಿನ ನೇರಕ್ಕೆ ನಡೆಸಿಕೊಳ್ಳುತ್ತಿದ್ದರು. ಅವರ ಆದೇಶಕ್ಕನುಗುಣವಾಗಿ ತಾಳಹಾಕುವುದೇ ಕೆಳಜಾತಿಯವರ ಕರ್ತವ್ಯವಾಗಿತ್ತು. ಆದರೆ ದೇಶದ ಭವಿಷತ್ತಿನ್ನು ಸೃಜನಾತ್ಮಕ ಕಾಣಿಕೆಯನ್ನು ನೀಡಲು ಸಾಧ್ಯವಾಗದಂತೆ ದೂರವಿಟ್ಟಿದ್ದು ಸತ್ಯ. ಇದು ಭಾರತೀಯ ಸಮಾಜದ ಒಂದು ಪ್ರಮುಖ ದೌರ್ಬಲ್ಯ. ಈ ದೌರ್ಬಲ್ಯ ಕೆಳಜಾತಿಯವರ ಅವನತಿಗೆ ದಾರಿ ಮಾಡಿಕೊಟ್ಟುದಲ್ಲದೆ, ಮೇಲ್ಜಾತಿಯವರ ಅಧಃಪತನಕ್ಕೆ ಕಾರಣೀಭೂತವಾಯಿತು. "ಪಂಡಿತ ನೆಹರೂ ಅವರ ಮಾತಿನಲ್ಲಿ ಅದು ಭಾರತದ ಆರ್ಥಿಕ ವ್ಯವಸ್ಥೆ ಮತ್ತು ಬದುಕಿನ ಪ್ರಧಾನ ಲಕ್ಷಣವಾಗಿರುವ ಜಡತೆಯನ್ನು ಪ್ರತಿನಿಧಿಸುತ್ತದೆ."[೨೨] ಈ ಮೊದಲೇ ಹೇಳಿದಂತೆ ಹಕ್ಕಿಪಿಕ್ಕಿಯರು ಶುದ್ಧಾಂಗವಾಗಿ ಅವರು ಅಲೆಮಾರಿಗಳಾಗಿರುವವರು. ಸಮುದಾಯದಲ್ಲಿ ಇನ್ನೂ ಕೆಲವು ಗುಂಪುಗಳು ಅಲೆಮಾರಿಗಳಾಗಿ ಬದುಕುತ್ತಿದ್ದಾರೆ. ತಮ್ಮ ಒಂದು ಬದುಕುವ ರೀತಿ ಹಾಗೂ ಅವರ ಒಂದು ವೃತ್ತಿಗನುಗುಣವಾಗಿ ವಂಶಾವಳಿಯನ್ನು ಸಮಾಜದಲ್ಲಿ ಗುರುತಿಸುವರು. ಬೇಟೆಯೇ ಅವರ ಪ್ರಮುಖ ವೃತ್ತಿಯೆಂದು ಹೇಳುವರು. ಇಂತಹ ಸಾಮಾಜಿಕ ಸ್ಥಿತಿಯಲ್ಲಿ ಹಕ್ಕಿಪಿಕ್ಕಿಯರು ಅನೇಕ ಉಪಪಂಗಡಗಳನ್ನು ಮಾಡಿಕೊಂಡು ಲಾಭದಾಯಕವಲ್ಲದೆ ಕೆಲವು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡು ಸಾಮಾಜಿಕವಾಗಿ ಕೆಳಸ್ಥಿತಿಯಲ್ಲಿರುವರು. ಶಿಕ್ಷಣ ಪಡೆದು ಸರ್ಕಾರ ಹುದ್ದೆಯಲ್ಲಿ ಇರುವ ಜನರು ಇಡೀ ಹೊಸಪೇಟೆ ತಾಲೂಕಿನಲ್ಲಿ ಕೇವಲ ೫ ಜನರನ್ನು ಮಾತ್ರ ಸರ್ಕಾರ ಹುದ್ದೆಯುಲ್ಲಿರುವರು. ಶಿಕ್ಷಣ ಪಡೆದವರ ಸಂಖ್ಯೆ ಕೇವಲ ೧೫ ಎಂದು ಗುರುತಿಸಲಾಗಿದೆ. ಗಂಡು ಮಕ್ಕಳು ೧೦, ಹೆಣ್ಣು ಮಕ್ಕಳು ೫. ಎಸ್.ಎಸ್.ಎಲ್.ಸಿ. ವರೆಗೆ ಓದಿದ ಹೆಣ್ಣುಮಗಳೆಂದರೆ ಒಬ್ಬಳು. ಈಗ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಹಿಂದಿಗಿಂತಲೂ ಇಂದು ಸ್ವಲ್ಪಮಟ್ಟಿಗಾದರೂ ಮುಂದುವರೆದಿದ್ದಾರೆ. ದಕ್ಷಿಣ ಕರ್ನಾಟಕದ ಹಕ್ಕಿಪಿಕ್ಕಿಯರು ಇವರಿಗಿಂತ ಶೈಕ್ಷಣಿಕದಲ್ಲಿ ಮುಂದುವರೆದಿದ್ದಾರೆ. ಹಾಗೂ ಆರ್ಥಿಕವಾಗಿ ಬಲಿಷ್ಠರಾಗಿದ್ದಾರೆ. ಇತರ ದೇಶಗಳಿಗೆ ವ್ಯಾಪಾರ ಮಾಡುತ್ತ ತಮ್ಮ ವೃತ್ತಿಯಲ್ಲಿ ಬದಲಾವಣೆಯನ್ನು ಹೊಂದಿರುವರು. ಕರ ಕುಶಲ ಕಲೆಗಳಿಗೆ ನೈಪುಣ್ಯತೆಯನ್ನು ಹೊಂದಿದವರಾಗಿದ್ದಾರೆ. ಆದರೆ ಜಾಗತೀಕರಣದ ಒಂದು ಶತಮಾನಗಳ ಹಿಂದೆ ರೂಪುಗೊಂಡಿರಬಹುದಾದ ಈ ಅಲೆಮಾರಿಗಳ ವೃತ್ತಿಗಳನ್ನು ಇನ್ನು ಈ ಸಮುದಾಯಗಳು ಅವಲಂಬಿಸಿವೆ. ಇಂದಿಗೂ ಈ ಜನರು ಭಿಕ್ಷೆ ಬೇಡಿ ಜೀವನ ನಡೆಸುವವರಿದ್ದಾರೆ. ಈ ಬಗೆಯ ವೈರುದ್ಧ ಅಸಮಾನತೆಯನ್ನು ಜತನದಿಂದ ಪೋಷಿಸುವ ಬದುಕುವ ಜನ ಸಮಾಜದಲ್ಲಿ ಇನ್ನು ಇದ್ದಾರೆ. ಇಂತಹ ಜನರ ಪರಿಸ್ಥಿಯು ತುಂಬಾ ಶೋಚನೀಯವಾದದ್ದು. ಆಧುನಿಕತೆಯು ಕೈಗಾರೀಕರಣಗೊಂಡ ಸಮಾಜ. ಉಳಿಗಮಾನ್ಯ ಸಮಾಜ ಸ್ಥಿತಿಯಿಂದ ವಸಾಹತುಶಾಹಿಗೆ ವಸಾಹತುಶಾಹಿಯಿಂದ ಬಂಡವಾಳಶಾಹಿಗೆ ಹೀಗೆ ಸಮಾಜ ಎಂಬುವುದು ಬದಲಾಗುತ್ತ ಬಂದರೂ

ಸಮಾಜದಲ್ಲಿರುವ ಸಮುದಾಯಗಳ ಪರಿಸ್ಥಿತಿ ಹಾಗೂ ಹಕ್ಕಿಪಿಕ್ಕಿಯರ ಪರಿಸ್ಥಿತಿಯು ಶೋಷಿತ ಸ್ಥಿತಿಯಿಂದ ಇಂದು ದೂರ ಉಳಿದಿಲ್ಲ. ಹೀಗೆ ಸಮಾಜದಲ್ಲಿ ಲಭ್ಯವಾಗುವ ಅನೇಕ ಲಾಭಗಳಿಂದ ಸರ್ಕಾರೇತರ ಯೋಜನೆಗಳಿಂದ ಇಂತಹ ಸಮುದಾಯಗಳು ಹಿಂದುಳಿಯುತ್ತವೆ. ಯಾವುದೇ ಲಾಭಗಳು ಇವರಿಗೆ ಲಭಿಸುತ್ತಿಲ್ಲ. ಕೇವಲ ಯೋಜನೆಗಳು ಅವರಿಗೆ ಮನೆ, ಶಿಕ್ಷಣ, ಬಟ್ಟೆ ಹೀಗೆ ಕೆಲವು ವಿಷಯಗಳ ಮೇಲೆ ಅವರಿಗೆ ಸೌಕರ್ಯ ಒದಗಿಸಿದ್ದಾರೆ. ಅದು ಅವರಿಗೆ ಲಾಭ ತರುವುತಾದರೂ ಅವರು ಸ್ವಂತ ತಮ್ಮ ತನದಿಂದ ಬಲಿಷ್ಠರಾಗುವಂತೆ ಪೂರಕವಾದ ಯೋಜನೆಗಳ ಅಡಿಯಲಿ ಅವರನ್ನು ಉದ್ಧರಿಸಬೇಕು. ಅವರಲ್ಲಿರುವ ಕೀಳರಿಮೆ, ಭಯ, ಅತಂಕ ಅನಿವಾರ್ಯತೆ ಹಾಗೂ ಮೂಡತ್ವ ಇಂತಹ ಕಲ್ಪನೆಗಳು ಅವರಿದ್ದಲೇ ಅವು ದೂರ ಸರಿಯುವಂತೆ ಮಾಡಬೇಕು. ಸ್ವಂತ ಆಲೋಚನೆಗಳು ಸ್ವಂತಿಕೆಯೆಂಬುವುದು ಅವರಲ್ಲಿ ಬರಬೇಕು. ಬೇರೆ ಅವರ ಹಂಗಿನ ಜೀವನ ನಮಗೆ ಬೇಡ ಎಂಬ ಅರಿವು ಅವರಿಗೆ ಎಂದಾಗುವುದು. ಅಂದೇ ಇಂತಹ ಸಮುದಾಯಗಳು ಸಮಾಜದಲ್ಲಿ ತಮ್ಮ ಬದುಕನ್ನು ಉತ್ತಮ ಸ್ಥಿತಿಗತಿಯಲ್ಲಿ ಇರಲು ಸಾಧ್ಯ. ಒಂದು ಉತ್ತಮ ಸಮಾಜ ನಿರ್ಮಾಣವಾಗುವುದು.

೨. ಆರ್ಥಿಕ ಸ್ಥಿತಿಗತಿ : ಬುಡಕಟ್ಟು ಸಮುದಾಯದವರು ಇಡೀ ಭಾರತವೇ ಇವತ್ತು ಜಗತ್ತಿನ ಅತಿದೊಡ್ಡ ರೂಪಾಂತರ ಕೇಂದ್ರ. ಇಲ್ಲಿ ಸಮುದಾಯಗಳ ಮೇಲೆ ಆಗುತ್ತಿರುವುದು ವೈರುಧ್ಯಗಳು, ಬಹುರೂಪಗಳು, ಬದಲಾವಣೆಗಳು, ಹೋರಾಟಗಳು ಹಾಗೂ ಮಾರಟಗಳು ನಡೆಯುತ್ತವೆ. ೬೦ ವರ್ಷಗಳು ಕಳೆದರು ಸಮುದಾಯಗಳಲ್ಲಿ ಬದಲಾವಣೆ ಎಂಬುವುದು ಮಂದಗತಿಯಲ್ಲಿರುವುದು. ಪ್ರತಿಯೊಂದು ಸಮುದಾಯದಂತೆ ಹಕ್ಕಿಪಿಕ್ಕಿ ಸಮುದಾಯ ಆಧುನಿಕತೆಯೆಡೆಯಲ್ಲಿ ಇವರು ಕೂಡ ಆರ್ಥಿಕತೆಯ ಸ್ಥಿತಿಯಲ್ಲಿ ಬದಲಾಗಬೇಕು ಎಂದು ಇಚ್ಛಿಸುವರು.

ಭಾರತ ದೇಶವೆಂಬುವುದು ಶ್ರೇಣಿಕೃತವಾದ ವ್ಯವಸ್ಥೆಯ ನಡುವೆ ಸಾಮಾಜಿಕ ಬದುಕು ಹೇಗಿರಬೇಕು. ಇದನ್ನು ನಿರ್ವಹಿಸಿಕೊಂಡು ನಡೆಸಿಕೊಂಡು ಬರಲು ಇವರಿಗೇನು ಸಾಧ್ಯವಾಗುತ್ತಿತ್ತು ಅಥವಾ ಅವುಗಳಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಶ್ರೇಣಿಕೃತವಾದ ಸಮಾಜವನ್ನು ನಿರೂಪಿಸಿಕೊಂಡು ಬರಲು ಸಾಧ್ಯವಾಗುತ್ತದೆಯೇ ಎಂಬ ಹಲವಾರು ಪ್ರಶ್ನೆಗಳು ವಿವರಗಳು ಇಂತಹ ವರ್ಣಾಶ್ರಮ ಪದ್ಧತಿಯಲ್ಲಿ ಬುಡಕಟ್ಟು ಸಮಾಜಗಳ ಆರ್ಥಿಕ ಸ್ಥಿತಿಗತಿ ಹೇಗೆ ನೋಡಬೇಕೆಂಬುದು ಜಟಿಲವಾದ ಪ್ರಶ್ನೆಯಾಗಿದೆ.

ಅಲೆಮಾರಿ ಸಮುದಾಯಗಳಲ್ಲಿ ಒಂದಾದ ಹಕ್ಕಿಪಿಕ್ಕಿಯರು ಜೀವನದಲ್ಲಿ ಅನೇಕ ರೀತಿಯ ಸಮಸ್ಯೆಗಳು ಸಂಕಷ್ಟಗಳನ್ನು ಅನುಭವಿಸಿಕೊಂಡು ಬಂದಿದ್ದಾರೆ. ಆದರೆ ಜೀವನ ವಿಧಾನದಲ್ಲಿನ ವ್ಯವಸ್ಥೆಯಲ್ಲಿ ಅನುಭೋಗ, ಉತ್ಪಾದನೆ, ವಿತರಣೆ ಇವು ಸಾಮಾನ್ಯವಾಗಿ ನಡೆಯುತ್ತಿರುತ್ತವೆ. ಇವುಗಳೇ ಆರ್ಥಿಕ ಚಟುವಟಿಕೆಗಳು ಮನುಷ್ಯನ ಬೆಳವಣಿಗೆಗೆ ಹಾಗೂ ಅವನ ಜೀವನ ನಿರ್ವಹಣೆಯ ಬದುಕಿಗೆ ಬೇಡಿಕೆ ಮತ್ತು ಪೂರೈಕೆ ಸಾಮಾನ್ಯವಾದುದು.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಾನು ಭೇಟಿಕೊಟ್ಟ ಎಲ್ಲಾ ಪ್ರದೇಶದ ಜನರ ಆರ್ಥಿಕ ಸ್ಥಿತಿ ತುಂಬಾ ಕೆಳಮಟ್ಟದಲ್ಲಿರುವುದು ಕಂಡುಬಂತು. ಒಂದೊತ್ತಿನ ಕೂಳಿಗೂ ಪರದಾಡುವಂತಹ ಸ್ಥಿತಿ ಇವರದಾಗಿದೆ. ಒಂದು ದಿನ ದುಡಿಯಲು ಹೋಗಿಲ್ಲವೆಂದರೆ ಅವರು ಅಂದು ಉಪವಾಸವೇ ಸರಿ ಕೆಲವು ಕುಟುಂಬಗಳಲ್ಲಿ ಒಬ್ಬರಿಗಿಂತ ಹೆಚ್ಚು ಜನ ದುಡಿಯುವರಿದ್ದರೂ ಸಹ ಅವರ ಆರ್ಥಿಕ ಮಟ್ಟ ಸುಧಾರಿಸಿಲ್ಲ. ಇದಕ್ಕೆ ಕಾರಣ ದುಡಿದುದನ್ನು ಕೂಡಿಸಬೇಕೆಂಬ ಅಲೋಚನೆ ಅವರಲ್ಲಿರಲಿಲ್ಲ. ಅಂದು ದುಡಿದದ್ದು ಅಂದಿನ ಆಹಾರಕ್ಕೆ ಬಳಸಿ ಉಳಿದ ಹಣವನ್ನು ಕುಡಿತಕ್ಕೆ ವ್ಯಯ ಮಾಡುವರು. ಅಷ್ಟೇ ಅಲ್ಲದೆ ದೇವರ ಬಗ್ಗೆ ಅಪಾರ ಭಕ್ತಿಯನ್ನು ಹೊಂದಿರುವ ಇವರು ವರ್ಷದುದ್ದಕ್ಕೂ ಬರುವ ಹಬ್ಬ ಹರಿದಿನಗಳನ್ನು ತಪ್ಪದೇ ಆಚರಿಸುವರು. ಎಷ್ಟು ತೊಂದರೆಯಿದ್ದರೂ, ಧಾರ್ಮಿಕ ಆಚರಣೆಗಳನ್ನು ನಿಲ್ಲಿಸುವುದಿಲ್ಲ. ಹಾಗಾಗಿ ಅವರು ದುಡಿದ ಹಣದಲ್ಲಿ ಬಹುತೇಕ ಪಾಲು ಇಂತಹ ಆಚರಣೆಗಳಿಗೆ ವ್ಯಯಗುತ್ತದೆ. ಹೀಗಿರುವಾಗ ಆರ್ಥಿಕ ಸುಧಾರಣೆ ಕಂಡುಬರಬೇಕಾದರೆ ತಾನು ದುಡಿದ ಹಣವನ್ನು ಹೇಗೆ ಬಳಸಬೇಕು ಎಂಬ ಸಾಮಾನ್ಯ ಜ್ಞಾನ ಅವನಲ್ಲಿರಬೇಕು. ಇವರು ಆರ್ಥಿಕ ಸ್ಥಿತಿ ಮಾತ್ರ ತುಂಬಾ ಕೆಳಮಟ್ಟದಲ್ಲಿದೆ. ಬೇರೆ ರೀತಿಯ ಕಸುಬುಗಳಿಗೆ ಹೊಂದಿಕೊಳ್ಳಬೇಕೆಂದರೆ ಬಂಡವಾಳದ ಕೊರತೆ ಎದ್ದು ಕಾಣುತ್ತದೆ. ಅಲೆಮಾರಿಗಳಾಗಿರುವುದರಿಂದ ಯಾರು ಆರ್ಥಿಕ ಭದ್ರತೆಯನ್ನು ನೀಡಲು ಮುಂದಾಗುವುದಿಲ್ಲ. ದುಡಿಮೆಗೆ ಸರಿಯಾದ ಪ್ರತಿಫಲ ಸಿಗದೇ ಇನ್ನು ಶೋಷಣೆಯ ಹಂತದಲ್ಲಿ ಅಪರಾಧಿಗಳು ಎಂದು ಪರಿಗಣಿಸುವರು. ಜೀವನ ಮಟ್ಟು ಸುಧಾರಿಸಲು ಸಾಧ್ಯವಾಗುತ್ತಿಲ್ಲ. ಉಳಿತಾಯ ಮಾಡದೇ ದುಂದು ವೆಚ್ಚ ಮಾಡಿ ಕುಟುಂಬದ ನಿರ್ವಹಣೆಯ ಕಡೆಗೆ ಹೆಚ್ಚು ಗಮನ ಕೊಡುತ್ತಿಲ್ಲ. ಕನಿಷ್ಠ ಶಿಕ್ಷಣದಿಂದ ವಂಚಿತರಾದ ಈ ಸಮುದಾಯವು ಆಧುನಿಕ ಸಂದರ್ಭದಲ್ಲಿ ತುಂಬಾ ತೊಂದರೆಯನ್ನು ಅನುಭವಿಸುತ್ತಿವೆ. ಯಾವುದೇ ಒಂದು ಸಮುದಾಯ ಸಮಾಜದ ಮುಖ್ಯವಾಹಿನಿಯ ಜೊತೆಗೆ ಮುಖಾಮುಖಿಯಾಗಿ ಸಾಮರ್ಥ್ಯವಾದ ಬದುಕನ್ನು ನಡೆಸಬೇಕಾದರೆ ಆರ್ಥಿಕ ಮಟ್ಟದಲ್ಲಿ ಸುಧಾರಣೆಯಾಗಬೇಕು.

ಕೂಲಿಯಲ್ಲಿ ತೊಡಗಿಸಿಕೊಂಡಿರುವ ಪುರುಷರ ಮತ್ತು ಮಹಿಳೆಯರ ವಿವರ

ಗ್ರಾಮಗಳ ಹೆಸರು	ಗಂಡು	ಹೆಣ್ಣು	ಒಟ್ಟು
ಹೊಸಪೇಟೆ	೧೮	೧೦	೨೮
ಕಾರಿಗನೂರು	೨೫	೧೮	೪೩
ಕಂಪ್ಲಿ	೬೦	೩೫	೯೫
ಒಟ್ಟು	೧೦೩	೬೩	೧೬೬

ಹಕ್ಕಿಪಿಕ್ಕಿಯರ ಪುರುಷರು ಮಾಡುವ ಕೆಲಸಗಳು

೧. ಕುರಿ ಕಾಯುವುದು (ಅವು ತಮ್ಮ ಸ್ವತಃ ಕುರಿಗಳಲ್ಲಿ ಬೇರೆಯವರ ಕುರಿಗಳನ್ನು ಕಾಯುವುದು)

೨. ಬೇಟೆಯನ್ನು ಹಿಡಿದು ಕೊಂಡು ಬರುವರು.

೩. ಕೂಲಿ ಕೆಲಸಗಳನ್ನು ಮಾಡುವರು.

೪. ಆಟೋರಿಕ್ಷವನ್ನು ಓಡಿಸುವುದು

೫. ಕಾವಲುಗಾರರಾಗಿರುವರು.

೬. ಸಾರಾಯಿ ಮಾರಾಟ ಮಾಡುವರು.

ಸ್ತ್ರೀಯರು ಮಾಡುವ ಕೆಲಸಗಳು

೧. ಮನೆಯಲ್ಲಿಯೇ ಇದ್ದು ಕುಟುಂಬ ನಿರ್ವಾಹಣೆ ಕೆಲಸದಲ್ಲಿ ಮತ್ತು ಮಕ್ಕಳ ಪಾಲನೆ ಪೋಷಣೆ ಮಾಡುವುದು.

೨. ಕೂಲಿ ಹಾಗೂ ಬೇರೆ ಮನೆಯವರ ಕೆಲಸ ಮಾಡುವುದು.

೩. ಸಾರಾಯಿ ಮಾರಾಟ ಮಾಡುವುದು, ಅದು ಮನೆಯಲ್ಲಿ.

ಮನೆಯಲ್ಲಿ ಹೆಣ್ಣು ಮಕ್ಕಳು ಒಂದು ಲೀಟರ್ ಸಾರಾಯಿಗೆ ೨೦೦ ರೂಪಾಯಿಯಂತೆ ಮಾರುವರು. ಮಾರುವುದಕ್ಕಿಂತ ಹೆಚ್ಚಾಗಿ ಸ್ವಂತ ತಾವೇ ಕುಡಿಯುವರು. ಈ ಜನರ ನಿವಾಸದ ಹತ್ತಿರವೇ ಒಂದು ಸಾರಾಯಿ ಅಂಗಡಿ ಇದೆ. ಇದು ಇವರ ಜೀವನಕ್ಕೆ ಅಡ್ಡಿಯಾಗಿದೆ. ಆರ್ಥಿಕ ಜೀವನ ಮಟ್ಟವನ್ನು ಸಬಲಗೊಳಿಸಲು ಸಾಧ್ಯವಿತ್ತು. ಅವರು ಮಾಡಿದ ಆ ದಿನದ ಕೂಲಿಯ ಮನೆಯ ಖರ್ಚಿಗಿಂತ ಸಾರಾಯಿ ಕುಡಿಯುವುದಕ್ಕೆ ಮೀಸಲಾಗಿದೆ.

"ಬುಡಕಟ್ಟುಗಳು ಅನೇಕ ಇಕ್ಕಟ್ಟುಗಳು ನಡುವೆಯೇ ಆರ್ಥಿಕವಾಗಿ ಪರಾವಲಂಬಿಗಳಾಗಿ ರೂಪಾಂತರಗೊಳ್ಳುತ್ತಿವೆ. ಕಾಡಿನ ಉತ್ಪಾದನಾ ರೀತಿನೀತಿಗಳು ನಾಡಿನ ಒಳಗೆ ಯಾರಿಗೆ ತಾನೇ ಬೇಕಿರುತ್ತದೆ. ಕೇವಲ ಕಳ್ಳದಂದೆಗಳಿಗೆ ಅರಣ್ಯ ಸಂಪತ್ತನ್ನು ಲೂಟಿ ಮಾಡಿ ನಾಗರಿಕ ಜಗತ್ತು ಅದನ್ನು ಬಳಸಿಕೊಳ್ಳುತ್ತಿದೆ. ಇವತ್ತು ಬುಡಕಟ್ಟು ಜನಾಂಗಗಳು ಅನಿವಾರ್ಯವಾಗಿ ವೃತ್ತಿಯೇ ಅಲ್ಲದೆ (ಎಂತೆಂತದೋ) ಆದರೆ ಬೇರೆ ಬೇರೆ ವೃತ್ತಿಗಳನ್ನು ಅನುಸರಿಸುತ್ತವೆ. ಅವುಗಳ ಬಡತನ, ಅನಾರೋಗ್ಯ ಶಿಕ್ಷಣ ಮತ್ತು ಉದ್ಯೋಗದ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯೇ ನಮ್ಮ ಯೋಜನೆಗಳಿಗೆ ಇಲ್ಲ. ಅವರನ್ನು ಕರೆ ತಂದು ನಗರಗಳ ಕೂಳಗೇರಿಗಳಲ್ಲಿ ರಸ್ತೆಯಿಂಚಿನಲ್ಲಿ ಎಸೆದು ಬೇಕಾದಾಗ ಬಳಸಿಕೊಂಡು

ತೋರಿಸಬೇಕಾದಾಗ ಅವರ ಮೇಲೆ ಒಂದಿಷ್ಟು ಸರ್ಕಾರಿ ಸೇವೆಯ ಬೆಳಕು ಚೆಲ್ಲಿ ಮರೆಯುವವರೇ ಹೆಚ್ಚು."[೨೩]

ಇನ್ನು ಹಕ್ಕಿಪಿಕ್ಕಿ ಸಮುದಾಯದ ಜನರು ಆರ್ಥಿಕ ಸ್ಥಿತಿಯಲ್ಲಿ ಪೂರ್ತಿಯಾಗಿ ಬದಲಾವಣೆ ಹೊಂದಿಲ್ಲ. ಯಾರು ಭೂಮಿಯನ್ನು ಹೊಂದಿಲ್ಲ, ಸ್ವಂತ ಉಳಿಮೆ ಎಂಬುವುದೇ ಇಲ್ಲಿನ ಜನರಿಗೆ ಗೊತ್ತಿಲ್ಲ ಈಗ ಸ್ವಲ್ಪ ಶೀಕ್ಷಣದ ಪ್ರಭಾವ ಹಾಗೂ ಬೇರೆ ಬೇರೆ ಸಮುದಾಯಗಳ ಪ್ರಭಾವ ಅವರ ಮೇಲೆ ಬೀಳುವುದರಿಂದ ಉತ್ತಮ ಸ್ಥಿತಿಯಲ್ಲಿ ಮುಂದುವರಿಯುತ್ತಿದ್ದಾರೆ.

೩. ರಾಜಕೀಯ ಸ್ಥಿತಿಗತಿ : ಪ್ರಜಾಪ್ರಭುತ್ವದ ಅಡಿಯಲ್ಲಿ ಜೀವಿಸುವ ಸರ್ಕಾರ ಮಾನವನ ಸಮೂಹದ ರಕ್ಷಣೆಯನ್ನು ಬಯುಸುವ ಸಾಮಾನ್ಯ ಬುಡಕಟ್ಟು ಸಮುದಾಯದ ಬಗ್ಗೆ ವಿಶೇಷವಾದ ರಾಜಕೀಯ ನಿಲುವುಗಳನ್ನು ೧೯೫೨ರಿಂದಲೇ ಪ್ರಾರಂಭಗೊಳಿಸಿದರು. ಅವುಗಳ ಸಂಪೂರ್ಣ ಬಳಕೆ ಇನ್ನೂ ಅಷ್ಟಾಗಿ ಆಗಿಲ್ಲ. ಇಲ್ಲಿ ಕ್ಷೇತ್ರಕಾರ್ಯದ ಮುಖಾಂತರ ಪರಿಗಣಿಸಿದರೆ ಗ್ರಾಮಪಂಚಾಯಿತಿ ಅಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯಿತ್ ಅಧ್ಯಕ್ಷರರಾಗಿರುವುದು ಇಲ್ಲ. ಕೇವಲ ಮತ ಚಲಾಯಿಸಲು ಮತದಾರರ ಪಟ್ಟಿಯಲ್ಲಿ ಇವರ ಹೆಸರನ್ನು ನೊಂದಾಯಿಸಿದ್ದಾರೆ. ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಇವರು ಹೊಂದಿರುವರು. ಆದರೆ ಸರ್ಕಾರದಿಂದ ಪಡೆಯುವ ಸೌಲಭ್ಯಗಳಿಂದ ವಂಚಿತರಾಗಿರುವರು. ಕಾಲೋನಿ ಹಾಗೂ ಗ್ರಾಮಗಳಲ್ಲಿ ಇರುವ ಸದಸ್ಯರು ಶಿಕ್ಷಣವನ್ನು ಪಡೆಯದೇ ಅನಕ್ಷರಸ್ಥರಾಗಿರುವುದೇ ಇದಕ್ಕೆ ಕಾರಣ. ಇವರಿಂದ ಸಕ್ರಿಯ ರಾಜಕೀಯದಲ್ಲಿ ಬೆಳವಣಿಗೆಯಲ್ಲಿ ಯಾರು ಬೆಳೆಯಲಿಲ್ಲ. ಇನ್ನು ಅಷ್ಟಾಗಿ ಬೆಳವಣಿಗೆ ಕಂಡಿಲ್ಲ. ಹಕ್ಕಿಪಿಕ್ಕಿಯವರ ಜೀವನ ವ್ಯವಸ್ಥೆಯಲ್ಲಿ ರಾಜಕೀಯ ಬೆಳವಣಿಗೆಯ ಫಲವನ್ನು ಕಾಣಲಿಲ್ಲ. ಸಂಘಟಿತವಾದ ಈ ಜನರಲ್ಲಿ ಬಿರುಕಿನ ಗುಂಪುಗಳಾಗಿ ಮಾರ್ಪಡಿಸಿ ತಮ್ಮ ಆಶಯಗಳನ್ನು ಈಡೇರಿಸಿಕೊಳ್ಳಲು ಸಹ ವಿಫಲರಾಗಿದ್ದರು. ರಾಜಕೀಯ ಪ್ರದೇಶದ ಹಕ್ಕು ಸಂವಿಧಾನದಿಂದ ದೊರೆಯುತ್ತಿದ್ದರು. ಸ್ಥಿತ್ಯಾಂತರ ಕಾಲೋನಿಯ ಜನರಿಗೆ ಇನ್ನು ಮೂಲಭೂತ ಸೌಲಭ್ಯಗಲನ್ನು ಒದಗಿಸುವಲ್ಲಿ ವಿಫಲರಾಗಿರುವುವು ಕಾಣಬಹುದಾಗಿದೆ.

೪. ಧಾರ್ಮಿಕ ಸ್ಥಿತಿಗತಿ : ಗ್ರಾಮ ಹಾಗೂ ಕಾಲೋನಿಯಲ್ಲಿ ಹಕ್ಕಿಪಿಕ್ಕಿ ಸಮುದಾಯವು ಬಹಳಷ್ಟು ಜನರಲ್ಲಿ ಹಬ್ಬಗಳು ಬದಲಾಗಿವೆ. ಇಂದು ಸರಳ ರೀತಿಯ ಹಬ್ಬಗಳು ಸಾಮಾನ್ಯವಾಗಿವೆ. ಹೆಚ್ಚಾಗಿ ಇವರು ಹೆಣ್ಣು ದೇವರನ್ನು ಪೂಜಿಸುವರು. ಪ್ರತ್ಯೇಕವಾಗಿ ದೇವಸ್ಥಾನವನ್ನು ನಿರ್ಮಿಸಿಕೊಂಡಿದ್ದಾರೆ. ಹಲವಾರು ರೀತಿಯ ಬದಲಾವಣೆಯನ್ನು ಮಾಡಿಕೊಂಡಿದ್ದಾರೆ. ಅಲ್ಲಿಯ ತಮ್ಮ ಸಮುದಾಯದ ಒಬ್ಬ ಹಿರಿಯರನ್ನು ಅವರುಗಳಲ್ಲಿಯೇ ಒಬ್ಬ ವ್ಯಕ್ತಿಯನ್ನುಯ ಪೂಜೆ ಮಾಡಲು ನೇಮಕ ಮಾಡಿಕೊಂಡಿರುತ್ತಾರೆ. ಹೆಚ್ಚಾಗಿ ಬಲಿಕೊಡುವುದು ಸಾಮಾನ್ಯ ಪೂಜೆಯ ಸಮಯದಲ್ಲಿ ಎರಡು ಮೂಳೆಗಳನ್ನು ತಂದು

ತಲೆಯನ್ನು ದೇವಿಯ ಮುಂದೆ ಇಡುವುದು, ಪದ್ಧತಿಯಾಗಿದೆ. ಮಾಂಸವನ್ನು ಕುಲದೇವತೆಯ ಕುಟುಂಬದವರಿಗೆ ಮಾತ್ರ ಸೀಮಿತ.

ಆಧುನಿಕತೆಯ ಬೆಳಕು ಈ ಕಾಲೋನಿ ಹಾಗೂ ಜನರ ಮೇಲೆ ಪ್ರಭಾವ ಬೀರಿದೆ. ಗಣೇಶ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಾರೆ. ಹಬ್ಬದಲ್ಲಿ ಎಲ್ಲರು ಸೇರ್ಪಡೆಯಾಗಿರುತ್ತಾರೆ. ಬಣ್ಣಬಣ್ಣದ ವಿದ್ಯುತ್ ದೀಪಾಲಂಕಾರಗಳು ಧ್ವನಿ ವರ್ಧಕಗಳು ಕಂಡುಬರುವವು. ಪ್ರತಿಯೊಂದು ಹಬ್ಬಕ್ಕೆ ಮೊರೆ ಹೋಗಿರುವುದನ್ನು ನಾವು ಇಲ್ಲಿ ಕಾಣುತ್ತೇವೆ. ಹೆಚ್ಚಾಗಿ ಫೋಟೋ ತೆಗೆದುಕೊಳ್ಳುವರು. ಸಾಮಾನ್ಯವಾಗಿ ಹಿಂದು ಹಬ್ಬಗಳಂತೆ ಹಲವಾರು ಹಬ್ಬಗಳು ಬೇರೆ ಬೇರೆ ಜನರು ಮಾಡುವಂತೆ ಮಾಡುತ್ತಾರೆ. ಇಲ್ಲಿಯ ಹಿರಿಯರು ಹೇಳುವಂತೆ ಇಂದು ನಮ್ಮ ಜನರ ಬಹಳ ಜಗಳದಿಂದ ಬೇರೆ ಬೇರೆ ಕುಟುಂಬಗಳನ್ನು ಕಟ್ಟಿಕೊಂಡಿರುವುದರಿಂದ ನಮ್ಮ ಕುಲದ ಹಬ್ಬ ಹರಿದಿನಗಳಲ್ಲಿ ಇಪ್ಪತ್ತು ವರ್ಷಗಳ ಹಿಂದೆ ಕಣ್ಮಾರೆಯಾಗಿವೆ. ಅವು ಇಂದು ಯಾವುದೂ ಇಲ್ಲ ಎಂದು ಹೇಳುವರು. ಅವರ ಅವರ ಮನೆಯಲ್ಲಿ ಅವರ ಕುಲಕ್ಕನುಗುಣವಾಗಿ ಹಬ್ಬ ಆಚರಿಸುವರು. ಇಂದು ಹೆಚ್ಚಾಗಿ ಹಣದ ಮುಗ್ಗಟ್ಟು ತಲೆದೂರುತ್ತಿದೆ. ಹಬ್ಬಗಳು ಆಚರಿಸಬೇಕೆನ್ನುವ ಆಸೆ ಇದ್ದರು ಕೂಡ ಮಾಡಲು ಅನುಕೂಲಗಳಲ್ದೆ ಇಂದು ಹಬ್ಬಗಳು ಮರೆತುಬಿಟ್ಟವು ಎಂದು ಹಿರಿಯರು ಹೇಳುವರು. ಈಗ ಅವರ ಮನೆಯಲ್ಲಿ ಇಷ್ಟ ಬಂದಾಗ ಹಣದ ಅನುಕೂಲಕ್ಕನುಗುಣವಾಗಿ ಕುಲ ದೇವರನ್ನು ಪೂಜಿಸುವರು. ಹೀಗೆ ಸಂಪ್ರದಾಯದ ಆಚರಣೆಗಳು ಈ ರೀತಿ ಬದಲಾಗಲು ಅನೇಕ ವಿಧವಾದ ಕಾರಣಗಳು ಇವೆ. ನಾಗರಿಕ ಜೊತೆಗೆ ಸ್ಪರ್ಧಿಸುವ ಬೆಳೆಯುತ್ತಿರುವುದರ ಪ್ರಭಾವ ಇಲ್ಲಿ ಮುಖ್ಯವಾಗಿ ಕಾಣಬಹುದು.

"ಅಂಬೇಡ್ಕರ್ ಒಬ್ಬ ಮಹಾಧಾರ್ಮಿಕ ವ್ಯಕ್ತಿಯಾಗಿದ್ದರು. ವೈಜ್ಞಾನಿಕ ವಸ್ತುನಿಷ್ಟತೆ ಅವರದಾಗಿತ್ತು. ಕಾಲಮಾರ್ಕ್ಸ್ ಸಿದ್ಧಾಂತದ ವರ್ಗ ಹೋರಾಟದ ಬಗ್ಗೆ ಅವರಿಗೆ ನಿಖರವಾದ ಪರಿಜ್ಞಾನವಿತ್ತು. "ನಿಮ್ಮ ದಾಸ್ಯಕ್ಕೆ ನೀವೇ ಕಾರಣ. ನೀವೇ ಅದನ್ನು ಕೊನೆಗಾಣಿಸಬೇಕು. ಯಾವುದೋ ಲೋಕದಿಂದ ದೇವರೇ ಅತಿಮಾನವನೋ ಬಂದು ವಿಮೋಚನೆಗೆ ನೆರವಾಗುತ್ತಾನೆಂದು ನಂಬಬೇಡಿ ಪವಿತ್ರ ಗ್ರಂಥ ನಿಷ್ಠ ನಿಮ್ಮನ್ನು ಜೀತ ದಾರಿದ್ರ್ಯಗಳಿಂದ ಪಾರು ಮಾಡುತ್ತವೆಂದು ತಿಳಿಯಬೇಡಿ, ಹಲವು ತಲೆಮಾರಿನಿಂದ ನಿಮ್ಮ ಹಿರಿಯರು ಅವುಗಳನ್ನು ನಂಬಿಕೊಂಡಿದ್ದರಲ್ಲವೇ ಅವರಿಗೆ ಸುಖ ಸಿಕ್ಕಿತೆ, ಸದ್ಯಕ್ಕೆ ವ್ರತ ನಿಯಮಗಳನ್ನು ಕಟ್ಟಿಟ್ಟು ಶಾಸನಾಧಿಕಾರ ಸಂಪಾದಿಸಲು ಸರ್ವತ್ಯಾಗಕ್ಕೂ ಸಿದ್ಧಾರಾಗಿ ಆಗ ಮಾತ್ರ ನಿಮ್ಮ ಹಸಿವು ನೀಗುತ್ತದೆ."[೨೪] ಎಂದು ಹೇಳುವರು. ಆದರೆ ಪ್ರಸ್ತುತ ಸಮಾಜದಲ್ಲಿ ಬುಡಕಟ್ಟು ಸಮುದಾಯಗಳು ಎನಿಸಿರುವ ಹಲವಾರು ಸಮುದಾಯದ ಜನರು ಇಂದಿನ ಆಧುನಿಕ ಸಮಾಜದಲ್ಲಿ ಸಮಾಜಿಕವಾಗಿ ಅತ್ಯಂತ ಹೀನಾಯ ಸ್ಥಿತಿಗೆ ಮತ್ತು ಅಸ್ಪೃಶ್ಯತೆಯ ಕರಾಳ ಜಗತ್ತಿಗೆ ದೂಡಲ್ಪಟ್ಟರು. ಇಂದಿಗೂ ಹಲವು ಸಮುದಾಯಗಳು ಕಟ್ಟುನಿಟ್ಟಾದ ಕೆಲವು ನಿಯಮ ಬದ್ಧಗಳಿಗೆ ಹಾಗೂ ನಿಕಷ್ಟ ಕೆಲಸಗಳನ್ನು ಮಾಡಲೇ

ಬೇಕಾದ ಅನಿವಾರ್ಯತೆ ಸ್ಪಷ್ಟವಾಗುವುದು. ಆದರೆ ಸಮಾಜದ ಶ್ರೇಣೀಕರಣದ ವ್ಯವಸ್ಥೆಯಲ್ಲಿ ಈ ಸಮುದಾಯಗಳನ್ನು ಕೀಳಾಗಿ ಕಾಣುವುದು ರೂಢಿಗತವಾಯಿತು. ಅವರು ಸೇವಿಸುವ ಆಹಾರ ಪದ್ಧತಿಯು ಕೂಡ ನಿಕೃಷ್ಟರಾಗಲು ಕಾರಣವಾಯಿತು.

"ಸಂಪ್ರಾದಾಯಿತ ಹಿಂದುಗಳು ತಿನ್ನಲು ಅಸಹ್ಯ ಪಟ್ಟುಕೊಳ್ಳುವ ಹಸುವಿನ, ಹಂದಿಯ, ಕುದುರೆಯ, ಇಲಿಯ, ಬೆಕ್ಕಿನ ಮತ್ತು ಕೊಳೆತ ಮಾಂಸವನ್ನು ಇವರು ತಿನ್ನುತ್ತಾರೆ."[೨೫]

ಕೆಳಸಮುದಾಯಗಳು ಎನಿಸುವ ಎಲ್ಲಾ ಸಮುದಾಯಕ್ಕೂ ಇದು ಅನ್ವಯವಾಗುವುದು. ಹೀಗೆ ಹಿಂದಿನಿಂದಲೂ ಇಂತಹ ಹಲವು ರೀತಿ ಶೋಚನೀಯ ಪರಿಸ್ಥಿತಿಗಳಿಗೆ ಅನಿವಾರ್ಯವಾಗಿ ಜೀವನ ಹೀಗೆ ಮುಂದುವರೆಯುತ್ತಲೇ ಇದೆ. ಹೀಗೆ ಹಕ್ಕಿಪಿಕ್ಕಿ ಸಮುದಾಯವಾಗಲಿ ಅಥವಾ ಇತರ ಕೆಳ ಸಮುದಾಯ ಜನರಾಗಲಿ ಕೈಗಾರೀಕರಣ ಔದ್ಯೋಗಿಕರಣ ಹಾಗೂ ಜಾಗತೀಕರಣದ ಒಟ್ಟು ಪ್ರಭಾವ ಸಮಾಜದ ಬದಲಾವಣೆಯಲ್ಲಿ ಅನೇಕ ರೀತಿಯಲ್ಲಿ ರೂಪಾಂತರಿಸಿದ್ದರು. ಸಮುದಾಯಗಳ ಮೇಲೆ ಇಂದಿಗೂ ಯಾವ ರೀತಿಯಲ್ಲಿ ಪ್ರಭಾವ ಬೀರಿವೆ. ಅವುಗಳನ್ನು ಅನಿವಾರ್ಯತೆಯಾಗಿ ಅವು ಹೀಗೆ ಅನುಭವಿಸುತ್ತಲೇ ಬಂದಿವೆ. ಇಂತಹ ಅನಿವಾರ್ಯತೆ ಕಾರಣವಾಗಿರುವ ಕೆಲವು ವಿಷಯಗಳನ್ನು ಪ್ರಸ್ತಾಪಿಸಲಾಗಿದೆ.

ಜಾತಿ : "ಜಾತಿ ಎಂಬ ಪದದ ಆಂಗ್ಲಾನುವಾದ "ಕಾಸ್ಟ್" ಎಂಬ ಪದವು ಸ್ಪ್ಯಾನಿಷ್ ಮತ್ತು ಪೋರ್ಚಗೀಸ್ ಮೂಲದ "ಕಾಸ್ಟಾ" ಎಂಬ ಪದದಿಂದ ಉತ್ಪನ್ನವಾಗಿದೆ. ಕಾಸ್ಟಾ ಎಂಬ ಪದಕ್ಕೆ ಜನಾಂಗ ಅಥವಾ ಬುಡಕಟ್ಟು ಎಂಬ ಅರ್ಥ ಕೊಡುವುದು ಈ ಶಬ್ದವು ೧೭ನೇ ಶತಮಾನದಲ್ಲಿ ಬಳಕೆಗೆ ಬಂದಿದ್ದು, ಜಾತಿಗಳು ಅನುವಂಶೀಯ ಸ್ವರೂಪದ ವರ್ಗಗಳಿದ್ದಂತೆ ಈ ಜಾತಿಗಳೆಂಬ ಸಮೂಹಗಳು ಯಾವಾಗಲೂ ತಮ್ಮ ವೈಶಿಷ್ಟತೆಯನ್ನು ಕಾಯ್ದುಕೊಳ್ಳುವ ಯತ್ನದಲ್ಲಿರುತ್ತವೆ."[೨೬]

ಸಮಾಜವು ಎಷ್ಟು ಬದಲಾವಣೆ ಹೊಂದಿದ್ದರು ಜಾತಿ ಎಂಬ ಪದವು ಬದಲಾವಣೆ ಹೊಂದಲು ಸಾಧ್ಯವಿಲ್ಲ. ಅದು ಮಾನವನ ಹುಟ್ಟನ್ನು ಗುರುತಿಸುವುದು ಸಮಾಜದಲ್ಲಿ ಅವನ ಶ್ರೇಣಿ ವ್ಯವಸ್ಥೆಯಲ್ಲಿ ಎಷ್ಟು ಉನ್ನತ ದರ್ಜೆಯಲ್ಲಿ ಸ್ಥಾನವನ್ನು ಹೊಂದಿದ್ದರು ಇಂತಹದೇ ಜಾತಿಯವನು ಎಂದು ಪರಿಗಣಿಸುವನು. ಹೀಗೆ ಹಕ್ಕಿ ಪಿಕ್ಕಿ ಸಮುದಾಯದಲ್ಲಿ ಹೆಚ್ಚಾಗಿ ಬುಡಕಟ್ಟು ಸಮುದಾಯ ಎನಿಸಿರುವ ಎಲ್ಲಾ ಸಮುದಾಯಗಳು ಜಾತಿ ಎಂಬುವುದನ್ನು ಹೆಚ್ಚು ಮಹತ್ವ ಕೊಡುವರು.

"ಜಾತಿ ಪದ್ಧತಿಯಿಂದಾಗಿ ವೃತಿ ವಿಭಾಗ ಅಥವಾ ಕೆಲಸಗಳ ನೇಮಕವು ಖಂಡಿತವಾಗಿ ವಿನಾಶಕಾರಿಯಾಗಿದೆ. ಉದ್ಯಮ ಎಂದು ನಿಂತ ನೀರಲ್ಲ. ಅದರಲ್ಲಿ ತೀವ್ರವಾದ ಹಾಗೂ ಆಕಸ್ಮಿಕವಲ್ಲದ ಬದಲಾವಣೆಗಳಾಗುತ್ತಲೇ ಇರುತ್ತವೆ. ಹೀಗೆ ಬದಲಾವಣೆಗಳಾಗುತ್ತಿರುವಾಗ ವ್ಯಕ್ತಿಗೆ ತಮ್ಮ ವೃತ್ತಿಯನ್ನು ಬದಲಾಯಿಸುವ ಸ್ವತಂತ್ರ ಅವಶ್ಯಕವಾಗುತ್ತದೆ. ಬದಲಾಗುವ ಪರಿಸ್ಥಿತಿಗೆ ಹೊಂದಿಕೊಳ್ಳುವ

ಸ್ವಾತಂತ್ರ್ಯವಿಲ್ಲದಿದ್ದರೆ ಅವನಿಗೆ ಜೀವನೋಪಯವೇ ಅಸಾಧ್ಯವಾಗುವುದು. ಜಾತಿ ಪದ್ಧತಿಯಲ್ಲಿ ಇಂತಹ ಸ್ವಾತಂತ್ರ್ಯವಿಲ್ಲ. ತನ್ನ ಜಾತಿಗೆ ಹೊಸದಾದ ವೃತ್ತಿಯನ್ನು ಕೈಗೊಳ್ಳುವ ಬದಲಾಗಿ ಉಪವಾದ ಬೀಳುವುದೇ ಗತಿಯಾಗಿದ್ದರೆ ಅದಕ್ಕೆ ಮೂಲಕ ಕಾರಣವೇ ಜಾತಿಯೇ ಆಗಿದೆ."[೨೭]

ಸಮುದಾಯಗಳಿಗೆ ಜಾತಿ ಇಷ್ಟೆಲ್ಲ ಅನ್ಯಾಯ ಮತ್ತು ಕೆಡಕಿಗೆ ಕಾರಣವಾಗಿದ್ದರು. ಬಹುಸಂಖ್ಯಾತರಾದ ಸಮುದಾಯಗಲು ಯಾಕೆ ದಂಗೆ ಎದ್ದಿಲ್ಲ ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುವ ಅದರೆ ಜಗತ್ತಿನ ಬೇರೆ ಬೇರೆ ಪ್ರದೇಶಗಳಲ್ಲಿ ಸಾಮಾಜಿಕ ಕ್ರಾಂತಿಗಳಾಗಿವೆ. ಆದರೆ ಭಾರತದಲ್ಲಿ ಸಮಾಜಿಕ ಕ್ರಾಂತಿಗಳು ನಡೆಯಲಿಲ್ಲ. ಈ ಒಂದು ಪ್ರಶ್ನೆಗೆ ಒಂದೇ ಉತ್ತರ ಅದೇನೆಂದರೆ ಚತುರ್ವರ್ಣದ ಪದ್ಧತಿಯು ಸಮುದಾಯಗಳ ಮೇಲೆ ಬಹುಗಾಢವಾದ ಪರಿಣಾಮ ಬೀರಿದೆ. ಶ್ರೇಷ್ಟರು ಕನಿಷ್ಟರು ನಾವು ಹೀಗೆ ಇರಬೇಕು ಬದಲಾದರೆ ಪಾಪ ಮಾಡಿದಂತೆ ಅವರಂತೆ ನಾವು ಇರಲು ಹೇಗೆ ಸಾಧ್ಯ. ದೈವತ್ವದ ಕಲ್ಪನೆ ಮೇಲುವರ್ಗಗಳ ಮೇಲೆ ಇರುವ ಗೌರವ ಹಾಗೂ ಭಯ ಹೀಗೆ ಸಮಾಜದಲ್ಲಿ ಸಮುದಾಯಗಳು ದಂಗೆ ಏಳಲಾರದಷ್ಟು ದುರ್ಬಲಗೊಳಿಸಲ್ಪಟ್ಟಿವೆ. ಎಲ್ಲಿಯವರೆಗೆ ಜಾತಿ ಮತ್ತು ಜಾತಿ ಪದ್ಧತಿಗೆ ಆಧಾರವಾಗಿರುವ ಪದ್ಧತಿ ಇರುತ್ತದೆ. ಅಲ್ಲಿಯವರೆಗೆ ಮುಕ್ತಿ ಇಲ್ಲ.

ಹಲವು ಸುಧಾರಕರು ಜಾತಿ ವ್ಯವಸ್ಥೆಯನ್ನು ವಿರೋಧಿಸಿ ಅದರಲ್ಲಿ ಬದಲಾವಣೆ ತರಲು ಹೊರಟ ಮಾಡಿರಬಹುದು. ಆದರೆ ಅಂಬೇಡ್ಕರರು ಹಾಗೆ ಜಾತಿಯನ್ನು ವೈಜ್ಞಾನಿಕವಾಗಿ ತರ್ಕಬದ್ಧವಾಗಿ ವಿಶ್ಲೇಷಿಸಿ ಮಂಡಿಸಿದವರಲ್ಲ ಎಂದು ಹೇಳಬಹುದು.

"ಅಸ್ಪೃಶ್ಯರು(ಕೆಳ ಸಮುದಾಯದವರು) ಹಿಂದುಗಳ ಮನೆಯಲ್ಲಿ ಸತ್ತ ಪ್ರಾಣಿಗಳನ್ನು ಕೊಂಡು ಹೋಗಿ ಚರ್ಮ ಸುಲಿಯುತ್ತಾರೆ ಎಂದರೆ ಅದು ಅವರಿಗೆ ಅನಿವಾರ್ಯ. ಅದನ್ನು ಅವರು ಅವಶ್ಯಕವಾಗಿ ಮಾಡಬೇಕಾಗಿದೆ. ಅದನ್ನು ಮಾಡುವುದಿಲ್ಲವೆಂದಾದರೆ ಅದಕ್ಕೆ ಅವರಿಗೆ ಶಿಕ್ಷೆಯಾಗುತ್ತದೆ ಮತ್ತು ಕಾನೂನಿನ ಪ್ರಕಾರ ದಂಡನೆಯಾಗುತ್ತದೆ." ಎಂಬ ಭಯ[೨೮] ಈ ಎಲ್ಲಾ ವಿಷಯವನ್ನು ಇಟ್ಟಿಕೊಂಡು ಹಾಗೂ ಕ್ಷೇತ್ರಕಾರ್ಯದಲ್ಲಿ ಕೆಲವು ಪ್ರಶ್ನಾವಳಿಗಳ ಮುಖಾಂತರ ಜಾತಿಯ ಬಗ್ಗೆ ಪ್ರಶ್ನಿಸಿದಾಗ ಅವರು ಹಕ್ಕಿಪಿಕ್ಕಿ ಸಮುದಾಯವು ಜನರು ಜಾತಿಯ ಬಗ್ಗೆ ಉತ್ತರಿಸಲು ಕೂಡ ಅವರು ಹಿಂಜರಿಯುತ್ತಾರೆ. ಅಂದರೆ ಜಾತಿ ಎಂಬುವುದು ಇಂದಿನ ಆಧುನಿಕ ಸಮಾಜದಲ್ಲಿ ಅವರ ಪ್ರಭಾವವನ್ನು ಇನ್ನು ಕಡಿಮೆ ಮಾಡಿಲ್ಲವೆಂದೆನಿಸುತ್ತದೆ.

೧. ಹಕ್ಕಿಪಿಕ್ಕಿಯರು ಬೇರೆ ಸಮುದಾಯಗಳಿಗಿಂತ ಅಂದರೆ ಮೇಲುವರ್ಗಗಳ ವಾಸಸ್ಥಳದಿಂದ ದೂರವಾಗಿ ಪ್ರತ್ಯೇಕ ಜಾಗದಲ್ಲಿ ವಾಸಿಸುವುದು.

೨. ಜಾತಿ ಎಂಬುವುದು ಇದು ಸಮುದಾಯದ ಬೆಳವಣಿಗೆಗೆ ಅಂಟಿಕೊಂಟಿರುವ ಒಂದು ರೋಗ ಎಂದು ಹೇಳಬಹುದು. ಇಲ್ಲಿ ಜಾತಿಯ ಒಂದು ಅನಿವಾರ್ಯತೆ ಹಾಗೂ ಅವರ ಮೇಲಿನ ಪ್ರಭಾವ ಕಡಿಮೆಯಾಗಬೇಕೆಂದರೆ ಅವರಲ್ಲಿ ಬೇರೆ ಬೇರೆ ಜಾತಿಗಳ ಜೊತೆ ಸಂಪರ್ಕ ಬೆಳೆಸಿಲ್ಲ, ಉದ್ಯೋಗದಲ್ಲಿ ಉನ್ನತ ಸ್ಥಿತಿಯಲ್ಲಿ ಇಲ್ಲ ಎಂದರೆ ಶಿಕ್ಷಣದ ಅಭಾವದಿಂದ ಎಂದು ಹೇಳಬಹುದು.

೩. ಇಂದಿಗೂ ಜಾತಿಯ ಒಂದು ವ್ಯವಸ್ಥೆಯಿಂದ ಹೊರಗೆ ಬಂದಿಲ್ಲ. ಇನ್ನು ಸ್ವಲ್ಪ ಜನ ಮಾತ್ರ ಶುದ್ಧವಾದ ಬಟ್ಟೆ ಧರಿಸುವುದಿಲ್ಲ. ಪಾದರಕ್ಷೆಗಳನ್ನು ಹಾಕಿಕೊಳ್ಳುವುದಿಲ್ಲ. ಹೀಗೆ ದಿನವಿಡೀ ಪೂರ್ತಿ ಮನೆಯಲ್ಲಿಯೇ ಇದ್ದು, ಸಾರಾಯಿ ಕುಡಿಯುತ್ತಿರುವುದನ್ನು ಇಲ್ಲಿ ಕಾಣಬಹುದು.

೪. ಗಂಡು ಹೆಣ್ಣುಗಳೆಂಬ ಬೇದವಿಲ್ಲದೆ ಕುಡಿಯುವರು. ಮೆಲ್ವರ್ಗದ ಸ್ತ್ರೀಯರಂತೆ ಯಾರು ಇಂದಿಗೂ ಈ ಸಮುದಾಯದಲ್ಲಿ ಉನ್ನತ ಶಿಕ್ಷಣವನ್ನು ಪಡೆದಿಲ್ಲ. ಇಂತಹ ಸಮುದಾಯದಿಂದ ಅವರು ಹೊರಗೆ ಬರಬೇಕೆಂದರೆ ಅವರಲ್ಲಿ ಪ್ರತ್ಯೇಕತೆಯ ಭಾವನೆಯನ್ನು ಮೊದಲು ಹೋಗಲಾಡಿಸಬೇಕು.

೫. ಇಂದಿಗೂ ಹಕ್ಕಿಪಿಕ್ಕಿ ಜನರು ಎಂದರೇ ಅಪರಾಧಿಗಳು ಎಂದು ಪರಿಗಣಿಸುವರು. ಹಾಗೂ ಎಲ್ಲಾದರೂ ಕಳ್ಳತನವಾದರೆ, ದರೋಡೆಯಾದರೆ ಮೊದಲು ಬಂಧಿಸುವುದೇ ಈ ಜನರನ್ನು

೬. ಜಾತಿಯಿಂದ ಎಷ್ಟು ಜನ ಇಂದಿಗೂ ಇಂತಹ ಜನವನ್ನು ಹತ್ತಿರಬರಲು ಅವಕಾಶ ಕಲ್ಪಿಸುವುದಿಲ್ಲ. ಹಾಗೂ ಮುಟ್ಟಲು ಕೂಡ ಅರ್ಹರೆಂದು ಭಾವಿಸುವರು.

೭. ಹಕ್ಕಿಪಿಕ್ಕಿ ಸಮುದಾಯದಲ್ಲಿ ಅತಿಮುಖ್ಯವಾಗಿ ಗಮನಿಸುವ ವಿಷಯವೆಂದರೆ ತಮ್ಮ ಜಾತಿಯ ಜನರನ್ನು ಪರಿಗಣಿಸಿ ಬೇರೆ ಜಾತಿಯ ಜನರನ್ನು ಅವರು ಬೇರೆ ದೃಷ್ಟಿಯಿಂದ ಅಂದರೆ ಒಂದು ರೀತಿಯ ಭಯದ ಕಲ್ಪನೆಯಿಂದ ಅನುಮಾನ ಪೂರ್ವಕವಾಗಿ ಅವರನ್ನು ಗುರುತಿಸುವರು. ಅಷ್ಟು ಬೇಗ ತಮ್ಮಲಿದ್ದ ರಹಸ್ಯವನ್ನು ಬಿಟ್ಟುಕೊಡುವುದಿಲ್ಲ. ಬೇರೆ ಜಾತಿಯವರನ್ನು ತಮ್ಮ ಮನೆಯಲ್ಲಿ ಹಾಗೂ ತಮ್ಮ ಕಾಲೋನಿಯಲ್ಲಿ ಬರಲು ಅವಕಾಶ ಕೊಡುವುದಿಲ್ಲ.

ಜಾತಿ ಪದ್ಧತಿ ನಿರ್ಮಿಸಿದ ಏಣಿಶ್ರೇಣೀಯಲ್ಲಿ ಕೆಲವು ಜಾತಿಗಳನ್ನು ಬಿಟ್ಟರೆ ಉಳಿದೆಲ್ಲ ಜಾತಿಗೆ ಏನಾದರೊಂದು ಸೊಂಕು ಮಲಿನತೆ, ಕೀಳರಿಮೆ ತಗಲಿಕೊಂಡಿವೆ. ಒಂದು ಜಾತಿ ಯಾವ ಸ್ಥಾನದಲ್ಲಿ ನಿಂತರೂ ಅವರ ಮೇಲೆ ತುಳಿವ ಕೆಲವು ಜಾತಿಗಳು ಕೆಳಗೆ ತುಳಸಿಕೊಳ್ಳುವ ಜಾತಿಗಳು ಇವೆ ಎಂದು ಇಂದಿಗೂ ಕೆಳಜಾತಿಯಲ್ಲಿ ಇವರು ಸಮುದಾಯಗಳು ಹಲವು ರೀತಿಯ ಅನಿವಾರ್ಯತೆಯಲ್ಲಿ ಜೀವನ ಸಾಗಿಸುತ್ತಿವೆ.

ಬಡತನ : ಪ್ರಪಂಚದಲ್ಲಿ ಭಾರತವು ಜನಸಂಖ್ಯೆಯಲ್ಲಿ ಎರಡನೇ ಸ್ಥಾನ ಹೊಂದಿರುವುದು. ಆದರೆ ಬಡತನವನ್ನು ಮೊದಲನೆ ಸ್ಥಾನದಲ್ಲಿ ಹೊಂದಿದೆ. ಇದಕ್ಕೆ ಮುಖ್ಯ ಕಾರಣವೇ ಆರ್ಥಿಕತೆ ಆರ್ಥಿಕ

ವ್ಯವಸ್ಥೆಯಲ್ಲಿ ಸಂಭವಿಸುವ ಕೆಲವು ಮುಗ್ಗಟ್ಟುಗಳು ಯಾವ ದೇಶಗಳು ಆರ್ಥಿಕೆಯಲ್ಲಿ ಸಬಲವಾಗಿರುವುವು. ಅವು ಶ್ರೀಮಂತ ರಾಷ್ಟ್ರಗಳಾಗಿವೆ. ಯಾವ ದೇಶಗಳು ಆರ್ಥಿಕತೆಯಲ್ಲಿ ವಿಫಲವಾಗಿರುವುವು, ಅವು ಬಡವ ರಾಷ್ಟ್ರಗಳಾಗಿವೆ.

ನಮ್ಮ ಸಮಾಜದಲ್ಲಿರುವ ಜಾತಿಪದ್ಧತಿಗಳು ಅವಿಭಕ್ತ ಕುಟುಂಬ ಬಾಲ್ಯವಿವಾಹ, ಅಸ್ಪೃಶ್ಯತೆ ಇವುಗಳು ಸಹ ನಮ್ಮ ಜನಗಳ ಬಡತನಕ್ಕೆ ಕಾರಣಗಳಾಗಿವೆ. ಅಲ್ಲದೇ ಈ ಜನಗಳಲ್ಲಿರುವ ಮೂಢನಂಬಿಕೆಯು ಅವರ ಬಡತನಕ್ಕೆ ಕಾರಣ. ಗ್ರಾಮಗಳಲ್ಲಿ ಸಾಧಾರಣವಾಗಿ "ಹುಟ್ಟಿಸಿದ ದೇವರು ಹುಲ್ಲು ಮೇಯಿಸಿಯ್ಯಾನೆ" ಎಂಬ ನಂಬಿಕೆಯು ಬೇರೂರಿ ನಿಂತಿದೆ. ಅಂತು ಕಾರಣಗಳು ಏನೇ ಇರಲಿ ಬಡತನವನ್ನು ನಮ್ಮ ಜನಗಳ ಬೆನ್ನು ಹತ್ತಿ ಬಂದಿರುವ ಬೇತಾಳವೆಂದು ನಿಸ್ಸಂಶಯವಾಗಿ ಹೇಳಬಹುದು. ಹೀಗೆ ಬಡತನದಲ್ಲಿ ತೊಂದರೆ ಪಡುತ್ತಿರುವ ಜನರು ಯಾವ ಕೆಲಸ ಮಾಡಬೇಕಾದರೂ ಸಾಲವನ್ನು ಕೊಡುವುದು ಎಷ್ಟೂ ಜನ ಸಾಲದಲ್ಲಿ ಹುಟ್ಟಿ ಸಾಲದಲ್ಲಿ ಬೆಳೆದು ಸಾಲದಲ್ಲಿಯೇ ಸಾಯುತ್ತಿರುವುದು ಸಾಧಾರಣವಾದ ವಿಷಯ. ಆದರೆ ಇವರು ಸಾಲವಾಗಿ ಪಡೆದ ಹಣವನ್ನು ಆದಾಯ ಬರುವ ಉಪಯೋಗವಾಗುವ ರೀತಿಯಲ್ಲಿ ವಿನಿಯೋಗಿಸದೆ ವ್ಯರ್ಥವಾಗಿ ದುಂದು ಖರ್ಚು ಮಾಡುವರು. ಸಾಧಾರಣವಾಗಿ ಜನರು ತಮ್ಮ ಸಂಸಾರಗಳಿಗೆ ಮಿತವಾಗಿ ಖರ್ಚು ಮಾಡುತ್ತಿದ್ದರು. ಮದುವೆ, ಉತ್ಸವ, ಹಬ್ಬ ಮತ್ತು ಸಾವು ಮುಂತಾದ ವಿಶೇಷ ಸಂದರ್ಭಗಳಲ್ಲಿಯೇ ಯೋಗ್ಯತೆ ಮೀರಿ ಖರ್ಚು ಮಾಡಲು ಯತ್ನಿಸುತ್ತಾರೆ. ನಮ್ಮ ಸಮಾಜದಲ್ಲಿ ಈ ವಿಶೇಷ ಸಂದರ್ಭಗಳಲ್ಲಿ ಹಣ ಖರ್ಚು ಮಾಡಿದಷ್ಟು ತಮಗೆ ಗೌರವ ಸಿಗುವುದು ಎಂಬ ತಪ್ಪು ಭಾವನೆ ಅವರಲ್ಲಿರುವುದು. ಪೂರ್ತಿ ತಮ್ಮ ದುಡಿಮೆಯನ್ನು ದೇವರಿಗರ್ಪಿಸುವ ಮುಡಿಪಿನಂತೆ ವ್ಯವಹಾರಕ್ಕಾಗಿ ಒಪ್ಪಿಸುತ್ತಿರುವುದು. ಬಹಳ ಶೋಚನೀಯವಾದ ವಿಷಯ. ಇದರಿಂದ ದುಂದು ವೆಚ್ಚವೆಂಭುವುದು ಹೆಚ್ಚಾಗಿರುವುದರಿಂದ ಹಕ್ಕಿಪಿಕ್ಕಿ ಸಮುದಾಯದವರಲ್ಲಿ ಅವರ ಜೀವನ ಕ್ರಮದಲ್ಲಿ ಅನೇಕ ಬದಲಾವಣೆಗಳು ಇಂದು ಹೆಚ್ಚುತ್ತಿರುವ ಖರ್ಚಿಗೆ ತಕ್ಕ ವರಮಾನವಿಲ್ಲದೆ ಸಾಲಗಾರರ ಬಲೆಗೆ ಬೀಳುತ್ತಿದ್ದಾರೆ. ಇದರಿಂದ ಬಡತನ ಎಂಬುವುದು ಇಂದು ಪ್ರಸ್ತುತ ಸಮಾಜದಲ್ಲಿ ಜೀವಂತವಾಗಿದೆ. ಇದನ್ನು ಎಲ್ಲ ಸಮಾಜಶಾಸ್ತ್ರಜ್ಞರು ಅನುಮೋದಿಸುತ್ತಾರೆ. ಚರಿತ್ರೆಯ ಹಲವು ರೂಪಾಂತರಗಳನ್ನು ಅಧ್ಯಯನ ಮಾಡಿದ ಭಾಗವತ ಶರಣ ಉಪಾಧ್ಯಾಯ "ಗತಕಾಲದಲ್ಲಿ ಸ್ಪಷ್ಟವಾದ ಆರ್ಥಿಕ ಕಾರಣಗಳೇ ಸಾಮಾಜಿಕ ವ್ಯವಸ್ಥೆಯನ್ನು ಹುಟ್ಟು ಹಾಕಿದವು ಎಂಬುವುದರಲ್ಲಿ ಸಂದೇಹವಿಲ್ಲ ಎನ್ನುತ್ತಾರೆ."[೨೯] ಈ ರೀತಿಯ ಕಾರಣಗಳಿಂದ ಸಮುದಾಯದ ಜೀವನ ವಿಧಾನದ ಬೆಳವಣಿಗೆಗೆ ಅಂಶಗಳು ಕಾರಣವಾಗುತ್ತವೆ.

ನಿರುದ್ಯೋಗ : ಭಾರತದ ಆರ್ಥಿಕತೆಗೆ ಕುತ್ತಾಗಿ ಪರಿಣಮಿಸುವ ಪ್ರಗತಿಗೆ ಅಡ್ಡವಾಗಿರುವುದು ನಿರುದ್ಯೋಗ ಮೊದಲೇ ಹೇಳಿದಂತೆ ಹಕ್ಕಿಪಿಕ್ಕಿ ಸಮುದಾಯವು ಅಲೆಮಾರಿ ಸಮುದಾಯವಾಗಿದ್ದು, ಇದು ಒಂದು

ಬಗೆಯ ವಿಘಟಿತ ಸಮಾಜ. ಒಂದು ಕಾಲಘಟ್ಟದಲ್ಲಿ ಹಕ್ಕಿಪಿಕ್ಕಿ ಸಮುದಾಯವು ಏಕ ಸ್ವರೂಪದಾಗಿರಬಹುದು. ಆದರೆ ಕಾಲಾನಂತರದಲ್ಲಿ ತಮ್ಮ ಅಲೆಮಾರಿತನದಿಂದ ಮತ್ತು ಭಿನ್ನ ಸಮಾಜಕಾರ್ಥಿಕ ಪ್ರಭಾವಗಳಿಂದ ಮತ್ತು ಹಲವು ಸಂದರ್ಭಗಳ ಅನಿವಾರ್ಯತೆಯ ಕಾರಣಗಳಿಗಾಗಿ ಹಲವು ಅನೇಕ ಪಂಗಡಗಳು ರೂಪುಗೊಂಡವು. ಅವು ತಮ್ಮ ಜೀವನ ನಿರ್ವಹಣೆಯಲ್ಲಿ ತಮ್ಮ ಜೀವನ ಉಪಾಯಕ್ಕೆ ಸೀಮಿತಪಡಿಸಿ ತಮ್ಮಗಿಷ್ಟಬಂದ ಸ್ಥಳದಲ್ಲಿ ನೆಲಸಿ ಅಲ್ಲಿ ದೊರೆತಿದ್ದ ಆಹಾರಗಳನ್ನು ಸೇವಿಸುತ್ತಾ ಬೇಟೆಯನ್ನು ಪ್ರಮುಖ ವೃತ್ತಿಯನ್ನಾಗಿ ಮಾಡಕೊಂಡಿರುವರು. ಆದರೆ ಅಲ್ಲಿ ನಿರುದ್ಯೋಗ ಎಂಬ ಸಮಸ್ಯೆ ಕಾಣುತ್ತಿರಲಿಲ್ಲ. ಎಂದು ಸಮುದಾಯಗಳು ಭೂಮಿಯ ಮೇಲೆ ಪ್ರತ್ಯೇಕವಾಗಿ ಜೀವಿಸಲು ಪ್ರಾರಂಭಿಸಿದವು. ಅಂದಿನಿಂದಲೇ ಅವು ದುಡಿಯಲೇಬೇಕು ಎಂಬ ಅನಿವಾರ್ಯ. ಬೇಟೆಯ ಜೊತೆಗೆ ಕೃಷಿ, ಕೂಲಿ, ವ್ಯಾಪಾರ, ಜೀತ ಮಾಡುವುದು. ಹೀಗೆ ಬೇರೆ ಬೇರೆ ರೀತಿಯಲ್ಲಿ ಉದ್ಯೋಗ ವಿಭಜಿಸಲ್ಪಟ್ಟಿದ್ದು, ಇವೆಲ್ಲಾ ಉದ್ಯೋಗಗಳು ಅವರಿಗೆ ಅನುಕೂಲವಾಗಿರುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಆಯಾ ಸಮುದಾಯಗಳಿಗೆ ಜಾತಿಯ ಅನುಗುಣವಾದ ವೃತ್ತಿಗಳು ನಾಶವಾಗಬೇಕು. ಅದರ ಬದಲಾಗಿ ಹೊಸ ಉದ್ಯೋಗಗಳು ಸೃಷ್ಟಿಯಾಗಬೇಕು. ಇಲ್ಲದಿದ್ದರೆ ಇಂದು ಆಧುನಿಕ ಸಮಾಜದಲ್ಲಿ ಜೀವಿಸುತ್ತಿರುವ ಸಮುದಾಯಗಳು ಅನಿವಾರ್ಯವಾಗಿ ನಿರುದ್ಯೋಗದ ಸಮಸ್ಯೆಯನ್ನು ಎದುರಿಸುವರು.

ಒಬ್ಬ ವ್ಯಕ್ತಿ ನಿರುದ್ಯೋಗಿಯಾದರೆ ಅವನಿಗೆ ದುಡಿಮೆ ಇಲ್ಲವಾಗಿ ಆದಾಯ ಗಳಿಕೆ ತಪ್ಪಿ ಹೋಗಿ ಜೀವನ ನಿರ್ವಹಣೆಯ ಮಾರ್ಗೋಪಾಯವೇ ಇಲ್ಲದಂತಾಗುತ್ತದೆ. ಪರಿಣಾಮವಾಗಿ ಅವನು ದಟ್ಟ ದಾರಿದ್ರ್ಯದಲ್ಲಿ ಬಿದ್ದು ತನ್ನ ಜೀವನ ಸಾಗಿಸಲು ಪರಾವಲಂಬಿಯಾಗಬೇಕಾಗುತ್ತದೆ. ಒಂದು ಕುಟುಂಬದಲ್ಲಿ ಹಲವಾರು ಜನರಿದ್ದು ಒಬ್ಬ ಮಾತ್ರ ಉದ್ಯೋಗಿಯಾಗಿದ್ದರೆ, ಉಳಿದವರು ಅವನನ್ನು ಆಶ್ರಯಿಸಬೇಕಾಗುವುದು. ಆಗ ಗಳಿಸಿದ ಆದಾಯವು ಎಲ್ಲ ಜನರಲ್ಲೂ ಹಂಚಿ ಹೋಗುತ್ತದೆ. ಆದರೆ ಇಂತಹ ಸಮಸ್ಯೆ ಕಾಣುವುದು ಹೆಚ್ಚಾಗಿ ಕೆಳ ಸಮುದಾಯಗಳಲ್ಲಿ. ಹಕ್ಕಿಪಿಕ್ಕಿಯಂತಹ ಸಮುದಾಯಗಳು ಇಂದಿಗೂ ಅಷ್ಟಾಗಿ ಉದ್ಯೋಗಿಗಳಾಗಿ ಮೇಲುದರ್ಜೆಯಲ್ಲಿ ಕಂಡುಬರಲಿಲ್ಲ. ಈ ಒಂದು ಸಮಸ್ಯೆ ಇವರಿಂದ ದೂರವಾಗಬೇಕಾದರೆ ಕುಟುಂಬದ ಎಲ್ಲಾ ಸದಸ್ಯರು ಉದ್ಯೋಗಿಗಳಾಗಿದ್ದು, ಪರಾವಲಂಬನೆವಿಲ್ಲದಿದ್ದರೆ ಎಲ್ಲರೂ ಹೆಚ್ಚು ಆದಾಯವಂತರಾಗಿ ಉತ್ತಮ ಮಟ್ಟದ ಜೀವನ ಸಾಗಿಸಲು ಸಾಧ್ಯವಾಗುತ್ತದೆ.

ಶೈಕ್ಷಣಿಕ : ಮಾನವರಲ್ಲಿ ವಿಶೇಷವಾದ ವಿವೇಚನಾ ಶಕ್ತಿ ಆಲೋಚನಾಶಕ್ತಿ ಉಹಾಶಕ್ತಿ ಇರುವುದರಿಂದ ಅವರು ಸಮಾಜದಲ್ಲಿ ಅಗತ್ಯವಾದ ಬದಲಾವಣೆಗಳನ್ನು ತರಬಲ್ಲರು. ಸಮಾಜವು ಸಹ ವ್ಯಕ್ತಿಗೆ ಉತ್ತಮ ಸನ್ನಿವೇಶ ಸೌಲಭ್ಯಗಳನ್ನು ಒದಗಿಸುವುದು ಇವುಗಳಿಂದಲೇ ಮಾನವರು ಪ್ರತಿ ಸಂದರ್ಭದಲ್ಲಿ ವಿವಿಧ ಅನುಭವಗಳನ್ನು ಪಡೆಯುವರು. ಶಿಕ್ಷಣವು ಈ ಸಾಮಾಜಿಕ ಜೀವನದ ಬೆಳವಣಿಗೆಗೆ ಕಾರಣವಾಗಿರುವುದು.

ಶಿಕ್ಷಣ ಭಾರತದಂತಹ ದೇಶದಲ್ಲಿ ಮೇಲ್ವರ್ಗಗಳ ಅಥವಾ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವವರ ಸ್ವತಾಗಿಯೇ ಉಳಿದುಬಿಟ್ಟಿದೆ. ಇವತ್ತು ಉನ್ನತ ಶಿಕ್ಷಣ ಕೇವಲ ಶ್ರೀಮಂತ ವರ್ಗಗಳಿಗೆ ಮೀಸಲು ಎಂಬ ಸ್ಥಿತಿ ನಿರ್ಮಾಣವಾಗಿದೆ.

ಸಮಾಜ ಶಾಸ್ತ್ರಜ್ಞರು ಅಭಿಪ್ರಾಯಪಡುವಂತೆ ಭಾರತವು ಹಲವು ರಾಷ್ಟ್ರಗಳ ಸಾಲಿನಲ್ಲಿ ಪ್ರಮುಖ ಸ್ಥಾನದಲ್ಲಿದೆಯೆಂದು ಅಭಿಪ್ರಾಯಪಡುತ್ತಾರೆ. ಆದರೆ ಇಂದು ಪ್ರಸ್ತುತ ಸಮಾಜದಲ್ಲಿ ವಾಸ್ತವ ಸ್ಥಿತಿ ಭಿನ್ನವಾಗಿರುವುದನ್ನು ಗುರುತಿಸಬಹುದು. ಏಕೆಂದರೆ ನಮ್ಮ ದೇಶದಲ್ಲಿರುವಷ್ಟು ಅನಕ್ಷರಸ್ಥರು, ಅಜ್ಞಾನಿಗಳು ದೈವಭಕ್ತರು, ಸಂಪ್ರದಾಯಸ್ಥರು ಬೇರಾವ ರಾಷ್ಟ್ರದಲ್ಲಿಯೂ ಕಂಡುಬರುವುದಿಲ್ಲ. ಏಕೆಂದರೆ ಕೆಳಜಾತಿಯ ಸಮುದಾಯಗಳು ಶಿಕ್ಷಣದ ಒಂದು ನಿಟ್ಟಿನಲ್ಲಿ ಹಲವು ರೀತಿಯಲ್ಲಿ ಶತಮಾನಗಳಿಂದ ಸವರ್ಣಿಯರಿಂದ ಅನುಭವಿಸಿದ ದಂತ ಕಥೆಗಳು ಇಂದಿಗೂ ದಲಿತ ಕಥೆಗಳಾಗಿ ಪರಿಗಣಿಸಿವೆ ಎಂದು ಹೇಳಬಹುದು. ಸಮಾಜದಲ್ಲಿ ಶಿಕ್ಷಣ ಎಂತಹದಿರಬೇಕೆಂದರೆ ಸಮಾಜದಲ್ಲಿರುವ ಅನಿಷ್ಟ ಪದ್ಧತಿಗಳನ್ನು ನಿರ್ಮೂಲನ ಮಾಡುವಂತಹ ಶಿಕ್ಷಣ ಕೊಡಬೇಕು

ಯಾವ ಸಮುದಾಯವು ಕೇವಲ ಅನಿಶ್ಚಿತ ಮತ್ತು ಅವಲಂಬಿತ ಆರ್ಥಿಕ ಮೂಲಗಳನ್ನು ನೆಚ್ಚಿಕೊಂಡಿರುತ್ತದೆಯೇ ಆ ಸಮುದಾಯವು ಸಾಮಾಜಿವಾಗಿ ಮತ್ತು ಶೈಕ್ಷಣಿಕವಾಗಿ ಯಾವತ್ತು ಹಿನ್ನಡೆಯನ್ನು ಅನುಭವಿಸುತ್ತಲೇ ಇರುತ್ತದೆ. ಇಂದಿಗೂ ಹಕ್ಕಿಪಿಕ್ಕಿ ಸಮುದಾಯವು ಶಿಕ್ಷಣದಲ್ಲಿ ಅಷ್ಟಾಗಿ ಮುಂದುವರೆಯದೇ ಅನಿವಾರ್ಯವಾಗಿ ದುಡಿಯಲೇ ಬೇಕು.

ಅನಿವಾರ್ಯವಾಗಿ ದುಡಿಯಲೇಬೇಕು. ದಿನನಿತ್ಯ ಕೂಲಿಯಲ್ಲಿ ತರುವ ಹಣ ಅವರ ಬಟ್ಟೆ ಹೊಟ್ಟೆಗಷ್ಟೇ ಸೀಮಿತವಾಗುವುದು ಮುಂದು ಇತರ ಖರ್ಚಿಗೆ ಹಣ ಉಳಿಯುವುದಿಲ್ಲ. ನಿತ್ಯ ದುಡಿಯುವುದೇ ಅವರ ಕಾರ್ಯ ಹಕ್ಕಪಿಕ್ಕಿಯರು ಆರ್ಥಿಕವಾಗಿ ಉಳಿಗಮಾನ್ಯ ವ್ಯವಸ್ಥೆಯನ್ನೇ ಅವಲಂಬಿಸುತ್ತಿದ್ದಾರೆ. ಈ ಕಾರಣದಿಂದಾಗಿಯೇ ಆರ್ಥಿಕವಾಗಿ ಹಿನ್ನಡೆ ಅನುಭವಿಸುವುದರ ಜೊತೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ರಂಗಗಳಲ್ಲಿಯೂ ಶೋಚನೀಯವಾಗಿ ಹಿಂದುಳಿದಿದ್ದಾರೆ. ಇವರನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಸಬಲೀಕರಿಸಲು ಸಾಧ್ಯವಿಲ್ಲ. ಅದರಲ್ಲೂ ಶೈಕ್ಷಣಿಕವಾಗಿ ಸಬಲಗೊಳ್ಳುವ ಯಾವ ಸಮುದಾಯವು ವರ್ತಮಾನವನ್ನು ಎದುರಿಸಿ ನಿಲ್ಲಲು ಸಾಧ್ಯವೂ ಇಲ್ಲ. ಈ ಕಾರಣದಿಂದ ಹಕ್ಕಿಪಿಕ್ಕಿ ಸಮುದಾಯವನ್ನು ಆರ್ಥಿಕವಾಗಿ ಸಬಲಗೊಳಿಸಿದರೆ ಮಾತ್ರ ಅದು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಸಬಲಗೊಳ್ಳಲು ಸಾಧ್ಯವಾಗುತ್ತದೆ.

ಅಡಿಟಿಪ್ಪಣಿ

೧. ಎ.ಎಸ್.ಪ್ರಭಾಕರ, **ಆದಿವಾಸಿ ಆಖ್ಯಾನ**, ೨೦೦೬, ಪು.೪೩೩

೨. ಅದೇ, ಪು.೪೮೪

೩. ಮೊಗಳ್ಳಿ ಗಣೇಶ, **ಶತಮಾನ**, ೨೦೦೦, ಪು.೩೪

೪. ಎಚ್.ಭೀಮಳ್ಳಿ, **ಸಮಾಶಾಸ್ತ್ರ**, ೧೯೮೭, ಪು.೧೨೮

೫. ಅದೇ,

೬. ಎಚ್.ಜೆ.ಲಕ್ಕಪ್ಪಗೌಡ **ಕರ್ನಾಟಕ ಬುಡಕಟ್ಟು**, ಸಂ.೨, ಪು.೨೩೦

೭. ಎ.ಎಸ್.ಪ್ರಭಾಕರ, **ಆದಿವಾಸಿ ಆಖ್ಯಾನ**, ೨೦೦೬, ಪು.೪೨೩

೮. ಅದೇ, ಪು.೪೨೪

೯. ಎ.ಎಸ್.ಪ್ರಭಾಕರ, **ಬುಡಕಟ್ಟು ಅಧ್ಯಯನ**, ಸಂ.೩, ೨೦೦೫, ಪು.೧೧೪

೧೦. ಆರ್.ಎಸ್.ಶರ್ಮ, **ಪ್ರಾಚೀನ ಭಾರತದಲ್ಲಿ ಶೂದ್ರರು**, ೨೦೦೪, ಪು.೧೧೦

೧೧. ಫೆಡರಿಕ್ ಎಂಗೆಲ್ಸ್, **ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ**, ಪು.೩೩

೧೨. ಎ.ಎಸ್.ಪ್ರಭಾಕರ, ಕರ್ನಾಟಕದ ಡೊಂಬರು, ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ೨೦೦೬, ಪು.೩೫

೧೩. ನಾಗೇಶ ಎಚ್.ವಿ., **ಭಾರತೀಯ ಗ್ರಾಮ**, ೧೯೮೬, ಪು.೧೮

೧೪. ಎ.ಎಸ್.ಪ್ರಭಾಕರ, **ಬುಡಕಟ್ಟು ಬದುಕಿನ ಸಿತ್ಯಂತರಗಳು**, ೨೦೦೦, ಪು.೯

೧೫. ಎಂ.ಎನ್.ಶ್ರೀನಿವಾಸ, **ಸೋಷಿಯಲ್ ಮೂಮೆಂಟ್ ಆ್ಯಂಡ್ ಸೋಷಿಯಲ್ ಚೆಂಜ್**, ಪು.೨೦೬

೧೬. ಕಾಳೇಗೌಡ ನಾಗವಾರ, **ಗಿರಿಜನ ಸಂಸ್ಕೃತಿ**, ೨೦೦೦, ಪು.೪

೧೭. ಅದೇ, ಪು.೧೨

೧೮. ಅದೇ, ಪು.೧೭

೧೯. ಎ.ಎಸ್.ಪ್ರಭಾಕರ, **ಬುಡಕಟ್ಟುಗಳ ಬದುಕಿನ ಸಿತ್ಯಂತರಗಳು**, ೨೦೦೨, ಪು.೯೩

೨೦. ಸಣ್ಣರಾಮ, **ಲಂಬಾಣಿ ಸಂಸ್ಕೃತಿ**, ೧೯೯೯, ಪು.೮೧

೨೧. ಆರ್.ಎ.ಭಂಡಾರಿ, **ವರ್ಣದಿಂದ ವರ್ಗದ ಕಡೆಗೆ**, ೨೦೦೩, ಪು.೧೭೯

೨೨. ಜಗಜೀವನರಾಮು, **ಜಾತಿ ವ್ಯವಸ್ಥೆ, ಸಮಸ್ಯೆ ಸವಾಲುಗಳು**, ೧೯೯೭, ಪು.೯

೨೩. ಮೊಗಳ್ಳಿ ಗಣೇಶ, **ಶತಮಾನ**, ೨೦೦೦, ಪು.೫೪

೨೪. ಆರ್.ಎ.ಭಂಡಾರಿ, **ವರ್ಣದಿಂದ ವರ್ಗದ ಕಡೆಗೆ**, ಪು.೧೭೧

೨೫. ಎ.ಎಸ್.ಪ್ರಭಾಕರ, **ಡೊಂಬರ ಅಧ್ಯಯನ**, ಪು.೧೫೯

೨೬. ಚಿ.ನ.ಶಂಕರಾವ್, **ಭಾರತೀಯ ಸಮಾಜದ ಅಧ್ಯಯನ**, ೨೦೦೨, ಪು.೧೧೯

ಅಧ್ಯಾಯ ೪

ಸಮಾರೋಪ

೪

ಸಮಾರೋಪ

ಸಾಮಾಜಿಕ ಪರಿವರ್ತನೆಯ ಕಲ್ಪನೆಯು ಮಾನವನ ಸಾಮಾಜಿಕ ಸಂಬಂಧಗಳ ವ್ಯವಸ್ಥೆಯಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಅಥವಾ ಮಾರ್ಪಡುಗಳನ್ನು ಸಂಕೇತಿಸುವುದು ಸಾಮಾಜಿಕ ಸಂಬಂಧಗಳು. ಸಾಮಾಜಿಕ ಪ್ರಕ್ರಿಯೆಗಳು, ಸಾಮಾಜಿಕ ವ್ಯವಸ್ಥೆ ಮತ್ತು ಸಾಮಾಜಿಕ ಸಂಘಟನೆಗೆ ಕಾರಣವಾದ್ದರಿಂದ ಇವುಗಳಲ್ಲಿ ಕಂಡುಬರುವ ಪರಿವರ್ತನೆಯೇ ಸಾಮಾಜಿಕ ಪರಿವರ್ತನೆ ಎಂದು ಅರ್ಥೈಸಲಾಗಿದೆ. ಸಮಾಜದ ರಚನೆ ಮತ್ತು ಕಾರ್ಯಗಳಲ್ಲಿ ಕಂಡುಬರುವ ಬದಲಾವಣೆಯೇ ಸಾಮಾಜಿಕ ಬದಲಾವಣೆ ಎಂದು ಹೇಳಲಾಗಿದೆ.

ಬದಲಾವಣೆ ಎಂಬುವುದು ಹೀಗೆ ನಿತ್ಯ ಪರಿವರ್ತನಾ ಕ್ರಿಯೆ ಹಿಂದಿರುವ ಸಮಾಜ ಹೀಗಿಲ್ಲ. ಹೀಗಿರುವ ಸಮಾಜ ಮುಂದೆ ಇರಲಾರದು. ಮೂಲತಃ ಆದಿವಾಸಿಯಾಗಿದ್ದ ಮಾನವ ಹಂತ ಹಂತವಾಗಿ ತನ್ನನ್ನು ಬದಲಾಯಿಸಿಕೊಳ್ಳುತ್ತ ಇಂದಿನ ಸ್ಥಿತಿಗೆ ಬಂದಿದ್ದಾನೆ. ಹೀಗೆ ಪರಿವರ್ತನೆಯಾಗುತ್ತಾ ಸಮಾನತೆ ಇದ್ದ ಸಮಾಜದಲ್ಲಿ ಸ್ವಾರ್ಥವೆಂಬುವುದು ಅಸಮಾನತೆಯನ್ನು ಹುಟ್ಟು ಹಾಕಿತು. ಸಮುದಾಯ ಸಮುದಾಯಗಳ ನಡುವೆ ಸಮಾಜ ಸಮಾಜಗಳ ನಡುವೆ ಇಂದು ಹೆಚ್ಚಾಗಿ ಗೋಚರವಾಗುತ್ತ ಸೃಷ್ಟಿಯಲ್ಲಿ ಮೇಲು-ಕೀಳು, ಉಳ್ಳವ-ಇಲ್ಲದವ, ಬಡವ-ಶ್ರೀಮಂತ ಎಂಬ ವರ್ಗಗಳು ರೂಪುಗೊಂಡವು.

ಭಾರತದಾದ್ಯಂತ ಚದುರಿದ ಹಕ್ಕಿಪಿಕ್ಕಿಯರು ಅನೇಕ ಹೆಸರುಗಳಿಂದ ಕರೆಸಿಕೊಂಡರು ಆಯಾ ಪ್ರದೇಶದ ಸಂಸ್ಕೃತಿ, ಭಾಷೆಯ ಪ್ರಭಾವ ಅನಿವಾರ್ಯವಾಗಿ ಇವರ ಮೇಲಾಯಿತು. ಅಂದರೆ ಇವರಲ್ಲಿ ಹೆಚ್ಚು ಆಸಕ್ತಿ ಇರುವ ವಿಷಯವೆಂದರೆ ಸುಧಾರಣೆಗೊಳಗಾಗುವ ಬದಲಾವಣೆಯ ಮನೋಭಾವ, ಎಲ್ಲರೊಂದಿಗೆ ಬೆರೆಯಬೇಕು ಎಂಬ ಬಯಕೆ ಈ ಬಯಕೆ ಮೂಲಕ ಸಮಾಜಕ್ಕೆ ತನ್ನಿಂದಾಗುವ ಸೇವೆ ಮಾಡುತ್ತ ಆ ಮೂಲಕ ತಮ್ಮ ಜೀವನ ಮಾರ್ಗವನ್ನು ಕಂಡುಕೊಳ್ಳುವಲ್ಲಿ ಹಕ್ಕಿಪಿಕ್ಕಿಯರು ತೋರಿರುವ ಶ್ರದ್ಧೆ, ದುಡಿಮೆ, ಹೊಂದಾಣಿಕೆ ಮುಂತಾದ ವಿಶೇಷ ಗುಣಗಳನ್ನು ಗುರುತಿಸಬಹುದಾಗಿದೆ. ಆದರೆ ನಾಡಿನ ಜನ ಈ ಜನರ ಮಹಾದಾಸೆಯನ್ನು ಅರಿತು ಸಮಾನತೆ ಸಮಾನ ಅವಕಾಶ ದೊರಕಿಸುವಲ್ಲಿ ಮಾತ್ರ ವಿಫಲವಾಯಿತು ಎಂದು ಹೇಳಬಹುದು. ಆದರೆ ಅಂದಿನಿಂದ ಸಾಮಾಜಿಕ, ರಾಜಕೀಯ, ಧಾರ್ಮಿಕ

ಪರಿಸರ ಹಾಗೂ ಸಾಧಾರಣಾವಾದಿ ಅವಕಾಶಗಳು ಹಕ್ಕಿಪಿಕ್ಕಿಯರಿಗೆ ದೊರೆಯಲಿಲ್ಲ. ಆದರೂ ಕಾಲದಿಂದ ಕಾಲಕ್ಕೆ ಇವರಲ್ಲಿ ಉಂಟಾದ ಅರಿವಿನಿಂದಾಗಿ ಬದುಕಿನಲ್ಲಿ ಉಂಟಾದ ಬದಲಾವಣೆಯನ್ನು ಅರಿಯಬಹುದು.

ಬ್ರಿಟೀಷರು ಈ ದೇಶಕ್ಕೆ ಬಂದ ಮೇಲೆ ಅವರ ಆಡಳಿತ ಕ್ರಮದಿಂದಾಗಿ ಪ್ರಗತಿಯತ್ತ ಸಾಗುತ್ತಿದ್ದ ಈ ಜನ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಬೇಕಾಯಿತು. ಮೂಲ ನೆಲೆಯನ್ನು ಕಳೆದುಕೊಂಡು ಅಲೆಮಾರಿಗಳಾದ ಈ ಜನ ಸಮಾಜದ ನಂಬಿಕೆ ಗಳಿಸಲು ಸಾಧ್ಯವಾಗಲಿಲ್ಲ. ನೆಮ್ಮದಿಯ ತಮ್ಮ ಬದುಕಿಗೆ ಅನೇಕ ವೃತ್ತಿಗಳನ್ನು ಅಳವಡಿಸಿಕೊಂಡರು. ಇವರು ಮಾಡುತ್ತಿದ್ದ ವೃತ್ತಿಗಳು ಇವರ ಬದುಕಿಗೆ ಆಧಾರವಾದುವೇ ಹೊರತು ಆರ್ಥಿಕವಾಗಲಿ ಸಾಮಾಜಿಕವಾಗಲಿ ಮುಂದೆ ಬರಲು ಸಾಧ್ಯವಾಗಲಿಲ್ಲ. ಇತ್ತೀಚಿಗೆ ಸ್ವತಂತ್ರ್ಯನಂತರ ಇನ್ನು ಕೆಲವರು ಬೇಟೆಯನ್ನೇ ನಂಬಿ ಜೀವಿಸುತ್ತಿದ್ದಾರೆ. ಇನ್ನು ಕೆಲವರು ಅನಕ್ಷರಸ್ಥರಾಗಿ ಅಲೆಮಾರಿಗಳಾಗಿ ಅನೇಕ ಜನ ಬಡತನದಲ್ಲಿಯೇ ಬೆಯುತ್ತಿದ್ದಾರೆ.

ಹಬ್ಬ ಹರಿದಿನಗಳಲ್ಲಿ ಆಚರಿಸುವ ಆಚರಣೆಗಳು ಜನರಲ್ಲಿ ಬದಲಾಗಿವೆ. ಮದುವೆ, ಜನನ, ಸಾವು ಹೀಗೆ ಆಚರಿಸುತ್ತಿದ್ದ ಮೂಲದ ಕೆಲವು ಆಚರಣೆಗಳು ಪರಿಸರದ ಪ್ರಭಾವದಿಂದ ಬದಲಾಗಿದ್ದರೂ, ಇನ್ನು ಕೆಲವು ಜೀವಂತವಾಗಿವೆ. ಹಕ್ಕಿಪಿಕ್ಕಿಯರು ತಮ್ಮ ವೃತ್ತಿಯ ಗುಟ್ಟನ್ನು ಬಿಟ್ಟು ಕೊಡುವವರಲ್ಲ.

ಹಕ್ಕಿಪಿಕ್ಕಿಯರು ಆಧುನಿಕತೆಗೆ ಒಳಗಾಗುತ್ತಿದ್ದಾರೆ. ಅವರ ಸಂಚಾರಿ ಬದುಕು, ವ್ಯಾಪಾರ ಇತರ ಕಸುಬು ಇದಕ್ಕೆ ಕಾರಣವಾಗಿದೆ. ಹೊಟ್ಟೆಪಾಡಿಗಾಗಿ ಉದ್ಯೋಗವನ್ನು ಅರಸುತ್ತ ಗ್ರಾಮ ಹಾಗೂ ನಗರಗಳ ಜನರೊಂದಿಗೆ ಸಂಪರ್ಕ ಬೆರೆವುದರಿಂದ ಅವರ ಮನೋವೃತ್ತಿ, ಆಲೋಚನಾ ಸಾಮರ್ಥ್ಯ ಬದಲಾಗುವುದು ಸ್ವಾಭಾವಿಕ. ಹೀಗಾಗಿ ಅವರು ಬದಲಾವಣೆಯನ್ನು ಸಹಜವಾಗಿ ಬಯಸುತ್ತಿದ್ದಾರೆ.

ಕುಡಿತದ ಚಟ ಈ ಜನರನ್ನು ವಿಮುಖರನ್ನಾಗಿ ಮಾಡಿದೆ. ಅದರಿಂದ ಇವರು ಆರ್ಥಿಕವಾಗಿ ತೀವ್ರವಾಗಿ ಮುಂದುವರೆಯಲು ಸಾಧ್ಯವಾಗುತ್ತಿಲ್ಲ. ಇಂತಹ ಸಮುದಾಯದ ಜನರಿಗೆ ಸುಶಿಕ್ಷಿತರು ತಿಳುವಳಿಕೆಯನ್ನು ನೀಡುವುದರ ಮೂಲಕ ಕಡಿಮೆಗೊಳಿಸಬಹುದು.

ಸಾವಿರಾರು ವರ್ಷಗಳಲ್ಲಿ ಕೆಳಸ್ತರದಲ್ಲಿಯೇ ಸಾಗಿ ಬಂದಿರುವ ಹಕ್ಕಿಪಿಕ್ಕಿಯರಿಗೆ ಸಾಮಾಜಿಕ ನ್ಯಾಯ ದೊರೆತಿಲ್ಲ. ಶಿಕ್ಷಣ ಕಡ್ಡಾಯವಾಗಬೇಕು. ಸರ್ಕಾರಿ ಉದ್ಯೋಗಗಳಲ್ಲಿ ಹೆಚ್ಚು ಹೆಚ್ಚು ಅವಕಾಶ ದೊರೆಯುವಂತಾಗಬೇಕು. ಇನ್ನು ಅಲೆಮಾರಿಗಳಾಗಿ ಬದುಕುತ್ತಿರುವವರಿಗೆ ಸರ್ಕಾರ ಜಮೀನು ಒದಗಿಸುವುದಲ್ಲದೆ. ಇವರು ಸ್ವಂತ ದುಡಿಮೆಯಿಂದ ಸ್ವಂತತೆಯಿಂದ ಬಲಿಷ್ಟಗೊಳ್ಳುವಂತೆ ಮಾಡಬೇಕು. ಮಹಿಳೆಯರ ಬದುಕು ಪ್ರಗತಿಯಲ್ಲಿ ಮುನ್ನಡೆಯಲು ವಿಶೇಷವಾದ ಶಿಕ್ಷಣ ವ್ಯವಸ್ಥೆ ಸಾಮಾಜೀಕರಣ ವ್ಯವಸ್ಥೆ ಸಹಕಾರಿ ಸಂಘಗಳ ವ್ಯವಸ್ಥೆ, ಕರಕುಶಲ ವಸ್ತುಗಳ ತಯಾರಿಕೆಗೆ ಬಂಡವಾಳ, ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳುವಂತೆ ತರಬೇತಿಯನ್ನು ನೀಡಬೇಕು.

ಪರಿವಿಡಿಯ ಅಧ್ಯಯನದಲ್ಲಿ ಅಧ್ಯಾಯ ಒಂದು ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನದ ಬಗ್ಗೆ ಅಧ್ಯಯನ ಮಾಡಲಾಗಿದೆ. ಅಧ್ಯಯನದ ಪ್ರಮುಖವಾದ ಉದ್ದೇಶ ಹಕ್ಕಿಪಿಕ್ಕಿ ಸಮುದಾಯದವರು ಸಮಾಜದಲ್ಲಿ ಅವರ ಪಾತ್ರ ಹಾಗೂ ಬದಲಾವಣೆಯ ಅವರ ಜೀವನದಲ್ಲಿ ಎಷ್ಟರ ಮಟ್ಟಿಗೆ ಅವರನ್ನು ಸಮಾಜದಲ್ಲಿ ಗುರುತಿಸುವಂತೆ ಮಾಡಿದೆ ಹಾಗೂ ಅವರಲ್ಲಿ ಯಾವ ರೀತಿಯಲ್ಲಿ ಬದಲಾವಣೆ ಮಾಡಿದೆ. ಕೈಗಾರೀಕರಣ ಅಧುನೀಕರಣ ಜಾಗತೀಕರಣ ಈ ಸಮುದಾಯದ ಮೇಲೆ ಯಾವ ರೀತಿಯಾಗಿ ಪ್ರಭಾವ ಬೀರಿವೆ ಎಂಬ ವಿಷಯಗಳನ್ನು ಗುರುತಿಸಿಕೊಂಡು ಸೂಕ್ತವಾದ ಪರಿಹಾರಗಳನ್ನು ಕಂಡುಕೊಳ್ಳುವುದು ಅಧ್ಯಯನದ ಉದ್ದೇಶವಾಗಿದೆ. ಅಧ್ಯಯನದ ವ್ಯಾಪ್ತಿಯಾಗಿ ಹೊಸಪೇಟೆ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆ ತಾಲೂಕಿನಲ್ಲಿ ಬರುವ ಕಂಪ್ಲಿ, ಕಾರಿಗನೂರು, ಮತ್ತು ಹೊಸಪೇಟೆ ಇವುಗಳನ್ನು ಗೊತ್ತುಪಡಿಸಿಕೊಂಡ ಈ ಪ್ರದೇಶಗಳ ಬಗ್ಗೆ ಸೂಕ್ಷ್ಮವಾದ ಅಧ್ಯಯನವನ್ನು ಕೈಗೊಳ್ಳಲಾಗಿತ್ತು.

ಅಧ್ಯಾಯ ಎರಡರಲ್ಲಿ ಹಕ್ಕಿಪಿಕ್ಕಿ ಸಮಾಜದ ಚಾರಿತ್ರಿಕ ಹಿನ್ನೋಟ ಅಂದರೆ ಅವರು ಮೂಲವಾಗಿ ರಾಜಸ್ಥಾನದಿಂದ ಬಂದವರು ಇಡೀ ಕರ್ನಾಟಕದಾದ್ಯಂತ ಅವರು ಬಂದು ನೆಲೆಸಿರುವರು. ಇವರ ಮೂಲ ನೆಲೆಯಿಂದ ಹೇಗೆ ಬಂದು ನೆಲೆಸಿರುವರು ಎಂಬುವುದರ ಬಗ್ಗೆ ಚಾರಿತ್ರಕ ಹಿನ್ನೆಲೆ ಹಾಗೂ ಐತಿಹ್ಯಗಳನ್ನು ಕೊಡಲಾಗಿದೆ. ಹಾಗೂ ಅವರು ಪರಂಪರಗತವಾಗಿ ಯಾವ ಯಾವ ವೃತ್ತಿಯನ್ನು ಹೊಂದಿದ್ದರು ಹಾಗೂ ಆರ್ಥಿಕ ಚಟುವಟಿಕೆಗಳನ್ನು ಹೊಂದಿದ್ದಾರೆ ಎಂದು ಹೇಳಲಾಗಿದೆ ಹಾಗೂ ಅವರ ಸಂಸ್ಕೃತಿಯಿಂದಾಗಿ ಅವರ ಸಮಾಜದಲ್ಲಾದ ಬದಲಾವಣೆ ಹಾಗೂ ಬದುಕಿನಲ್ಲಿ ಸಂಸ್ಕೃತಿಯ ಮಹತ್ವವನ್ನು ಚರ್ಚಿಸಲಾಗಿದೆ.

ಅಧ್ಯಾಯ ಮೂರಕ್ಕೆ ಹಕ್ಕಿಪಿಕ್ಕಿ ಸಮುದಾಯ ಮತ್ತು ಸಾಮಾಜಿಕ ಆರ್ಥಿಕ ಬದುಕಿನ ಸ್ಥಿತಂತರಗಳು ಎಂಬ ಶೀರ್ಷಿಕೆಯಿದೆ. ಈ ಶೀರ್ಷಿಕೆಯಲ್ಲಿ ನಾಲ್ಕು ಉಪ ಶೀರ್ಷಿಕೆಗಳಿದ್ದು ಒಂದೊಂದು ಶೀರ್ಷಿಕೆಯು ಹಕ್ಕಿಪಿಕ್ಕಿ ಸಮುದಾಯದ ಸ್ಥಿತ್ಯಂತರಗಳು ಸಾಮಾಜಿಕ ಬದಲಾವಣೆ ಎಂದರೇನು? ಹಲವು ಸಮಾಜಶಾಸ್ತ್ರಜ್ಞರು ಹೇಳಿದ ಅರ್ಥವಿವರಣೆಯನ್ನು ಕೊಡಲಾಗಿದೆ. ಹಕ್ಕಿಪಿಕ್ಕಿ ಜನರಲ್ಲಿ ಆರ್ಥಿಕ ಚಟುವಟಿಕೆಗಳಲ್ಲಾದ ಬದಲಾವಣೆಗಳು ಈ ಬದಲಾವಣೆಯಿಂದ ಸಮುದಾಯದ ಮೇಲೆ ಯಾವ ರೀತಿ ಪರಿಣಾಮ ಬೀರುತು ಹಾಗೂ ಅವರು ಎದುರಿಸುವ ತೊಂದರೆಯನ್ನು ಪ್ರಸ್ತಾಪಿಸಲಾಗಿದೆ. ಹಾಗೂ ಸಾಂಸ್ಕೃತಿ ಬದುಕಿನಲ್ಲಾಗಿರುವ ಬದಲಾವಣೆಗಳು ಅವರಲ್ಲಿರುವ ಕಲೆ ಹಾಗೂ ಇತರ ಸಾಂಸ್ಕೃತಿಕ ವಿಷಯಗಳು ಇನ್ನು ಪಾರಂಪರಿಕವಾಗಿ ಅವರ ಜೊತೆಯಲ್ಲಿ ಬಂದರೂ ಆಧುನಿಕರಣದಿಂದ ಇವು ಬದಲಾಗಿವೆ. ಬದಲಾಗಲು ಇರುವ ಅವರ ಆಸೆಗಳು ಹಾಗೂ ಆಶೆಗಳೀಗೆ ಇರುವ ಒತ್ತಡಗಳು ಮತ್ತು ಅನಿವಾರ್ಯತೆಗೆ ಸಂಬಂಧಿಸಿದ ಬಡತನ ನಿರುದ್ಯೋಗ ಅನಕ್ಷರತೆ ಹೀಗೆ ಹಲವು ವಿಷಯಗಳಲ್ಲಿ ಮುಖ್ಯವಾಗಿ ಅನಿವಾರ್ಯತೆಗೆ ಕಾರಣವಾಗಿರುವ ವಿಷಯಗಳನ್ನು ತಿಳಿಸಲಾಗಿದೆ.

ಅಧ್ಯಾಯ ನಾಲ್ಕು ಸಮರೋಪವಿದ್ದು, ಹೊಸಪೇಟೆ ತಾಲೂಕನ್ನು ಅಧ್ಯಯನ ಕೈಗೊಂಡು ಒಂದು ನಿರ್ದಿಷ್ಟ ಪ್ರಶ್ನಾವಳಿಯನ್ನು ರಚಿಸಿಕೊಳ್ಳಲಾಗಿತ್ತು. ಈ ಪ್ರಶ್ನಾವಳಿಯನ್ನು ತೆಗೆದುಕೊಂಡು ಕ್ಷೇತ್ರಕಾರ್ಯವನ್ನು ಮಾಡಿದಾಗ ಅಲ್ಲಿ ಪಡೆದಂತಹ ಮಾಹಿತಿಯನ್ನು ಅಧ್ಯಯನಗಳ ಫಲಿತಗಳಲ್ಲಿ ವಿವರಣೆ ನೀಡಲಾಗಿದೆ. ಹಕ್ಕಿಪಿಕ್ಕಿಯರು ನೆಲೆಸಿರುವ ಕಾಲೋನಿ ಹಾಗೂ ಗ್ರಾಮಗಳ ಅಭಿವೃದ್ಧಿಗಾಗಿ ಅವಶ್ಯಕವಾಗಿರುವಂತಹ ಕೆಲವು ಸಲಹೆಗಳನ್ನು ಕೂಡ ನೀಡಲಾಗಿದೆ. ಕೊನೆಯದಾಗಿ ಅನುಬಂಧಗಳಲ್ಲಿ ಪ್ರಶ್ನಾವಳಿ ಪ್ರಮುಖ ವಕ್ತ್ಯಗಳ ವಿವರ, ಕೋಷ್ಟಕಗಳು, ಗ್ರಂಥ ಋಣ ಹಾಗೂ ಛಾಯಾಚಿತ್ರಗಳನ್ನು ಒದಗಿಸಲಾಗಿದೆ.

ಅಧ್ಯಯನದ ಫಲಿತಗಳು

ಕ್ಷೇತ್ರಕಾರ್ಯಕ್ಕೆಂದು ಆಯ್ದುಕೊಂಡಿರುವ ಹಕ್ಕಿಪಿಕ್ಕಿ ಸಮುದಾಯದವರೊಂದಿಗೆ ಸಂದರ್ಶನ ಮಾಡುವಾಗ ನಿರ್ದಿಷ್ಟ ಪ್ರಶ್ನಾವಳಿಯನ್ನು ರೂಪಿಸಿಕೊಳ್ಳಲಾಗಿತ್ತು. ಈ ಪ್ರಶ್ನಾವಳಿಯಿಂದ ಪಡೆದಂತಹ ಮಾಹಿತಿಯನ್ನು ಸ್ಪಷ್ಟವಾಗಿ ಅವಲೋಕಿಸಿದಾಗ ಮತ್ತು ಈ ಸಂದರ್ಶನದಿಂದ ತಿಳಿದು ಬಂದಂತಹ ಪ್ರಮುಖವಾದ ಅಂಶಗಳನ್ನು ಅಧ್ಯಯನದ ಫಲಿತಗಳಲ್ಲಿ ದಾಖಲಿಸಲಾಗಿದೆ.

೧. ಹಕ್ಕಿಪಿಕ್ಕಿ ಸಮುದಾಯಗಳು ವಾಸಿಸುವ ಪರಿಸರದಲ್ಲಿ ಬದಲಾವಣೆಗಳಾಗುತ್ತಿವೆ. ಮತ್ತು ಸುತ್ತಲಿನ ಪ್ರಭಾವಗಳಿಂದಾಗಿ ತಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಬದಲಾಯಿಸಿಕೊಳ್ಳಲು ಪ್ರಯತ್ನಿಸುತ್ತಿವೆ.

೨. ಶೈಕ್ಷಣಿಕವಾಗಿ ಹಿಂದುಳಿದಿರುವ ಹಾಗೂ ಗ್ರಾಮಗಳಲ್ಲಿ ಹೆಚ್ಚಿನ ಜನರಿಗೆ ಪಿತ್ರಾರ್ಜಿತ ಆಸ್ತಿಗಳಲ್ಲಿ ವ್ಯವಹಾರ ಮಾಡಲು ಬೇಕಾದ ಬಂಡವಾಳವಿಲ್ಲ.

೩. ಅತಿ ಸಮೀಪದ ಬಂಧುಗಳಲ್ಲಿ ಸೀಮಿತವಾಗಿದ್ದ ವೈವಾಹಿಕ ಸಂಬಂಧಗಳು ಹಾಗೂ ಮದುವೆಯಲ್ಲಿ ಬದಲಾವಣೆ ಸಾಮೂಹಿಕವಾಗಿ ಮದುವೆ ಮಾಡಿಕೊಳ್ಳುತ್ತಿರುವುದನ್ನು ಗಮನಿಸಬಹುದು.

೪. ದುಡಿಮೆಯ ದೃಷ್ಟಿಯಲ್ಲಿ ಪುರುಷ-ಸ್ತ್ರೀಯರಲ್ಲಿ ಸಮಾನ ಭಾವನೆ.

೫. ಸಾಕು ಪ್ರಾಣಿಗಳ ಬಗೆಗಿನ ಅದರ ಹಕ್ಕಿ ಪ್ರಾಣಿಗಳ ಬೇಟೆಯ ವೈಶಿಷ್ಟ್ಯ.

೬. ಸ್ವತಂತ್ರ ಜೀವನ ದೃಷ್ಟಿ, ಜೀವನೋಪಾಯಕ್ಕಾಗಿ ಜೀವನ ವೃತ್ತಿಗಳ ಅನುಸರಣೆ.

೭. ಮೊದಲಿನಿಂದಲೂ ಕಂಪನಿ ಆಡಳಿತವು ಈ ಅಲೆಮಾರಿ ಸಮುದಾಯಗಳನ್ನು ಹಲವು ವಿಧಗಳಲ್ಲಿ ಶೋಷಣೆ ಮಾಡಿದೆ.

೮. ಈವತ್ತು ಅಲೆಮಾರಿಗಳಾಗಿರುವವರು ವಸಾಹತು ಆಡಳಿತದ ಅವಧಿಯಲ್ಲಿ ಕ್ರಿಮಿನಲ್ ಪಟ್ಟಿಯಲ್ಲಿ ಇರುವ ಹಲವು ಸಮುದಾಯಗಳಿಗೆ ಕಂಪನಿ ಆಡಳಿತ ಇವುಗಳನ್ನು ಕ್ರೂರವಾಗಿ ನಡೆಸಿಕೊಂಡಿದೆ.

೯. ಹಕ್ಕಿಪಿಕ್ಕಿಯರು ಪಾರಂಪರಿಕ ವೃತ್ತಿಯಲ್ಲಿಯೇ ಮುಂದುವರೆದಿರುವುದರಿಂದ ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸಿಕೊಳ್ಳಲು ವಿಫಲವಾಗಿರುವುದು.

೧೦. ಸಾಮಾಜಿಕ ಬದಲಾವಣೆಯಿಂದ ಪಾರಂಪರಿಕ ವೃತ್ತಿಯಲ್ಲಿ ಯಾವ ಗೌರವವು ಇಲ್ಲದೆ ಆಧುನಿಕ ಶಿಕ್ಷಣ ಪಡೆದು ಇಂದು ಅಸಮುದಾಯದಲ್ಲಿದ್ದ ಕೆಲವು ಜನರು ಸರಕಾರಿ ಉದ್ಯೋಗದಲ್ಲಿರುವವರು ಕೃಷಿಕರಾಗಿ ವ್ಯಾಪಾರಿಗಳಾಗಿ ಬದುಕುತ್ತಿರುವವರು.

೧೧. ಈ ಸಮುದಾಯಗಳಲ್ಲಿ ಮಹಿಳೆಯರಿಗೆ ಶಿಕ್ಷಣ ಕೊಡಿಸುವುದೇ ಅಪರೂಪ. ವಿದ್ಯಾಭ್ಯಾಸವನ್ನು ಕೊಡಿಸಿದರು. ಅದನ್ನು ಮುಂದುವರೆಸಿಕೊಂಡು ಹೋಗುವುದು ಕಷ್ಟವಾಗಿದೆ.

೧೨. ಆರ್ಥಿಕ ಸ್ವಾವಲಂಬನೆ ಹಣಕಾಸು ವ್ಯವಹಾರದಲ್ಲಿನ ಜ್ಞಾನ ಇವರಿಗೆ ಕಡಿಮೆ. ಬಡತನವೇ ಹಾಸು ಹೊಕ್ಕಾಗಿರುವಾಗ ಉನ್ನತ ವಿದ್ಯಾಭ್ಯಾಸ ಕೊಡಿಸುವುದು ಕಷ್ಟವಾಗಿ ಓದುವ ಮನಸ್ಸಿದ್ದರು ಹಣಕಾಸಿನ ತೊಂದರೆಯಿಂದ ಅರ್ಧದಲ್ಲಿಯೇ ಎಷ್ಟು ಜನ ಶಾಲೆಯನ್ನು ಬಿಟ್ಟವರಿದ್ದಾರೆ.

೧೩. ಮೂಢನಂಬಿಕೆಗಳು ಹಾಸು ಹೊಕ್ಕಾಗಿವೆ. ತಮ್ಮ ಮಕ್ಕಳಿಗಾಗಲಿ ತಮಗಾಗಲಿ ಕಾಯಿಲೆ ಬಂದರೂ ಮನೆ ದೇವರ ಹೆಸರಿನಲ್ಲಿ ಭಂಡಾರ ಹಚ್ಚುವ ರೂಢಿ ಇವರಿಗಿದೆ. ಹೀಗೆ ಭಂಡಾರ ಹಚ್ಚುವುದರಿಂದ ದೇವಿ ಪ್ರಸನ್ನರಾಗಿ ರೋಗವನ್ನು ಗುಣವಾಗುವಂತೆ ಮಾಡುತ್ತಾಳೆಂಬ ನಂಬಿಕೆ ಇವರಲ್ಲಿ ಬೇರೂರಿದೆ.

೧೪. ಮಹಿಳೆ ದುಡಿಮೆಯಲ್ಲಿ ನಿರತಳಾಗಿರುವಳು. ಆರೋಗ್ಯದ ಸಮಸ್ಯೆ ಎದುರಿಸುತ್ತಾಳೆ. ತಮ್ಮ ಆರೋಗ್ಯದ ಕಡೆಗೆ ದಿವ್ಯವಾದ ನಿರ್ಲಕ್ಷವನ್ನು ತೋರುತ್ತಾರೆ.

೧೫. ಕೆಳಜಾತಿಯವರೇ ಎಂದೆನಿಸಿರುವ ಇವರು ಸಾಮಾಜಿಕ ವ್ಯವಸ್ಥೆಯಲ್ಲಿ ಇವರ ಸ್ಥಾನಮಾನ ಕೆಳಮಟ್ಟದ್ದಾಗಿದೆ.

೧೬. ಇವರನ್ನು ಸಂದರ್ಶಿಸಿದ್ದಾಗ ಇಂದಿಗೂ ಕೂಡ ಇವರನ್ನು ಅಸ್ಪಶ್ಯರಂತೆಯೇ ಕಾಣಲಾಗುತ್ತದೆ. ಸನಾತನ ಕಾಲದಿಂದಲೂ ನಡೆದುಬಂದಿರುವಂತಹ ಅಸ್ಪಶ್ಯತೆಯಿಂದ ಇಂದಿಗೂ ಕೂಡ ತಲ್ಲಣಗೊಳ್ಳುತ್ತಿದ್ದಾರೆ. ಮೇಲ್ಜಾತಿಯವರ ಮನೆಯ ಸ್ವಚ್ಛತೆಯ ಕೆಲಸವೆಲ್ಲಾ ಇವರದೇಯಾದರೂ ಮನೆಯ ಒಳಗಡೆ ಇವರಿಗೆ ಪ್ರವೇಶ ನಿಷೇಧವಿರುವುದು ಸಂದರ್ಶನದಿಂದ ತಿಳಿದುಬಂದಿದೆ.

ಅನುಬಂಧಗಳು

೧. ಗ್ರಂಥಋಣ

೨. ಫಲಾನುಭವಿಗಳ ಮಾಹಿತಿ ಪಟ್ಟಿ

೩. ಛಾಯಾಚಿತ್ರಗಳು

ಗ್ರಂಥಋಣ

೧. ಅಂಬೇಡ್ಕರ್ ಬಿ.ಆರ್., **ಜಾತಿ ಸತಿ ಮತ್ತು** ಮಹಿಳೆ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, ೨೦೦೦

೨. ಅರ್ಜುನ ಗೊಳಸಂಗಿ, **ದಲಿತ ಬದುಕು ಮತ್ತು ಸಂಸ್ಕೃತಿ,** ವಿಮೋಚನಾ ಪ್ರಕಾಶನ, ಅಥಣಿ, ೨೦೦೦

೩. ಅನಂತ ಹುಯಿಲಗೋಳರ, **ಸ್ವತಂತ್ರ ಭಾರತದಲ್ಲಿ ನಾವಿನೂ ಗುಲಾಮರೇ,** ರಾಜೀವಗಾಂಧಿನಗರ, ಗದಗ

೪. ಕಾಳೇಗೌಡ ನಾಗವಾರ, **ಗಿರಿಜನ ಸಂಸ್ಕೃತಿ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

೫. ಗುರುಪ್ರಸಾದ ಸಿ.ಟಿ., **ಹಗೇವ ಜಾನಪದ ಅಧ್ಯಯನ ಲೇಖನಗಳು,** ಸಿ.ವಿ.ಜಿ.ಪ್ರಕಾಶನ, ಬೆಂಗಳೂರು, ೨೦೦೩

೬. ಚಂದ್ರಶೇಖರ ಟಿ.ಆರ್., **ದಲಿತ ಅಧ್ಯಯನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೭. ಚಲುವರಾಜು, **ಜುಂಜಪ್ಪನ ಮಹಾಕಾವ್ಯ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೮. ಚಂದ್ರಕಾಂತ ಪೋಕಳಿ, **ಮರಾಠಿ ದಲಿತ ರಂಗಭೂಮಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೯. ಚಿನ್ನಸ್ವಾಮಿ ಸೋಸಲೆ, **ನಮ್ಮ ಗ್ರಾಮಗಳು ಅಂದು-ಇಂದು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೧೦. ಜಗಜೀವನರಾಮ, **ಜಾತಿ ವ್ಯವಸ್ಥೆ ಸಮಸ್ಯೆ ಸವಾಲುಗಳು,** ಅನುಭವ ಪ್ರಕಾಶನ, ಗುಲಬರ್ಗಾ, ೧೯೯೯

೧೧. ಜಾಜಿ ದೇವೇಂದ್ರಪ್ಪ, **ಆಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು,** ವಿಕಾಸ ಪ್ರಕಾಶನ, ೨೦೦೪

೧೨. ತಿಪ್ಪೇಸ್ವಾಮಿ ಜಿ.ಆರ್., **ಮೌಖಿಕ ಕಥನ,** ವಿಜಯಲಕ್ಷ್ಮೀ ಪ್ರಕಾಶನ, ಕುವೆಂಪುನಗರ, ಮೈಸೂರು

೧೩. ತಪಸ್ವೀಕುಮಾರ ನ., **ಸಂಸ್ಕೃತಿ ವಿಕಾಸ,** ಜೆ.ಎಸ್.ಎಸ್.ಪ್ರಕಾಶನ, ಮೈಸೂರು, ೨೦೦೦

೧೪. ನಾಗಲೋಟಿ ಮಠ ಸ.ಜ., **ಉತ್ತರ ಕರ್ನಾಟಕದಲ್ಲಿ ಪ್ರಾಣಿ ಬಲಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೫. ನಾಯಕ ಡಿ.ಬಿ., **ದೇಶಿ ಸಂಸ್ಕೃತಿ,** ಬಂಜರು ಪ್ರಕಾಶನ, ಗುಲಬರ್ಗಾ, ೨೦೦೨

೧೬. ಪ್ರಭಾಕರ ಎ.ಎಸ್., **ಆದಿವಾಸಿ ಆಖ್ಯಾನ,** ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೬

೧೭. ಪ್ರಭಾಕರ ಎ.ಎಸ್., **ಡೊಂಬರು ಒಂದು ಚಾರಿತ್ರಿಕ ಹಿನ್ನೋಟ,** ಡಿ.ವಿ.ಎಸ್.ಚಂದ್ರಕಾಂತ ಪ್ರಕಾಶನ, ೨೦೦೬

೧೮. ಪ್ರಭಾಕರ ಎ.ಎಸ್., **ಬುಡಕಟ್ಟು ಅಭಿವೃದ್ಧಿ ಮೀಮಾಂಸೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೧೯. ಪ್ರಹ್ಲಾದ ಅಗಸನಕಟ್ಟೆ, **ದಲಿತ ಬಂಡಾಯ ಕಾವ್ಯ ಮತ್ತು ವಿಚಾರವಾದಗಳು,** ಹರ್ಷ ಪ್ರಕಾಶನ, ಹುಬ್ಬಳಿ, ೨೦೦೪

೨೦. ಪೆರಂಜ್ಯೋತಿ, **ಬೆಟ್ಟ ಸಾಲಿನ ಮೋಡಿ,** ಇಂಚರ ಪ್ರಕಾಶನ, ಬೆಂಗಳೂರು, ೨೦೦೫

೨೧. ಫ್ರೆಡರಿಕ್ ಎಂಗಲ್ಸ್, **ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯಗಳ ಉಗಮ,** ೧೮೯೧

೨೨. ಭಂಡಾರಿ ಆರ್.ವಿ., **ವರ್ಣದಿಂದ ವರ್ಗದ ಕಡೆಗೆ,** ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು, ೨೦೦೩

೨೩. ಭಗವತ ಶರಣ ಉಪಾಧ್ಯಯ, **ಭಾರತೀಯ ಐತಿಹಾಸಿಕ ವಿಶ್ಲೇಷಣೆ,** ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೧೯೮೬

೨೪. ಮಹಾದೇವಯ್ಯ ಪಿ., **ದಲಿತ ಭಾಷೆ ಮತ್ತು ಸಮಾಜ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೨೫. ಮೇತ್ರಿ ಕೆ.ಎಂ., **ಬುಡಕಟ್ಟು ಕುಲಕಸುಬು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೨೬. ಮಹಾಶ್ವೇತಾದೇವಿ, ಶ್ರೀಮತಿ ಎಚ್.ಎಸ್., **ಬೇಟೆ,** ಸಿ.ವಿ.ಜಿ. ಪ್ರಕಾಶನ, ಬೆಂಗಳೂರು, ೨೦೦೦

೨೭. ಮೊಗಳ್ಳಿ ಗಣೇಶ, **ದಲಿತ ಚಿಂತನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೨೮. ಮೊಗಳ್ಳಿ ಗಣೇಶ, **ಶತಮಾನ,** ಲೋಹಿಯ ಪ್ರಕಾಶನ, ಬಳ್ಳಾರಿ, ೨೦೦೦

೨೯. ಮೋಹನಕೃಷ್ಣ ರೈ ಕೆ., **ವಸಾಹತುಶಾಹಿ ಮತ್ತು ನಗರೀಕರಣ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೩೦. ಮರಳುಸಿದ್ಧಯ್ಯ ಎಚ್.ಎಂ., **ಕಪ್ಪು ಮೋಡದಲ್ಲೊಂದು ಬಳ್ಳಿರೇಖೆ**, ೧೯೭೩

೩೧. ಮೇತ್ರಿ ಕೆ.ಎಂ., **ಕೃಷ್ಣ ಗೋಲ್ಲರ ಕಥನ ಕಾವ್ಯಗಳು**, ವೆಂಕಟೇಶ ಪ್ರಕಾಶನ, ಬೆಂಗಳೂರು

೩೨. ರಾಜಶೇಖರಯ್ಯ ಎ.ಎಂ., **ಡಾ.ಬಾಬಾ ಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು**, ಸಂಪುಟ ೧೨, ಭಾಗ ೨, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೯

೩೩. ರಂಗರಾಜು ವನದುರ್ಗ, **ದಲಿತ ಸಂವೇದನೆ**, ಸಿ.ವಿ.ಜಿ.ಪ್ರಕಾಶನ, ಬೆಂಗಳೂರು, ೨೦೦೪

೩೪. ರಮೇಶ ಸ.ಚಿ., **ಬೇಟೆ ಸಾಂಸ್ಕೃತಿಕ ಪದಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೩೫. ರಮೇಶ ಸ.ಚಿ., **ಅಲೆಮಾರಿಗಳ ಸ್ಥಿತಿಗತಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೩೬. ರಮೇಶ ಸ.ಚಿ., **ಶಿಕಾರಿ ಪರಂಪರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೩೭. ರಾಮಯ್ಯ ಬಿ.ಪಿ., **ದಕ್ಷಿಣ ಕರ್ನಾಟಕದ ಕೊರವರ ಒಂದು ಸಾಂಸ್ಕೃತಿಕ ಅಧ್ಯಯನ**, ಮಾನಸ ಪ್ರಕಾಶನ, ಕುಮಟಾ, ೨೦೦೨

೩೮. ರಂಗನಾಥನಂದಸ್ವಾಮಿ, **ಪರಿವರ್ತನೆಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು**, ವಿನಾಯಕ ಪ್ರಿಂಟರ್ಸ್, ಬೆಂಗಳೂರು

೩೯. ರಾಮಸ್ವಾಮಿ ಅಯ್ಯರ ಸಿ.ಸಿ., **ಯುಗಯಾತ್ರೆ ಭಾರತೀಯ ಸಂಸ್ಕೃತಿ**, ಸಂಪುಟ ೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೧

೪೦. ರಾಧಕೃಷ್ಣನ ಸರ್ವೆಪಲ್ಲಿ, **ಯುಗಯಾತ್ರ**, ಭಾರತೀಯ ಸಂಸ್ಕೃತಿ ಸಂಪುಟ ೧, ೧೯೭೦

೪೧. ವೆಂಕಟೇಶ ಇಂದ್ವಾಡಿ, **ದೇವ ದೇವಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೪೨. ಶಾಲಿನಿ ರಘುನಾಥ, **ಜಾನಪದ ಸಾಹಿತ್ಯದರ್ಶನ**, ಭಾಗ ೨೪, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೪

೪೩. ಶರ್ಮ ಆರ್.ಎಸ್., **ಪ್ರಾಚೀನ ಭಾರತದಲ್ಲಿ ಶೂದ್ರರು**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೪

೪೪. ಶರ್ಮಾ ಆರ್.ಎಸ್., **ಸಾಮಾಜಿಕ ಚಳುವಳಿ ಮತ್ತು ಬದಲಾವಣೆ**, ೨೦೦೭

೪೫. ಶೈಲಜಾ ಹಿರೇಮಠ, **ಮಾತೃಪ್ರಧಾನ ಪರಿಕಲ್ಪನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೪೬. ಸುಧಾಕರ, **ಜನಪದ ನುಡಿಕಟ್ಟುಗಳ ಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೪೭. ಸತ್ಯನಾಯಕ ಎ.ಎಂ., **ಉತ್ತರ ಕರ್ನಾಟಕ ಮದುವೆ ಸಂಪ್ರದಾಯಗಳು**, ಶ್ರೀ ಎಸ್.ಅನಿಲಕುಮಾರ್, ಹಳೇಪೇಟೆ, ಬಾಗಲಕೋಟೆ, ೨೦೦೦

೫೦. ಸಾನೆ ಗುರೂಜಿ, **ಭಾರತೀಯ ಸಂಸ್ಕೃತಿ**, ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು, ೨೦೦೧

ವಿಶ್ವಕೋಶಗಳು

೧. ಕರುಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ, ೨೦೦೦

೨. ಕರ್ನಾಟಕ ಜನಪದ ಕಲೆಗಳ ಕೋಶ, ೧೯೯೬

೩. ಧರ್ಮ, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ, ೨೦೦೦

೪. ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ, ೨೦೦೧

೫. ಜಾನಪದ ವಿಷಯ ವಿಶ್ವಕೋಶ, ಸಂಪುಟ ೧, ೨೦೦೬

೬. ಕನ್ನಡ ವಿಷಯ ವಿಶ್ವಕೋಶ, ಸಂಪುಟ ೧, ೨೦೦೫

೭. ಕನ್ನಡ ವಿಷಯ ವಿಶ್ವಕೋಶ, ಸಂಪುಟ ೧, ೨೦೦೭

ಹೊಸಪೇಟೆ ತಾಲೂಕಿನ ಹಕ್ಕಿಪಿಕ್ಕಿ ಸಮುದಾಯದವರ ಫಲಾನುಭವಿಗಳ ಮಾಹಿತಿ ಪಟ್ಟಿ

ಕ್ರ ಸಂ	ಫಲಾನುಭವಿಗಳ ಹೆಸರು ಮತ್ತು ತಂದೆ ಹೆಸರು	ಬೆಡಗು	ವಯಸ್ಸು	ವೃತ್ತಿ	ಜನಸಂಖ್ಯೆ			ಸೈಟು ಇದೆ ಇಲ್ಲ	ವಾರ್ಷಿಕ ಆದಾಯ
					ಗಂ	ಹೆಣ್ಣು	ಒಟ್ಟು		
1	ದೊಡ್ಡ ಲಕ್ಷ್ಮಪ್ಪ, ತಂ : ಗುಲಾಲಿ	ಕೊಡಿಯಾರ್	37	ಕೂಲಿ	2	1	3		9000-00
2	ಗುಲಾಲಿ, ತಂ : ಚಂಗ್ರು	ಕೊಡಿಯಾರ್	62	ಕೂಲಿ	1	1	2		8000-00
3	ಮುನ್ನಿಂದ, ತಂ : ಮಹಾಲಿ	ಕೊಡಿಯಾರ್	42	ಕೂಲಿ	1	1	2		7000-00
4	ಸಣ್ಣ ಲಕ್ಷ್ಮಪ್ಪ, ಗಂ : ಗುಲಾಲಿ	ಕೊಡಿಯಾರ್	30	ಕೂಲಿ	1	3	4		8000-00
5	ಸಣ್ಣ ಶಿವ, ತಂ : ಗುಲಾಲಿ	ಕೊಡಿಯಾರ್	27	ಆಟೋ ಚಾಲಕ	1	1	2		9000-00
6	ಶಿವ, ತಂ : ಗುಲಾಲಿ	ಕೊಡಿಯಾರ್	29	ಆಟೋ ಚಾಲಕ	1	1	2		9000-00
7	ಅಂಬಿರಾ	ಕೋರ್ಬಿಯಾ	42	ಕೂಲಿ	3	4	7		8000-00
8	ಬಗಸಿ, ತಂ : ಬಿರಾವಿ	ಕೋರ್ಬಿಯಾ	62	ಕೂಲಿ	1	1	2		7000-00
9	ಬೋತಾರ್, ತಂ : ಅಂಬಿರ್	ಕೋರ್ಬಿಯಾ	24	ಆಟೋ ಚಾಲಕ	1	1	2		7000-00
10	ಚತ್ತಾರ್, ತಂ : ಅಂಬೀರ	ಕೋರ್ಬಿಯಾ	37	ಕೂಲಿ	1	2	3		8000-00
11	ನಸರಿ, ತಂ : ಅಂಬೀರ	ಕೋರ್ಬಿಯಾ	42	ಕೂಲಿ	4	3	7		9000-00
12	ಗೋಪಿ, ತಂ : ಅಂಬೀರ	ಕೋರ್ಬಿಯಾ	28	ರಿಕ್ಷಾ ಚಾಲಕ	1	1	2		8500-00
13	ಗೋಪಿ, ತಂ : ಅಂಬೀರ	ಕೋರ್ಬಿಯಾ	26	ಆಟೋ ಚಾಲಕ	1	1	2		9500-00
14	ಮಮ್ಮುಲಿ, ತಂ : ಅವಲಿ	ಪಿಂಪಲಾಜ	32	ಕೂಲಿ	2	1	3		8000-00
15	ಮಂಜೂಲ್, ತಂ : ಅವಲಿ	ಪಿಂಪಲಾಜ	52	ಕೂಲಿ	1	1			8000-00
16	ಸಜಿನಿ, ತಂ : ಮಮ್ಮುಲಿ	ಪಿಂಪಲಾಜ	32	ಕೂಲಿ	1	3	4		7000-00

ಕಾರಿಗನೂರಿನ ಹಕ್ಕಿಪಿಕ್ಕಿ ಸಮುದಾಯದವರ ಫಲಾನುಭವಿಗಳ ಮಾಹಿತಿ ಪಟ್ಟಿ

ಕ್ರ ಸಂ	ಫಲಾನುಭವಿಗಳ ಹೆಸರು ಮತ್ತು ತಂದೆ ಹೆಸರು	ಬೆಡಗು	ವಯಸ್ಸು	ವೃತ್ತಿ	ಜನಸಂಖ್ಯೆ			ಸೈಟು ಇದೆ ಇಲ್ಲ	ವಾರ್ಷಿಕ ಆದಾಯ
					ಗಂ	ಹೆಣ್ಣು	ಒಟ್ಟು		
1	ಅಂಜು ತಂ : ಜತ್ತು	ಹರಕತ್ರೀಯ	32	ಕೂಲಿ	1	1	2		9.000-00
2	ಅವಲು ತಂ : ಸೀನು	ಹರಕತ್ರೀಯ	72	ಕೂಲಿ	1	1	2		8.000-00
3	ಬಾಬು ತಂ : ಜತ್ತು	ಹರಕತ್ರೀಯ	23	ಕೂಲಿ	1	1	2		9.000-00
4	ಫಯಾಜು ತಂ : ಗಾದ್ದಿ	ಹರಕತ್ರೀಯ	52	ಕೂಲಿ	3	3	6		9.000-00
5	ಆವಲೊ ತಂ : ಜಮ್ಲ	ಹರಕತ್ರೀಯ	37	ಕೂಲಿ	4	2	6		7.000-00
6	ಹನುಮಂತ ತಂ : ಮನಸಿರಿ	ಹರಕತ್ರೀಯ	22	ಕೂಲಿ	1	1	2		9.000-00
7	ಜೋಗತ್ಯಾ ತಂ : ಮನಸಿರಿ	ಹರಕತ್ರೀಯ	42	ಕೂಲಿ	3	7	10		9.500-00
8	ಮಾರುತಿ ತಂ : ಜೋಗತ್ಯ	ಹರಕತ್ರೀಯ	27	ಕೂಲಿ	1	1	2		7.500-00
9	ನೀಲುಕು ತಂ : ಜಮ್ಲ	ಹರಕತ್ರೀಯ	52	ಕೂಲಿ		1	1		8.000-00
10	ರಾಮು ತಂ : ಬುದುಲ್ಲಾ	ಹರಕತ್ರೀಯ	37	ಕೂಲಿ	2	1	3		9.000-00
11	ರನ್ನ. ತಂ : ದನ್ಯ	ಹರಕತ್ರೀಯ	42	ಕೂಲಿ	4	1	5		7.000-00
12	ಸಜರಾ ತಂ : ಸೀಬು	ಹರಕತ್ರೀಯ	52	ಕೂಲಿ	2	2	4		7.500-00
13	ಸೀಬು ತಂ : ಸಿರಾಜ್	ಹರಕತ್ರೀಯ	37	ಕೂಲಿ	4	1	5		8.500-00
14	ಬಾಬು ತಂ : ಗದ್ದಿ	ಕೋರಬಿಯಾ	42	ಕೂಲಿ	1	3	4		9.000-00
15	ಬೀಕುಲ ತಂ : ಅಂಜಲ್ಯ	ಕೋರಬಿಯಾ	77	ಕೂಲಿ	2	1	3		7.000-00
16	ಸೂರಿಯಾ ತಂ : ಪೌಜ	ಕೋರಬಿಯಾ	20	ಕೂಲಿ	1	1	2		7.000-00
17	ಬಿಂಕು ತಂ : ಅನ್ನು	ಕೋರಬಿಯಾ	42	ಕೂಲಿ	2	1	3		9.000-00
18	ಅಕ್ಕ ಗಂ : ದಾಜೋ	ಸೌಂದ್ಯ	72	ಕೂಲಿ	1	6	7		9.000-00
19	ಅನ್ನು ತಂ : ಸನ್ನಸಿಂಗ್	ಸೌಂದ್ಯ	77	ಕೂಲಿ	1	1	2		8.000-00
20	ಬಾಬು ತಂ ; ಲೌಗು	ಸೌಂದ್ಯ	37	ಕೂಲಿ	1	6	7		7.500-00
21	ಬಲ್ಲಿ ತಂ : ಅಚಿತು	ಸೌಂದ್ಯ	50	ಕೂಲಿ	3	5	8		7.500-00
22	ಬೇಸೋ ತಂ : ಅಚಿತು	ಸೌಂದ್ಯ	52	ಕೂಲಿ	3	4	7		8.000-00
23	ಬಜಾಕು ಗಂ : ಲೌಗು	ಸೌಂದ್ಯ	62	ಕೂಲಿ		1	1		9.500-00
24	ಪೈಜು ತಂ : ಬಲ್ಲಿ	ಸೌಂದ್ಯ	62	ಕೂಲಿ	1	2	3		9.000-00
25	ಗಣೇಶ ತಂ : ಬಲ್ಲಿ	ಸೌಂದ್ಯ	22	ಕೂಲಿ	1	1	2		8.000-00

ಕಾರಿಗನೂರಿನ ಹಕ್ಕಿಪಿಕ್ಕಿ ಸಮುದಾಯದವರ ಫಲಾನುಭವಿಗಳ ಮಾಹಿತಿ ಪಟ್ಟಿ

ಕ್ರ ಸಂ	ಫಲಾನುಭವಿಗಳ ಹೆಸರು ಮತ್ತು ತಂದೆ ಹೆಸರು	ಬೆಡಗು	ವಯಸ್ಸು	ವೃತ್ತಿ	ಜನಸಂಖ್ಯೆ			ಸೈಟು ಇದೆ ಇಲ್ಲ	ವಾರ್ಷಿಕ ಆದಾಯ
					ಗಂ	ಹೆಣ್ಣು	ಒಟ್ಟು		
26	[illegible], ತಂ : ಲೌಗು	ಸೌಂದ್ಯ	37	ಕೂಲಿ	1	2	3		9,000-00
27	[illegible] ತಂ : ಬಲ್ಲ	ಸೌಂದ್ಯ	52	ಕೂಲಿ	1	1	2		9,500-00
28	[illegible] ಗಂ : ಬಸಪ್ಪ	ಸೌಂದ್ಯ	62	ಕೂಲಿ	1	2	3		7,500-00
29	ಹಾಲಾಸಿಂಗ ತಂ : ಅನ್ನು	ಸೌಂದ್ಯ	40	ಕೂಲಿ	4	2	6		8,000-00
30	[illegible] ತಂ : ಶಂಕರ ಸಿಂಗ್	ಸೌಂದ್ಯ	72	ಕೂಲಿ	1	1	2		9,000-00
31	ಹನುಮಂತಿ ತಂ : ಅಚ್ಚಿ	ಸೌಂದ್ಯ	47	ಕೂಲಿ	4	3	7		7,000-00
32	[illegible] ತಂ : ಬೇಸೋ	ಸೌಂದ್ಯ	27	ಕೂಲಿ	1	1	2		7,500-00
33	[illegible] ತಂ : ಅನ್ನು	ಸೌಂದ್ಯ	52	ಕೂಲಿ	1	2	3		8,500-00
34	[illegible] ತಂ : ಹಂತು	ಸೌಂದ್ಯ	37	ಕೂಲಿ	1	4	5		9,000-00
35	[illegible] ತಂ : ಹಂತು	ಸೌಂದ್ಯ	42	ಕೂಲಿ	3	5	8		7,000-00
36	[illegible] ತಂ : ಹನುಮಂತಿ	ಸೌಂದ್ಯ	52	ಕೂಲಿ	1	1	2		7,000-00
37	[illegible] ಗಂ : ಬಸಪ್ಪ	ಸೌಂದ್ಯ	62	ಕೂಲಿ		1	1		9,000-00
38	[illegible] ತಂ : ಗದ್ದಿ	ಸೌಂದ್ಯ	52	ಕೂಲಿ	5	1	6		[illegible]
39	[illegible] ಗಂ : ಪೌಲು	ಸೌಂದ್ಯ	82	ಕೂಲಿ	2	2	4		8,000-00
40	[illegible] ತಂ : ಚಂದು	ಸೌಂದ್ಯ	42	ಕೂಲಿ	1	3	4		7,500-00

ಕಂಪ್ಲಿ ಶಿಕಾರಿ ಕಾಲೋನಿಯ ಹಕ್ಕಿಪಿಕ್ಕಿ ಸಮುದಾಯದವರ ಫಲಾನುಭವಿಗಳ ಮಾಹಿತಿ ಪಟ್ಟಿ

ಕ್ರ ಸಂ	ಫಲಾನುಭವಿಗಳ ಹೆಸರು ಮತ್ತು ತಂದೆ ಹೆಸರು	ಬೆಡಗು	ವಯಸ್ಸು	ವೃತ್ತಿ	ಜನಸಂಖ್ಯೆ			ಸ್ವಂತ ಇದೆ ಇಲ್ಲ	ವಾರ್ಷಿಕ ಆದಾಯ
					ಗಂ	ಹೆಣ್ಣು	ಒಟ್ಟು		
26	ಬಸಪ್ಪ, ತಂ : ಹೀರು	ಕೊರುಬಿಯಾ	37	ಕೂಲಿ	1	1	2		7,000-00
27	ಬಸಪ್ಪ, ತಂ : ಲೆಕು	ಕೊರುಬಿಯಾ	27	ಕೂಲಿ	3	2	5		7,500-00
28	ಬೆಶನಾ ತಂ : ದೊಡ್ಡ ಈರಣ್ಣ	ಕೊರುಬಿಯಾ	37	ಕೂಲಿ	2	1	3		8,500-00
29	ಚಂಗು, ತಂ : ದೊಡ್ಡ ಕೌಲಿ	ಕೊರುಬಿಯಾ	47	ಕೂಲಿ	2	3	5		9,000-00
30	ಮಾದೇವಿ, ಗಂ : ಶ್ರೀಕಾಂತ್	ಕೊರುಬಿಯಾ	38	ಕೂಲಿ	1	1	2		7,000-00
31	ಗೋಪಿ, ತಂ : ಧನ್ನ	ಕೊರುಬಿಯಾ	27	ಕೂಲಿ	1	2	3		7,000-00
32	ಧರ್ಮ, ತಂ: ಬಯ್ಯಾರಪ್ಪ	ಕೊರುಬಿಯಾ	28	ಕೂಲಿ	1	2	3		9,000-00
33	ದೊಡ್ಡ ಸತ್ತಾರ್ ಸಿಂಗ್, ತಂ : ಜಲ್ಲು	ಕೊರುಬಿಯಾ	32	ಕೂಲಿ	3	3	6		9,000-00
34	ಇಮಾಜು, ತಂ : ನಾನಾ ಸಿಂಗ್	ಕೊರುಬಿಯಾ	37	ಕೂಲಿ	1	3	4		8,000-00
35	ಈರಣ್ಣ, ತಂ : ಶಕೀವಾರ್	ಕೊರುಬಿಯಾ	32	ಕೂಲಿ	1	2	3		7,500-00
36	ಗಂಗಪ್ಪ, ತಂ : ಲೆಕು	ಕೊರುಬಿಯಾ	30	ಕೂಲಿ	1	1	2		7,500-00
37	ಗಂಗಪ್ಪ, ತಂ : ಸಣ್ಣ ಕೌಲಿ	ಕೊರುಬಿಯಾ	42	ಕೂಲಿ	3	2	5		8,000-00
38	ಗಂಗು, ತಂ : ತಾನ್ನಿ	ಕೊರುಬಿಯಾ	47	ಕೂಲಿ	2	1	3		9,500-00
39	ಗಿತ್ತ ಕಸ್ತೂರಿ, ತಂ : ಲೆಕು	ಕೊರುಬಿಯಾ	37	ಕೂಲಿ	2	5	7		9,000-00
40	ಕೌಲಿ, ತಂ : ದೊಡ್ಡ ಧನ್ನ	ಕೊರುಬಿಯಾ	27	ಕೂಲಿ	1	1	2		8,000-00
41	ಗೋಪಿ, ತಂ : ಲೆಕ್ಕು	ಕೊರುಬಿಯಾ	25	ಕೂಲಿ	1	1	2		7,500-00
42	ಗೋಪಿ, ತಂ : ರಾಮಣ್ಣ	ಕೊರುಬಿಯಾ	32	ಕೂಲಿ	3	2	5		8,000-00
43	ಹಿಮುಜು, ತಂ : ಮೋತಿರಾಂ	ಕೊರುಬಿಯಾ	32	ಕೂಲಿ	1	1	2		9,500-00
44	ಜಾಲು, ತಂ : ಪೂಜಾರಿ ಹೀರು	ಕೊರುಬಿಯಾ	25	ಕೂಲಿ	1	1	2		9,000-00
45	ಜಾನಿ, ತಂ : ಭೈರಪ್ಪ	ಕೊರುಬಿಯಾ	22	ಕೂಲಿ	1	1	2		8,000-00
46	ಕಸ್ತುರ್, ತಂ : ಮೋತಿರಾಂ	ಕೊರುಬಿಯಾ	42	ಕೂಲಿ	1	2	3		7,500-00
47	ಕೌಲಿ, ತಂ : ಧಾನ್ಯ	ಕೊರುಬಿಯಾ	30	ಕೂಲಿ	2	4	6		8,000-00
48	ಲಕ್ಷ್ಮಣ್, ತಂ ಶಿವಪ್ಪ	ಕೊರುಬಿಯಾ	30	ಕೂಲಿ	2	2	4		9,500-00
49	ಲೆಕು, ತಂ : ದೊಡ್ಡ ಕೌಲಿ	ಕೊರುಬಿಯಾ	52	ಕೂಲಿ	3	4	7		9,000-00
50	ಟೋನಾಕ್ಷಮ್ಮ, ಗಂ : ರಮೇಶ	ಕೊರುಬಿಯಾ	37	ಕೂಲಿ	1	5	6		8,000-00

ಕಂಪ್ಲಿ ಶಿಕಾರಿ ಕಾಲೋನಿಯ ಹಕ್ಕಿಪಿಕ್ಕಿ ಸಮುದಾಯದವರ ಫಲಾನುಭವಿಗಳ ಮಾಹಿತಿ ಪಟ್ಟಿ

ಕ್ರ ಸಂ	ಫಲಾನುಭವಿಗಳ ಹೆಸರು ಮತ್ತು ತಂದೆ ಹೆಸರು	ಬೆಡಗು	ವಯಸ್ಸು	ವೃತ್ತಿ	ಜನಸಂಖ್ಯೆ ಗಂ	ಹೆಣ್ಣು	ಒಟ್ಟು	ಸೈಟು ಇದೆ ಇಲ್ಲ	ವಾರ್ಷಿಕ ಆದಾಯ
51	ಮೋತಿ, ತಂ : ಪೂಜಾರಿ ಹೀರು	ಕೊರುಬಿಯಾ	27	ಕೂಲಿ	1	1	2		7,000-00
52	ನಾಗೇಶ್, ತಂ : ಭೈರಪ್ಪ	ಕೊರುಬಿಯಾ	27	ಕೂಲಿ	1	1	2		7,500-00
53	ನಾನ್ ಸಿಂಗ್, ತಂ : ಬೀಸನ್	ಕೊರುಬಿಯಾ	42	ಕೂಲಿ	1	1	2		8,500-00
54	ಪೂಜಾರಿ ಹೀರು, ತಂ : ಜಲ್ಲು	ಕೊರುಬಿಯಾ	42	ಕೂಲಿ	5	4	9		9,000-00
55	ಪೂಜಾರಿ ಶಂಕ್ರ, ತಂ : ಜಲ್ಲು	ಕೊರುಬಿಯಾ	42	ಕೂಲಿ	5	3	8		7,000-00
56	ಪೂಜಾರಿ ದೊಡ್ಡ ಲಕ್ಷ್ಮಪ್ಪ, ತಂ : ಶಂಕರ್	ಕೊರುಬಿಯಾ	67	ಕೂಲಿ	1	1	2		7,000-00
57	ರಾಜಮ್ಮ, ಗಂ : ಭೈರಪ್ಪ	ಕೊರುಬಿಯಾ	47	ಕೂಲಿ	1	2	3		9,000-00
58	ರಾಜು, ತಂ : ರಾಮಚಂದ್ರ	ಕೊರುಬಿಯಾ	22	ಕೂಲಿ	1	1	2		9,000-00
59	ರಾಮಚಂದ್ರ, ತಂ : ನಾನ್ ಸಿಂಗ್	ಕೊರುಬಿಯಾ	52	ಕೂಲಿ	5	2	7		8,000-00
60	ಶಕುಂತಲಮ್ಮ, ಗಂ : ನಾನ್ ಸಿಂಗ್	ಕೊರುಬಿಯಾ	62	ಕೂಲಿ	2	1	3		7,500-00
61	ಸಣ್ಣ ಹೀರಾ, ತಂ : ಜಲ್ಲು	ಕೊರುಬಿಯಾ	27	ಕೂಲಿ	1	1	2		7,500-00
62	ಸಣ್ಣ ಸತ್ತಾರ್ ಸಿಂಗ್, ತಂ : ಜಲ್ಲು	ಕೊರುಬಿಯಾ	30	ಕೂಲಿ	2	1	3		8,000-00
63	ಸಣ್ಣ ಜಲ್ಲು, ತಂ : ದೊಡ್ಡ ಈರಣ್ಣ	ಕೊರುಬಿಯಾ	42	ಕೂಲಿ	1	1	2		9,500-00
64	ಸಣ್ಣ ಕಸ್ತೂರಿ, ತಂ : ಮೋತಿರಾಂ	ಕೊರುಬಿಯಾ	37	ಕೂಲಿ	1	3	4		9,000-00
65	ದುರ್ಜಾ, ತಂ : ಶಾಕೀದಾರ್	ಕೊರುಬಿಯಾ	65	ಕೂಲಿ	2	3	5		8,000-00
66	ಸುರೇಶ್, ತಂ : ರಾಮಚಂದ್ರ	ಕೊರುಬಿಯಾ	26		1	1	2		7,000-00
67	ಅಂಜನಿ, ತಂ : ಸೌರಾಡ್	ಪಿಂಪಲಾಜ	27		2	1	3		9,000-00
68	ಮಸ್ತಿ, ತಂ : ಸಂಗಪ್ಪ	ಪಿಂಪಲಾಜ	25		1	1	2		9,000-00
69	ಮೋಹನ್, ತಂ : ದೊಡ್ಡ ಮಲ್ಲಪ್ಪ	ಪಿಂಪಲಾಜ	42		1	1	2		8,000-00
70	ಮೋಹನ್, ತಂ : ಸಂಗಪ್ಪ	ಪಿಂಪಲಾಜ	29		1	2	3		7,500-00
71	ಮೋಹನ್, ತಂ : ಯಶವಂತ	ಪಿಂಪಲಾಜ	25		1	1	2		7,500-00
72	ರಾಮ್ ಸಿಂಗ್, ತಂ : ಕಂನೂರ್	ಪಿಂಪಲಾಜ	47		1	1	2		8,000-00
73	ಸಂಗಪ್ಪ, ತಂ : ಮಲ್ಲಪ್ಪ	ಪಿಂಪಲಾಜ	62		2	1	3		9,500-00
74	ಎಸ್.ಮೋತಿ, ತಂ : ಸೌರಾಡ್	ಪಿಂಪಲಾಜ	30		1	2	3		9,000-00
75	ಸೌರಾಡ್, ತಂ : ಕಂನೂರ್	ಪಿಂಪಲಾಜ	52		1	1	2		8,000-00

ಕಂಪ್ಲಿ ಶಿಕಾರಿ ಕಾಲೋನಿಯ ಹಕ್ಕಿಪಿಕ್ಕಿ ಸಮುದಾಯದವರ ಫಲಾನುಭವಿಗಳ ಮಾಹಿತಿ ಪಟ್ಟಿ

ಕ್ರ. ಸಂ.	ಫಲಾನುಭವಿಗಳ ಹೆಸರು ಮತ್ತು ತಂದೆ ಹೆಸರು	ಬೆಡಗು	ವಯಸ್ಸು	ವೃತ್ತಿ	ಜನಸಂಖ್ಯೆ: ಗಂ	ಹೆಣ್ಣು	ಒಟ್ಟು	ಸೈಟು ಇದೆ ಇಲ್ಲ	[illegible]ರ್ಷಿಕ ಆದಾಯ
76	[illegible] ತಂ : ರಾವ್ ಸಿಂಗ್	ಕೊರುಬಿಯಾ	25	ಕೂಲಿ	1	1	2		9,500-00
77	[illegible]ವಂತ್, ತಂ : ಬಲರಾಂ	ಕೊರುಬಿಯಾ	72	ಕೂಲಿ	2	1	3		9,000-00
78	ಅಂಜಿನಿ, ತಂ : ಕಂಸಪ್ಪ	ಸೌಂದ್ಯ	35	ಕೂಲಿ	2	1	3		8,000-00
79	ಅಂಜಿನಿ, ತಂ : ಶಿಪ್ಪು	ಸೌಂದ್ಯ	25	ಆಟೋ ಡ್ರೈವರ್	1	1	2		7,000-00
80	ಭಹದಿ ತಂ : ಅಂಜಿನಪ್ಪ	ಸೌಂದ್ಯ	42	ಕೂಲಿ	3	3	6		9,000-00
81	ಭಹದಿ, ತಂ : ಕಂಸಪ್ಪ	ಸೌಂದ್ಯ	37	ಕೂಲಿ	5	3	8		9,000-00
82	ಬಾಲಪ್ಪ, ತಂ : ಮನ್ನೆಪ್ಪ	ಸೌಂದ್ಯ	30	ಆಟೋ ಡ್ರೈವರ್	1	1	2		8,000-00
83	ಬಸಪ್ಪ, ತಂ : ಚಂದ್ರಪ್ಪ	ಸೌಂದ್ಯ	47	ಕೂಲಿ	3	2	5		7,500-00
84	ಭಹಿಜಾ, ತಂ : ಮನ್ನೆಪ್ಪ	ಸೌಂದ್ಯ	26	ಆಟೋ	1	1	2		7,500-00
85	ಗೋವಿಂದ, ತಂ : ವನವರ್	ಸೌಂದ್ಯ	37	ಕೂಲಿ	2	2	4		8,000-00
86	ಹಾಲ್ ಸಿಂಗ್, ತಂ : ಬಾಲಪ್ಪ	ಸೌಂದ್ಯ	62	ಕೂಲಿ	1	1	2		9,500-00
87	ಹೆಚ್.ಪಿ.ಶಿಕಾರಿ ರಾಮು, ತಂ : ಕಂಸಪ್ಪ	ಸೌಂದ್ಯ	28	ವ್ಯಾಪಾರ	1	1	2		9,000-00
88	ಕಂಸಪ್ಪ, ತಂ : ಬಹದ್ದೂರ್	ಸೌಂದ್ಯ	62	ಕೂಲಿ	2	1			8,000-00
89	ಕಂಪ್ಲಿ, ತಂ : ಶಂಕ್ರು	ಸೌಂದ್ಯ	47	ಕೂಲಿ	2	2	4		8,000-00
90	ಲಚ್ಚು, ತಂ : ಬಹದ್ದೂರ್	ಸೌಂದ್ಯ	52	ಕೂಲಿ	1	1	2		7,500-00
91	ಲಚ್ಚು ತಂ : ಶಂಕ್ರು	ಸೌಂದ್ಯ	37	ಕೂಲಿ	1	1	2		7,500-00
92	[illegible], ತಂ : ಬಹದಿ	ಸೌಂದ್ಯ	62	ಕೂಲಿ	3	2	5		[illegible],000-00
93	ಮಂತು ತಂ : ಹಾಲ್ ಸಿಂಗ್	ಸೌಂದ್ಯ	42	ಕೂಲಿ	3	3	6		9,500-00
94	ನಾಗಿ ತಂ : ಮಾಂತು	ಸೌಂದ್ಯ	25	ಆಟೋ	1	1	2		9,000-00
95	ರಾಮು, ತಂ : ಅಂಜಿನಪ್ಪ	ಸೌಂದ್ಯ	30	ಆಟೋ	2	2	4		8,000-00
96	ರಾಮು, ತಂ : ಕಂಸಪ್ಪ	ಸೌಂದ್ಯ	32	ಕೂಲಿ	2	1	3		7,500-00
97	[illegible]	ಸೌಂದ್ಯ	37	ಕೂಲಿ	2	1	3		8,000-00
98	ಪತುಸ್ಕ ತಂ : ಅಂಜಿನಪ್ಪ	ಸೌಂದ್ಯ	37	ಕೂಲಿ	2	2	4		9,500-00
99	[illegible], ತಂ : ಅಂಜಿನಪ್ಪ	ಸೌಂದ್ಯ	27	ಕೂಲಿ	1	1	2		9,000-00
100	ಶಿಪ್ಪು ತಂ : ಮುರಾರಿ	ಸೌಂದ್ಯ	57	ಕೂಲಿ	3	3	6		8,000-00

ಕಂಪ್ಲಿ ಶಿಕಾರಿ ಕಾಲೋನಿಯ ಹಕ್ಕಿಪಿಕ್ಕಿ ಸಮುದಾಯದವರ ಫಲಾನುಭವಿಗಳ ಮಾಹಿತಿ ಪಟ್ಟಿ

ಕ್ರ ಸಂ	ಫಲಾನುಭವಿಗಳ ಹೆಸರು ಮತ್ತು ತಂದೆ ಹೆಸರು	ಬೆಡಗು	ವಯಸ್ಸು	ವೃತ್ತಿ	ಜನಸಂಖ್ಯೆ			ಸೈಟು ಇದೆ ಇಲ್ಲ	ವಾರ್ಷಿಕ ಆದಾಯ
					ಗಂ	ಹೆಣ್ಣು	ಒಟ್ಟು		
101	ಎಸ್.ಶಂಕ್ರು, ತಂ : ಅಂಜಿನಪ್ಪ	ಸೌಂದ್ಯ	25	ಕೂಲಿ	1	2	3		9,500-00
102	ಸುಬ್ಬು ತಂ : ಮುರಾರಿ	ಸೌಂದ್ಯ	47	ಕೂಲಿ	2	3	5		9,000-00
103	ತಮ್ಮಿ, ತಂ : ಭಾಧಿ	ಸೌಂದ್ಯ	25	ಆಟೋ	1	1	2		8,000-00
104	ಹೆಚ್.ಪಿ.ನಾಗರಾಜ, ತಂ : ಕಂಸಪ್ಪ	ಸೌಂದ್ಯ	25	ಆಟೋ	1	1	2		7,000-00
105	ಬಾಲಪ್ಪ, ತಂ : ಮಾಂತು	ಸೌಂದ್ಯ	23	ಆಟೋ ಚಾಲಕ	1	1	2		9,000-00
106	ರಾಮಚಂದ್ರ, ತಂ : ಬಸಪ್ಪ	ಕೊರಬಿಯ	25	ಕೂಲಿ	1	1	2		9,000-00
107	ಮೋಹನ್ ತಂ : ಯಶವಂತ್	ಜಿಂಪಲಾಜ	22	ಕೂಲಿ	1	1	2		8,000-00
108	ಅಂಬಿರ್, ತಂ : ಸಕೇದ್ವರ್	ಕೊರಬಿಯ	24	ಆಟೋ	1	3	4		7,500-00
109	ಲಾಲ್ಲಿ, ತಂ : ಸಣ್ಣ ಶಿವಪ್ಪ	ಕೊರಬಿಯ	22	ಆಟೋ	1	2	3		7,500-00
110	ಗಂಗಪ್ಪ, ತಂ : ಸಣ್ಣ ಕಾಲ್ಗಿ	ಕೊರಬಿಯ	40	ಕೂಲಿ	4	3	7		8,000-00
111	ಜಾಂಗು, ತಂ : ಗಂಗಪ್ಪ	ಕೊರಬಿಯ	25	ಕೂಲಿ	2	1	3		9,500-00
112	ಮೈನಮ ಗಂ : ಶೆಟ್ಟಿಗಿ	ಕೊರಬಿಯ	22	ಕೂಲಿ	2	2	4		9,000-00
113	ಮರುತಿ, ತಂ : ಅಂಜಿನಪ್ಪ	ಸವಡಿಯ	24	ಕೂಲಿ	2	2	4		8,000-00
114	ಬಂದ್ರಿ ತಂ : ಸಣ್ಣ ಶಿವಪ್ಪ	ಸವಡಿಯ	24	ಕೂಲಿ	1	2	3		8,000-00
115	ರಾಮು, ತಂ : ಮನೋಹರ	ಕೊರಬಿಯ	29	ಕೂಲಿ	3	2	5		7,500-00
116	ಅಂಜಿನಿ ಹೆಚ್.ಪಿ. ತಂ : ರಾಮಣ್ಣ	ಸವಡಿಯ	31	ಕೂಲಿ	1	1	2		7,500-00
117	ಮಾರುತಿ, ತಂ : ರಾಮಚಂದ್ರಪ್ಪ	ಕೊರಬಿಯ	24	ಕೂಲಿ	2	1	3		8,000-00
118	ಜೆಸೆನ್ ತಂ : ರಾಮಣ್ಣ	ಕೊರಬಿಯ	25	ಕೂಲಿ	1	1	2		9,500-00
119									9,000-00
120									8,000-00
121									7,500-00
122									8,000-00
123									9,500-00
124									9,000-00
125									8,000-00



೧. ಹಕ್ಕಿಯನ್ನು ಹೊಡೆಯುತ್ತಿರುವ ಹಕ್ಕಿಪಿಕ್ಕಿಯ ಯುವಕ



೨. ಬೇಟೆಗೆ ಸಿದ್ಧನಾಗಿರುವ ಹಕ್ಕಿಪಿಕ್ಕಿಯ ಯುವಕ



೩. ಬೇಟೆಗೆ ಹೊರಟಿರುವ ಹಕ್ಕಿಪಿಕ್ಕಿಯ ಯುವಕ



೪. ಬೇಟೆಗೆ ಹೊರಟಿರುವ ಹಕ್ಕಿಪಿಕ್ಕಿಯ ಸಾಮೂಹಿಕ ಗುಂಪು



೫. ಬಲಿಹಾಕುತ್ತಿರುವ ದೃಶ್ಯ



೬. ಬೇಟೆಯಿಂದ ತಂದ ಪ್ರಾಣಿಗಳು





೮. ಪೂಜೆಗೆ ಸಿದ್ಧಪಡಿಸಿರುವ ದೃಶ್ಯ



೯. ಪೂಜಾರಿಯು ಕಾಯ್ದ ಎಣ್ಣೆಯಲ್ಲಿ ಕೈಹಾಕುತ್ತಿರುವ ದೃಶ್ಯ



೧೦. ದೇವರ ಕಾರ್ಯಕ್ಕೆ ಸಿದ್ಧರಾಗಿರುವ ಪೂಜಾರಿಗಳು



೧೧. ಹಕ್ಕಿಪಿಕ್ಕಿಯರು ಹಿಂದೆ ಆಚರಿಸುತ್ತಿದ್ದ ಮದುವೆಯ ಭಾವಚಿತ್ರ



೧೨. ಹಕ್ಕಿಪಿಕ್ಕಿಯರ ವಧುವರರು ಮದುವೆಗೆ ಸಿದ್ಧರಾಗಿರುವುದು



೧೩. ಪ್ರಸ್ತುತ ದಿನದಲ್ಲಿ ನಡೆದ ಸಾಮೂಹಿಕ ಮದುವೆ



೧೪. ಝೂಂಜಾ ಬಾರಿಸುತ್ತಿರುವ ಹಕ್ಕಿಪಿಕ್ಕಿಯ ಯುವಕರು



೧೫. ಸಾಂಸ್ಕೃತಿಕ ದಿಬ್ಬಣಕ್ಕೆ ಹೊರಟ ಮೆರವಣಿಗೆ



೧೬. ಶಿಕಾರಿರಾಮು ಅವರ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ
ಸಿದ್ಧರಾಗಿರುವ ಹಕ್ಕಿಪಿಕ್ಕಿಯ ಯುವಕ ಯುವತಿಯರು



೧೭. ಕಾಲೊನಿಯಲ್ಲಿ ಕೂಡಿಸಿದ ಗಣೇಶ ಮೂರ್ತಿ



೧೮. ದಿನನಿತ್ಯದ ಕಾರ್ಯದಲ್ಲಿ ತೊಡಗಿರುವ ಹಕ್ಕಿಪಿಕ್ಕಿಯರು



೧೯. ನ್ಯಾಯ ತೀರ್ಮಾನದಲ್ಲಿ ತೊಡಗಿರುವ ಹಕ್ಕಿಪಿಕ್ಕಿ ಜನರು



೨೦. ನ್ಯಾಯ ತೀರ್ಮಾನದ ನಂತರ ಗುಂಪಾಗಿ ಚರ್ಚಿಸುತ್ತಿರುವ ಜನರು



೨೧. ಶಾಲೆಗೆ ಹೊರಟಿರುವ ಹಕ್ಕಿಪಿಕ್ಕಿ ಸಮುದಾಯದ ಮಕ್ಕಳು

ಪ್ರಜಾವಾಣಿ ಪತ್ರಿಕೆಯ ವರದಿ ೦೨.೦೬.೨೦೦೮

ಗ್ರೀಷ್ಮ ರಂಗೋತ್ಸವದ ಅಂಗವಾಗಿ ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಜೂ. 3ರಂದು ಚಾಮರಾಜನಗರದ ರಂಗವಾಹಿನಿ ತಂಡದವರು ಅಭಿನಯಿಸುವ ಶ್ರೀಪತಿ ಮಂಜನಬೈಲು ನಿರ್ದೇಶನದ ಬೆಸುಗೆಗೊಳ್ಳದ ಹಳಿಗಳು ನಾಟಕ ಪ್ರದರ್ಶನವಿದೆ.

ಪ್ರೊ. ಅಣ್ಣಾ ಸಾಹೇಬ ಮಂಗುರಕರ ಹಾಗೂ ಆತನ ಶಿಷ್ಯ ಮಲ್ಲಯ್ಯ ಸ್ವಾಮಿ ಹಿರೇಮಠದ ನಡುವಿನ ಸಂಬಂಧಗಳನ್ನು ಅನಾವರಣಗೊಳಿಸುತ್ತ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ನಾಟಕವಿದು. ಬದುಕಿನಲ್ಲಿ ಎದುರಾಗುವ ಅಡೆತಡೆಗಳನ್ನೂ ಎದುರಿಸಿ ತನ್ನ ಬದುಕನ್ನೇ ಪ್ರಯೋಗ ಭೂಮಿಯಾಗಿಸಿ ಕೊಂಡು ಗೆಲ್ಲುವ ಶಿಷ್ಯ ಮತ್ತು ಅವನ ಬದುಕಿಗೆ ಪ್ರೇರಣೆ ನೀಡಿದ್ದ ಗುರು ಮುಂದೊಂದು ದಿನ ಪರಸ್ಪರ ಭೇಟಿಯಾದಗ ಅವರಿಬ್ಬರ ಸಂಬಂಧಗಳು ಬಿಚ್ಚಿಕೊಳ್ಳುತ್ತವೆ.

ಅಷ್ಟೇ ಅಲ್ಲ ಎರಡು ವೈರುಧ್ಯ ಪಾತ್ರಗಳು ಘರ್ಷಣೆಗೊಳಗಾಗಿ ಸತ್ಯ ಅನಾವರಣಗೊಳ್ಳುತ್ತದೆ. ಇದಕ್ಕೆ ಸಾಕ್ಷಿಯಾಗಿ ಕಿಟ್ಟಪ್ಪ ನಿಲ್ಲುತ್ತಾನೆ. ಉಪದೇಶಕ್ಕಾಗಿ ಹೇಳುವ ರೀತಿನೀತಿಗಳು, ಆಚರಣೆಯಲ್ಲಿ ಒಗ್ಗುವ ನಡೆನುಡಿಗಳು- ಇವುಗಳ ಅಂತರ ಅರ್ಥವಾಗುತ್ತಾ ಹೋಗುವ ನಾಟಕವಿದು.

ನಟ, ನಾಟಕಕಾರ, ಕಥೆಗಾರ ಮತ್ತು ಉತ್ತಮ ಅನುವಾದಕರಾಗಿರುವ ಡಿ.ಸಿ.ಚೌಗಲೆ ದೇಸಿ ಸತ್ಯ ಮತ್ತು ಸಂಸ್ಕೃತಿಗಳ ಅಪಾರ ಕಾಳಜಿ ಉಳ್ಳವರು. ಕಳೆದ 29 ವರ್ಷಗಳಿಂದ ಕ್ರಿಯಾಶೀಲರಾಗಿ ರಂಗ ನಿರಂತತೆಗೆ ಸಾಕ್ಷಿಯಾಗಿ ನಿಂತ ತಂಡ ಬೆಳಗಾವಿಯ 'ರಂಗಸಂಪದ'. ರಂಗಶಿಬಿರಗಳು, ವಿಚಾರ ಸಂಕಿರಣಗಳು, ನಾಟಕೋತ್ಸವಗಳ ಮೂಲಕ ವಿಶೇಷ ಗಮನ ಸೆಳೆದ ತಂಡವಿದು. ಹಿರಿಯ ಮತ್ತು ಕಿರಿಯ ನಟರ ಅಭಿನಯವಿರುವ ಈ ನಾಟಕದ ಬೆಳಕು ವಿನಯ ಕುಲಕರ್ಣಿ,ಪ್ರಸಾಧನ ಮತ್ತು ಸಂಗೀತ ಗಜಾನನ ಮಹಾಲೆ ಮತ್ತು ಶ್ರೀಪತಿ ಮಂಜನ ಬೈಲು.

ರಂಗಾಯಣದಲ್ಲಿ ಹಕ್ಕಿಪಿಕ್ಕಿ ಕುಣಿತ

ರಂಗಾಯಣ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ವನರಂಗದಲ್ಲಿ ಜೂ.2ರಂದು ನಡೆಯುವ ನಾಡಸಿರಿ ಕಾರ್ಯಕ್ರಮದಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಲ್ಲೂಕು ಕಂಪ್ಲಿಯ ಹಕ್ಕಿಪಿಕ್ಕಿ ಕಲಾವಿದ ಶಿಕಾರಿರಾಮು ತಂಡದವರಿಂದ ಹಕ್ಕಿಪಿಕ್ಕಿ ಬುಡಕಟ್ಟು ಜನಪದ ನೃತ್ಯ ಸಂಜೆ 6.30ಕ್ಕೆ ಪ್ರದರ್ಶನವಿದೆ.

ಎಲ್ಲ ಬುಡಕಟ್ಟು ಜನಾಂಗಕ್ಕೆ ಸೇರಿದ ಜನಪದ ಕಲಾವಿದರಂತೆ ಹಕ್ಕಿಪಿಕ್ಕಿ ಬುಡಕಟ್ಟು ಜನಾಂಗದ ಜನರೂ ತಮ್ಮದೇ ಆದ ರೀತಿಯಲ್ಲಿ ತಮ್ಮ ಸಮೂಹದ ಮನೋರಂಜನೆಗೆ ರೂಢಿಸಿಕೊಂಡ ಹಕ್ಕಿಪಿಕ್ಕಿ ಜಾನಪದ ಕುಣಿತ ಈ ಜನಾಂಗ



ಅಲೆ ಮಾರಿ ಜನಾಂಗ ಆಗಿರುವುದರಿಂದ ಈ ಹಿಂದೆ ಹೇಗಿತ್ತೋ ಸರಿಯಾದ ದಾಖಲೆಗಳು ದೊರಕುತ್ತಿಲ್ಲ. ಇತ್ತೀಚೆಗೆ ಝಾಂಜ ಮಾದರಿ ವಾದ್ಯಗಳೊಂದಿಗೆ ಕುಣಿಯುವುದನ್ನು ರೂಢಿಸಿಕೊಂಡಿದ್ದಾರೆ. ಮೂಲಭೂತವಾಗಿ ಶಿಕಾರಿ ಮಾಡಿ ಹೊಟ್ಟೆ ಹೊರೆಯುವ ಈ ಜನಾಂಗ ವೃತ್ತಿಯಾದ ಶಿಕಾರಿ ಮಾದರಿ ಕುಣಿತ ಇವರ ವಿಶೇಷ.

ಜೂ. 9ರಂದು ಶಹಜಾನ್ ನೇತೃತ್ವದ ಸಾಯಿ ಕಲಾತಂಡ, ಕೊಣ್ಣರು ತಾಲ್ಲೂಕು ನರಗುಂದರಿಂದ ಪಿರಮಿಡ್ ಮುಳ್ಳು ಹೆಜ್ಜೆ ಕುಣಿತ ಕಾರ್ಯಕ್ರಮವಿದೆ. ಭಾನುವಾರ ವಾರಂತ್ಯ ರಂಗಪ್ರದರ್ಶನದಲ್ಲಿ ಬೆಳಗಾವಿಯ ರಂಗಸಂಪದ ತಂಡದಿಂದ ಬೆಸುಗೆಗೊಳ್ಳದ ಹಳಿಗಳು ನಾಟಕ ಪ್ರದರ್ಶನವಿದೆ. ಶಿರೀಷ್ ಜೋಶಿ ಅವರ ಕಥೆ ಹಾಗೂ ಶೀಪ್ರತಿ ಮಂಜನ ಬೈಲು ನಿರ್ದೇಶಿಸಿದ್ದಾರೆ.

-ಶ್ರೀಕಂಠ ಗುಂಡಪ್ಪ